ಬಂದಿದೆ. ಆದರೆ ಇನ್ನೂ ಜಡ್ಜ್‌ಮೆಂಟ್ ಹೊರಗಡೆ ಬಂದಿಲ್ಲ. ದಯವಿಟ್ಟು ಅದನ್ನು ತರಿಸಿಕೊಂಡು ನೋಡಿ. ಸಾಮಾನ್ಯ ಕಾನೂನಿನಲ್ಲಿ ಚೀಟಿಂಗ್ ಆಗುತ್ತದೆ. ಈಗಾಗಲೇ ನೀವು ಎಕನಾಮಿಕ್ ಕೋರ್ಟ್ ಮಾಡಿದ್ದೀರಿ. ಎಕನಾಮಿಕ್ ಅಫೆನ್ಸ್‌ಗಳಿಗೆ ಸಂಬಂಧಪಟ್ಟಂತೆ ಸೆಪರೇಟ್ ಮ್ಯಾಜಿಸ್ಟ್ರೇಟ್ ಇದ್ದಾರೆ. ಈ ಮ್ಯಾಜಿಸ್ಟ್ರೇಟ್‌ಗೆ ಈ ಕಾನೂನಿನಲ್ಲಿ ಇಂಥವರನ್ನು ಕೊಡುವುದಕ್ಕೆ ಸಾಧ್ಯವಾದರೆ ಕಳುಹಿಸಿಕೊಡಬಹುದು. ಇದಕ್ಕೆ ಸೆಪರೇಟ್ ಕಾನೂನು ಬೇಕು ಎಂದೇನೂ ಇಲ್ಲ. ಈಗಾಗಲೇ ಕರ್ನಾಟಕದಲ್ಲಿ ಎಕನಾಮಿಕ್ ಅಫೆನ್ಸ್‌ಗಳಿಗೆ ಬೇರೆ ಜಡ್ಜ್‌ಗಳನ್ನು ಮಾಡಿದ್ದಾರೆ. ಅವರ ಮುಂದೆ ಇಂಥ ಅಫೆನ್ಸ್‌ಗಳು ಬರುತ್ತವೆ. ಆದುದರಿಂದ ಅವರ ಮುಂದೆ ಹೋದರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಇದನ್ನೂ ಕೂಡ ತಾವು ಪರಿಶೀಲಿಸಬೇಕು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಈಗ ಏನು ಸಲಹೆ ಮಾಡಿದ್ದಾರೆ, ಅದರ ಬಗ್ಗೆಯೂ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 3 ಗಂಟೆಗೆ ಪುನರ್ ಸಮಾವೇಶಗೊಳ್ಳುತ್ತದೆ.

(ಸದನವು ವಿರಾಮಕ್ಕಾಗಿ 2-05 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಪುನಃ ಮಧ್ಯಾಹ್ನ 3.20ಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದರು

5. ನಿಲುವಳಿ ಸೂಚನೆ

ಅಧ್ಯಕ್ಷರು: ರಾಜ್ಯದಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸದನ ಸಮಿತಿಯು ಕೊಟ್ಟಿರುವ ಮಧ್ಯಂತರ ವರದಿಯ ಬಗ್ಗೆ ಈಗ ಪ್ರಸ್ತಾಪ ಮಾಡುತ್ತಾರೆ.

ರಾಜ್ಯದಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸದನ ಸಮಿತಿಯು ಕೊಟ್ಟಿರುವ ಮಧ್ಯಂತರ ವರದಿಯ ಬಗ್ಗೆ ಪ್ರಸ್ತಾಪ: (ಅನುಮತಿ ಕೋರಿ ಚರ್ಚೆ)

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಜಂಟಿ ಸದನ ಸಮಿತಿಯು ಇಡೀ ರಾಜ್ಯದಲ್ಲಿ ಅಡ್ಡಾಡಿ ವರದಿಯನ್ನು ಕೊಡಬೇಕು ಎನ್ನತಕ್ಕಂಥಾದ್ದು ತೀರ್ಮಾನವಾಗಿತ್ತು. ಆದರೆ ಕಾರಣಾಂತರಗಳಿಂದ ಅಂದರೆ

ಸಮಯದ ಅಭಾವ ಹಾಗೂ ಶಾಸನ ಸಭೆಯೂ ಇದ್ದ ಕಾರಣ ಆ ಸಮಿತಿಗೆ ಇಡೀ ರಾಜ್ಯದಲ್ಲಿ ಅಡ್ಡಾಡಲು ಆಗಲಿಲ್ಲ. ರಾಜ್ಯದಲ್ಲಿ ಆದಂಥ ಬೆಳೆ ಹಾನಿಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳ ಬಗ್ಗೆ ನೇಮಿಸಿದ್ದ ವಿಧಾನಮಂಡಲದ ಜಂಟಿ ಸದನ ಸಮಿತಿಯು ಅಧ್ಯಯನ ಮಾಡಿ ತನ್ನ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ಸದರಿ ಸಮಿತಿಯು ಮಾಡಿರುವ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವನ್ನು ಕುರಿತು ಚರ್ಚಿಸಬೇಕು ಎಂದು ನಾನು ಈ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. ಆದರೆ ತಾವು ಅದರ ಅಗತ್ಯವಿಲ್ಲವೆಂದು ಹೇಳಿ, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು, ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಕ್ಕಾಗಿ ನಾನು ಅದನ್ನು ನಿಲುವಳಿ ಸೂಚನೆ ಎಂದು ಪರಿಗಣಿಸದೆ, ಇದನ್ನು ಚರ್ಚೆಗೆ ತೆಗೆದುಕೊಂಡಿರುವುದು ನಿಯಮ 69ರ ಅಡಿಯಲ್ಲಿ ಎಂದು ನಾನು ತಿಳಿದುಕೊಳ್ಳುತ್ತೇನೆ. ಮತ್ತು ಈ ವಿಷಯ ಬಹಳ ಮಹತ್ವದ್ದಾದ ಕಾರಣ ಅನೇಕ ಸದಸ್ಯರಿಗೆ ಇದರಲ್ಲಿ ತಾವೂ ಪಾಲ್ಗೊಳ್ಳಬೇಕು ಎನ್ನುವ ಇಚ್ಛೆ ಮತ್ತು ಆಸೆಯೂ ಕೂಡ ಇದೆ.

ಅಧ್ಯಕ್ಷರು: ಇದನ್ನು ನಾವು ಹೀಗೆ ಮಾಡಿಕೊಳ್ಳಬಹುದು. ಪ್ರಮುಖವಾದ ಒಂದಿಬ್ಬರು ಮಾತನಾಡಿ, ಸರ್ಕಾರ ಏನು ಉತ್ತರ ಕೊಡುತ್ತದೆಯೋ, ಕೊಡಲಿ. ಕೃಷಿ ಇಲಾಖೆಯ ಬೇಡಿಕೆಯೂ ಇರುವುದರಿಂದ ಬೇಡಿಕೆಯಲ್ಲಿ ಉಳಿದವರು ಮಾತನಾಡಲು ಅವಕಾಶ ಕೊಡುತ್ತೇನೆ. ಕೃಷಿ ಮತ್ತು ತೋಟಗಾರಿಕೆ ಬೇಡಿಕೆಗಳ ಮೇಲೆ ವ್ಯಾಪಕವಾದ ಚರ್ಚೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಇದರ ಬಗ್ಗೆ ಯಾರು ಯಾರು ಮಾತನಾಡುತ್ತಾರೋ ಇವರಿಗೆ ತಾವು ಅವಕಾಶ ಮಾಡಿಕೊಡಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರು ಸಲಹೆ ಮಾಡಿರುವ ಹಾಗೆ ಇವತ್ತು ಕೃಷಿ ಇಲಾಖೆಯ ಬೇಡಿಕೆಗಳನ್ನು ನಾನು ಇಲ್ಲಿ ಮಂಡಿಸಬೇಕಾಗಿದೆ. ನಂತರ ವಿಸ್ತಾರವಾದ ಚರ್ಚೆಯಾಗಬೇಕಾಗಿದೆ. ಇದು ಕೃಷಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರವಾಗಿರುವುದರಿಂದ ವಿಸ್ತಾರವಾದ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ಮತ್ತು ಎಲ್ಲಾ ಮಾನ್ಯ ಸದಸ್ಯರು ಭಾಗವಹಿಸುವುದಕ್ಕೆ ಅವಕಾಶವಿರುತ್ತದೆ. ಇದರ ಬಗ್ಗೆ ನಿಲುವಳಿ ಸೂಚನೆ ತಂದರೆ, ನಮ್ಮ ನಿಯಮಾವಳಿ ಪ್ರಕಾರ, ಯಾರು ರುಜು ಮಾಡಿರುತ್ತಾರೋ ಅವರಿಗೆ ಪ್ರಾಶಸ್ತ್ಯ ಸಿಗುತ್ತದೆ. ಬೇರೆಯವರು ಮಾತನಾಡಬಾರದು ಎಂದೇನೂ ಇಲ್ಲ. ಆದರೆ ಅವರಿಗೆ ಪ್ರಾಶಸ್ತ್ಯ ಸಿಗುತ್ತದೆ. ಆಗ ಅದು ಒಂದು ಸೀಮಿತವಾದಂಥ ಚರ್ಚೆಯಾದ ಹಾಗೆ ಆಗುತ್ತದೆ. ಆದ್ದರಿಂದ ವಿಸ್ತಾರವಾದ ಚರ್ಚೆಯಾಗಬೇಕಾಗಿದ್ದರೆ ಈಗಲೂ ನಾನು ತಯಾರಿದ್ದೇನೆ, ನಮ್ಮ ಬೇಡಿಕೆಗಳನ್ನು ನಾನು ಮಂಡಿಸಿಬಿಡುತ್ತೇನೆ. ಒಟ್ಟಿಗೆ ಎಲ್ಲವೂ ಚರ್ಚೆಯಾಗಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ಪ್ರತ್ಯೇಕವಾದ ಪ್ರಾಶಸ್ತ್ಯ ಸಿಗಲಿ ಎಂದೇ

ನಾನು ಇದನ್ನು ಮಂಡಿಸಿದ್ದು. ಇಲ್ಲದಿದ್ದರೆ ಯಥಾಪ್ರಕಾರವಾಗಿ ತಮ್ಮ ಬೇಡಿಕೆಯಲ್ಲೇ ನಾವು ಇದನ್ನು ರೆಫರ್ ಮಾಡಬಹುದಾಗಿತ್ತು. ಏಕೆಂದರೆ ಈ ವಿಷಯ ಇಡೀ ರಾಷ್ಟ್ರದ ಗಮನವನ್ನು ಸೆಳೆದಿದೆ. ವಿಶೇಷವಾಗಿ ನಮ್ಮ ರಾಜ್ಯದ ರೈತರಿಗಷ್ಟೇ ಅಲ್ಲ, ಇವತ್ತು ಕರ್ನಾಟಕದಲ್ಲಿ ಏನು ನಡೆದಿದೆ ಎನ್ನುವುದನ್ನು ನ್ಯಾಷನಲ್ ಟಿ.ವಿ.ಯಲ್ಲಿ ಎಲ್ಲಾ ಕಡೆಯೂ ನೋಡಿರಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಇದರ ಬಗ್ಗೆ ಚರ್ಚೆ ಮಾಡಬಾರದು ಎಂದೇನೂ ಇಲ್ಲ. ಇದಕ್ಕೆ ಮಹತ್ವ ಕೊಡಬೇಕು. ಇದರ ಬಗ್ಗೆ ವ್ಯಾಪಕವಾಗಿ ಇದೇ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡುವಂಥ ಸಮಯದಲ್ಲಿ ಸದನಸಮಿತಿಯನ್ನು ಮಾಡಬೇಕು ಎನ್ನುವ ತೀರ್ಮಾನವಾಯಿತು. ಈಗ ಸದನಸಮಿತಿಯವರು ಒಂದು ವರದಿಯನ್ನೂ ಕೊಟ್ಟಿದ್ದಾರೆ. ಇವತ್ತೇ ಕೃಷಿ ಇಲಾಖೆಯ ಬಗ್ಗೆ ಬೇಡಿಕೆಗಳನ್ನು ಸಹಾ ನಾವು ಇಟ್ಟುಕೊಂಡಿದ್ದೇವೆ. ಅಧ್ಯಕ್ಷರೇ, ತಮ್ಮ ಗಮನಕ್ಕೆ ತರಲು ಬಯಸುತ್ತೇನೆ, ಮೊನ್ನೆ ಕುಡಿಯುವ ನೀರಿನ ಬಗ್ಗೆ, ಇದೇ ರೀತಿ ಚರ್ಚೆಯಾಯಿತು. ಅದು ಆದ ತಕ್ಷಣವೇ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಬೇಡಿಕೆಯೂ ಸಹ ಇತ್ತು. ಆದ್ದರಿಂದ ತಮ್ಮಲ್ಲಿ ನಾವು ನಿವೇದನೆ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಇದನ್ನು ಬೇಡಿಕೆಯ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ವ್ಯಾಪಕವಾಗಿ ಚರ್ಚೆ ಮಾಡಲು ಅವಕಾಶ ಕೊಡಬಹುದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಇದಕ್ಕೆ ನಾನು ಒಪ್ಪುತ್ತೇನೆ, ಹಾಗೆ ಮಾಡಬಹುದು ಎಂದು ಕಾಣುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಪರಿಹಾರ ಏನು ಕೊಡುತ್ತಿದ್ದಾರೆ? ಏಕೆಂದರೆ ಅಷ್ಟಕ್ಕೆ ಸೀಮಿತವಾಗಿ ನಾವು ಮಾತನಾಡುತ್ತೇವೆ. ಉಳಿದ ವಿಷಯಗಳ ಬಗ್ಗೆ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ಮಾತನಾಡುತ್ತೇನೆ. ಬೇರೆ ವಿಷಯಗಳ ಬಗ್ಗೆ ನಾನು ಯಾವುದೂ ಕೂಡ ಮಾತನಾಡುತ್ತಿಲ್ಲ. ಕೇವಲ ಸದನಸಮಿತಿ ಬಗ್ಗೆ ಮಾತನಾಡುತ್ತೇನೆ. ಸದನಸಮಿತಿಗೆ ಕೆಲವು ಟರ್ಮ್ಸ್ ಅಂಡ್ ರೆಫರೆನ್ಸ್ ನೀಡಿದ್ದಾರೆ. ಅಷ್ಟಕ್ಕೇ ಮಾತ್ರ ನಾನು ಸೀಮಿತವಾಗಿರುತ್ತೇನೆ. ಏಕೆಂದರೆ ಪದೇ ಪದೇ ಇದನ್ನು ಸದನದಲ್ಲಿ ಮೂರು ಸಲ ಎತ್ತಿದ್ದೇನೆ. ರಿಪೋರ್ಟ್ ಯಾವಾಗ ಬರುತ್ತದೆ? ಅದನ್ನು ಚರ್ಚೆ ತೆಗೆದುಕೊಳ್ಳುತ್ತೀರಾ ಎಂದು. ಅವರೇ ಒಪ್ಪಿದ್ದಾರೆ, ಸದನ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಬಿ.ಶಿವಕುಮಾರ್‌ರವರು 20ನೇ ತಾರೀಖು ವರದಿ ಸಲ್ಲಿಸುತ್ತೇನೆಂದು ಹೇಳಿದರು. ಅದು ಆದಮೇಲೆ ಪುನಃ 23ನೇ ತಾರೀಖು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಧ್ಯಾಹ್ನದ ಮೇಲೆ ಸಬ್‌ಮಿಟ್ ಮಾಡುತ್ತೇವೆಂದು ಹೇಳಿದರು. ಹೀಗಾಗಿ ಇದರ ಬಗ್ಗೆ ಕಾತುರತೆ. ಸದನಸಮಿತಿ ವರದಿ ಕೊಟ್ಟಾಗ ಅದರಲ್ಲಿ ಏನಿದೆ?

ಏನು ಶಿಫಾರಸು ಮಾಡಿದೆ? ಸರ್ಕಾರ ಯಾವ ಶಿಫಾರಸು ಒಪ್ಪಿಕೊಂಡಿದೆ? ತಕ್ಷಣ ಜನರಿಗೆ ರಿಲೀಫ್ ಕೊಡುತ್ತಾರೆಯೇ ಎನ್ನತಕ್ಕದ್ದನ್ನು ನಾವು ನೋಡಬೇಕು. ಉಳಿದಿರತಕ್ಕ ವಿಷಯಗಳ ಬಗ್ಗೆ ಅವರ ಬೇಡಿಕೆಗಳು ಬಂದಾಗ ಇಲಾಖೆಯ ಆಗುಹೋಗುಗಳ ಬಗ್ಗೆ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಬೇರೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಕೊಡಿ. ಮುಂಜಾನೆ ಅವರು ಹೇಳಿದ ಮೇಲೆ ನಾನು ಸುಮ್ಮನೆ ಕುಳಿತೆ. ಇಲ್ಲದಿದ್ದರೆ ನಾನು ಆಗಲೇ ಪ್ರಸ್ತಾಪ ಮಾಡುತ್ತಿದ್ದೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಈಗ ಕೊಟ್ಟಿರತಕ್ಕ ವರದಿ ಮಧ್ಯಕಾಲಿಕ ವರದಿಯನ್ನು ಕೊಟ್ಟಿದ್ದಾರೆ. ಕೇವಲ ಎರಡು ಜಿಲ್ಲೆಗಳಿಗೆ ಸಂಬಂಧಪಟ್ಟಹಾಗೆ ಕೊಟ್ಟಿದ್ದಾರೆ. ರಾಜ್ಯದ ಬೇರೆಬೇರೆ ಜಿಲ್ಲೆಗಳಲ್ಲಿಯೂ ಸಹ ಬೆಳೆಗಳ ನಷ್ಟ ಬೇರೆ ಕಾರಣಗಳಿಂದ ಆಗಿದೆ ಎನ್ನುವುದು ಸಭೆಗೂ ಕೂಡ ಗೊತ್ತಿದೆ. ಮತ್ತೆ ಸರ್ಕಾರ ಇದನ್ನು ಗಮನಿಸಿದೆ. ಈಗ ಸೀಮಿತ ಮಧ್ಯಕಾಲಿಕ ವರದಿಯ ಮೇಲೆ ಚರ್ಚೆ ಮಾಡುವುದಾದರೆ ಪೂರ್ತಿಯಾಗಿ ಚರ್ಚೆ ಮಾಡಿದಂತಾಗುವುದಿಲ್ಲ. ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ಚರ್ಚೆ ಮಾಡಿದ ಹಾಗೆ ಆಗುವುದಿಲ್ಲ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಸರ್ಕಾರ ಏನು ಮಾಡಿದೆ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಮಧ್ಯಂತರ ವರದಿಯಲ್ಲಿ ಸಮಿತಿಯು ಸತ್ತವರ ಕುಟುಂಬವರ್ಗದವರಿಗೆ ಪರಿಹಾರವಾಗಿ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ. ತತ್‌ಕ್ಷಣ ಅಷ್ಟನ್ನು ಕೊಡಲಿಕ್ಕೆ ಸರ್ಕಾರ ಒಪ್ಪಿದೆ. ವರದಿಯನ್ನು ವ್ಯಾಪಕವಾಗಿ ನಾವು ಪರಿಶೀಲನೆ ಮಾಡಬೇಕಾಗಿದೆ. ಅದನ್ನು ಮತ್ತೆ ಸಚಿವಸಂಪುಟದ ಮುಂದೆ ತೆಗೆದುಕೊಂಡು ಹೋಗಬೇಕಾಗಿದೆ. ತೆಗೆದುಕೊಂಡು ಹೋಗಿ ಅದರ ಸಾಧಕಬಾಧಕವೇನು ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಜೊತೆಯಲ್ಲಿ ನಾವು ಕೇಂದ್ರಕ್ಕೆ ಮನವಿ ಸಲ್ಲಿಸಿದ್ದೇವೆ. ಮೊದಲು ಪರಿಹಾರ ಕೊಡಲಿಕ್ಕೆ 124 ಕೋಟಿ ರೂಪಾಯಿ ಕೊಡಬೇಕೆಂದು ಕೇಂದ್ರಸರ್ಕಾರಕ್ಕೆ ಮನವಿ ಕೊಟ್ಟಿದ್ದೇವೆ. ತದನಂತರ ಕೇಂದ್ರಸರ್ಕಾರದಿಂದ ಬಂದಂತಹ ಪರಿಶೀಲನಾ ಸಮಿತಿ ಮುಂದೆ 400 ಕೋಟಿ ರೂಪಾಯಿ ನೆರವು ನಮಗೆ ಬೇಕಾಗುತ್ತದೆಂದು ಮನವಿ ಸಲ್ಲಿಸಿದ್ದೇವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಇದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಜೊತೆಗೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಈ ರೀತಿಯಾದ ಪರಿಸ್ಥಿತಿ ಉಂಟಾಗಿಲ್ಲ. ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಆಗಿದೆ. ಆಂಧ್ರಪ್ರದೇಶ, ಪಂಜಾಬ್ ರಾಜ್ಯಗಳಲ್ಲಿ ಆಗಿದೆ. ಹಲವಾರು ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಉಂಟಾಗಿದೆ. ಇದು ಒಂದೇ ರಾಜ್ಯದಲ್ಲಿ ನಾವೇ ಒಂದು ಸೀಮಿತವಾದ ದೃಷ್ಟಿಯನ್ನಿಟ್ಟುಕೊಂಡು ನಾವು ತೀರ್ಮಾನ ಮಾಡಬೇಕಾದರೆ ರಾಷ್ಟ್ರದ ವ್ಯಾಪ್ತಿಯಲ್ಲಿ ಆಗಿರತಕ್ಕ ಬಗ್ಗೆ ಕೂಡ

ಚರ್ಚೆಯಾಗಬೇಕಾಗುತ್ತದೆ. ಒಂದು ನೀತಿಯನ್ನು ನಿರೂಪಿಸಬೇಕಾಗಿರತಕ್ಕ ಅವಶ್ಯಕತೆಯಿದೆ. ಈ ಕಾರಣದಿಂದ ಇವತ್ತು ಕೃಷಿ ಇಲಾಖೆಯ ಬಗ್ಗೆ ಇಲಾಖೆಯ ಬೇಡಿಕೆಯ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ. ಮಧ್ಯಂತರ ವರದಿಯ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಸರ್ಕಾರ ಏನು ಆಲೋಚನೆ ಮಾಡಿದೆ ಎನ್ನುವುದನ್ನು ಹೇಳಿದ್ದೇನೆ. ಇಲಾಖೆಯ ಬೇಡಿಕೆಗಳನ್ನು ಮಂಡಿಸುತ್ತಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡುವುದು ಸೂಕ್ತವೆಂದು ಸರ್ಕಾರದ ಪರವಾಗಿ ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ತಾವು ಐದಾರು ದಿವಸ ಇರಲಿಲ್ಲ. ಆ ಕಾಲದಲ್ಲಿ ಈ ವಿಷಯವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತಾಪ ಮಾಡಿದಾಗ, ಈವೊಂದು ಸದನಸಮಿತಿ ಆಯಿತು. ಸದನಸಮಿತಿ ಬಹುಬೇಗ ರಿಪೋರ್ಟ್ ಕೊಡಬೇಕು ಅದರಲ್ಲೂ ಕೂಡ ಅವರಿಗೆ ಸಂಪೂರ್ಣವಾದ ವರದಿ ಕೊಡಲಿಕ್ಕೆ ಆಗಲಿಲ್ಲವೆಂದರೆ ಇಂಟೀರಿಯಮ್ ರಿಪೋರ್ಟ್ ಕೊಟ್ಟು ಅದರ ಆಧಾರದ ಮೇಲೆ ರಿಲೀಫ್ ಕೊಡಬೇಕು ಎನ್ನತಕ್ಕದ್ದು ಸದನದಲ್ಲಿ ನಾವೆಲ್ಲರೂ ಒಪ್ಪಿಕೊಂಡಂತಹ ಮಾತು. ಅದಕ್ಕೆ ಇವೊತ್ತು ಇಂಟೀರಿಯಮ್ ರಿಪೋರ್ಟ್ ಬಂದಮೇಲೆ ಚರ್ಚೆ ಮಾಡುವುದು ಬೇಡವೇ? ಈ ಇಂಟೀರಿಯಮ್ ರಿಪೋರ್ಟ್ ಬರಲಿ, ಅದು ಬಂದಾಗ ಡೀಟೇಲ್ಡ್ ಚರ್ಚೆ ಮಾಡೋಣ ಈಗ ಏಕೆ ಚರ್ಚೆ ಮಾಡುತ್ತೀರಿ ಎಂದು ಹೇಳಿ ಅನೇಕಸಾರಿ ಚರ್ಚೆಯನ್ನು ಮೊಟಕುಗೊಳಿಸಿ ಉತ್ತರ ಕೊಡತಕ್ಕದ್ದು ಆಯಿತು. ಈಗ ಇಂಟೀರಿಯಮ್ ರಿಪೋರ್ಟ್‌ನಲ್ಲಿ ಸ್ಪೆಸಿಫಿಕ್ ಆಗಿ ಕೆಲವು ಶಿಫಾರಸುಗಳನ್ನು ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಆದಂತಹ ಬೆಳೆ ಹಾನಿಯ ಬಗ್ಗೆ ಇದರಲ್ಲಿ ಬರದಿದ್ದರೆ ತತ್‌ಕ್ಷಣ ಕೆಲವು ಜಿಲ್ಲೆಗಳಲ್ಲಿ, ಯಾವ ಜಿಲ್ಲೆಗಳಲ್ಲಿ ಗಂಭೀರವಾದ ಪರಿಸ್ಥಿತಿಯಿತ್ತು ಆ ಜಿಲ್ಲೆಗಳ ಬಗ್ಗೆ ಮಾತ್ರ ಇಂಟೀರಿಯಮ್ ರಿಪೋರ್ಟ್ ಕೊಟ್ಟಿದ್ದಾರೆ. ಉಳಿದಂತಹ ಜಿಲ್ಲೆಗಳ ಬಗ್ಗೆ ಅಧ್ಯಯನ ಮಾಡಲು ಮೂರು ತಿಂಗಳು ಸಮಯ ಕೇಳಿದ್ದಾರೆ. ನಾವು ಮತ್ತೆ ಸಭೆ ಸೇರುವುದಿಲ್ಲ. ಆ ರಿಪೋರ್ಟ್ ಬರುವವರೆಗೂ ಕಾದು ಅದರ ಮೇಲೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ನಿಧಾನವಾಗುತ್ತದೆ. ಈಗೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಯಾವಾಗ ಸಂಪೂರ್ಣವಾದ ಫುಲ್ ರಿಪೋರ್ಟ್ ಬರುತ್ತದೆ; ಅದಕ್ಕೆ ಮೂರು ತಿಂಗಳು ಬೇಕಾದಾಗ, ನ್ಯಾಚುರಲ್ ಅದಕ್ಕೆ ಏನೂ ಪರಿಹಾರ ಇಲ್ಲ. ಅದಕ್ಕಾಗಿ ಇದಕ್ಕೆ ಸೀಮಿತವಾಗಿ ಚರ್ಚೆ ಮಾಡಬೇಕೆಂದು ಅಧ್ಯಕ್ಷರಲ್ಲಿ ಪರ್ಮಿಷನ್ ಕೇಳಿದೆ, ಅದಕ್ಕೆ ಅಧ್ಯಕ್ಷರು ಒಪ್ಪಿದ್ದಾರೆ. ಅದರ ಪ್ರಕಾರ ಇವತ್ತು ಪ್ರಸ್ತಾಪ ಮಾಡುತ್ತಿದ್ದೇನೆ.

(ಡಾ: ಎಂ.ಪಿ.ಕರ್ಕಿಯವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಅದರ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಟರ್ಮ್ಸ್ ಅಂಡ್ ರೆಫರೆನ್ಸ್ ಏನಿದೆ ಅದನ್ನು ಬಿಟ್ಟು ಬೇರೆ ಕಡೆಗೆ ಹೋಗತಕ್ಕದ್ದು ಇಲ್ಲ. ಸಮಿತಿಗೆ ಕೊಟ್ಟಂತಹ ಟರ್ಮ್ಸ್

ಅಂಡ್ ರೆಫರೆನ್ಸ್ ಐದು. (1) ಬೆಳೆಗಳ ವಿಫಲತೆಗೆ ಕಳಪೆದರ್ಜೆಯ ಕೀಟನಾಶಕ ಮತ್ತು ಬೀಜಗಳನ್ನು ಉಪಯೋಗಿಸಿದ್ದರಿಂದ ಉಂಟಾದ ತೊಂದರೆಯಿಂದಾಗಿ ಕೆಲವು ರೈತ ಕುಟುಂಬವರ್ಗದವರಿಗೆ ಆರ್ಥಿಕ ಸಹಾಯವನ್ನು ತತ್‌ಕ್ಷಣ ಒದಗಿಸುವ ಬಗ್ಗೆ (2) ಪ್ರತಿಯೊಂದು ಪ್ರಕರಣದಲ್ಲೂ ಬೆಳೆ ಸ್ವರೂಪ ಹಾನಿಯಿಂದಾಗಿ ಆದ ಪ್ರಮಾಣದ ಇವುಗಳ ಬಗ್ಗೆ ಪರಿಹಾರ ನೀಡುವುದು ಹೇಗೆ? (3) ದೋಷಪೂರಿತ ಮತ್ತು ಕಳಪೆದರ್ಜೆಯ ಕೀಟನಾಶಕ ಮತ್ತು ಬೀಜಗಳನ್ನು ಶಿಫಾರಸು ಮಾಡಿದ್ದರಿಂದ ಅಂತಹ ಕಾರ್ಖಾನೆ ಕಂಪನಿಗಳನ್ನು ಗುರುತಿಸಿ ಅವುಗಳ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸೂಚಿಸುವ ಬಗ್ಗೆ (4) ರಾಜ್ಯದ ಎಲ್ಲ ವರ್ಗದ ರೈತರಿಗೆ ಪರಿಹಾರ ಕಲ್ಪಿಸುವ ಸಂದರ್ಭದಲ್ಲಿ ಬೆಳೆ ವಿಮೆಯನ್ನು ಜಾರಿಗೊಳಿಸುವ ಬಗ್ಗೆ ವಿಧಾನವನ್ನು ರೂಪಿಸುವ ಬಗ್ಗೆ. (5) ಸರ್ಕಾರದ ವತಿಯಿಂದ ತೆಗೆದುಕೊಳ್ಳಬಹುದಾದ ದೀರ್ಘಾವಧಿ ಶಾಶ್ವತವಾದ ಪರಿಹಾರವನ್ನು ಸೂಚಿಸುವ ಬಗ್ಗೆ. ಹೀಗೆ ಐದು ಟರ್ಮ್ಸ್ ಆಫ್ ರೆಫರೆನ್ಸ್‌ಗಳು ಇವೆ. ಅದರಲ್ಲಿ ಅವುಗಳೆಲ್ಲವನ್ನೂ ದೀರ್ಘವಾಗಿ ಚರ್ಚೆ ಮಾಡುವುದಕ್ಕಾಗಲೀ ಪ್ರಸ್ತಾಪ ಮಾಡುವುದಕ್ಕಾಗಲೀ ಅಥವ ಅಭ್ಯಾಸ ಮಾಡುವುದಕ್ಕಾಗಲೀ ಆಗುವುದಿಲ್ಲ. ಆದರೆ ಕೆಲವೊಂದಕ್ಕೆ ಸೀಮಿತವಾಗಿ ಏಕೆಂದರೆ ವಿಷಯದ ಗಂಭೀರತೆಯನ್ನು ತಿಳಿದುಕೊಂಡು ಪರಿಸ್ಥಿತಿ ಏನು, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಿಗೆ ಆ ಸಮಿತಿ ಹೋಗಿ ಬರುವಂತಹ ತೀರ್ಮಾನ ಮಾಡಿ ಹೋಗಿ ಬಂದಿದ್ದಾರೆ. ಉಳಿದ ಜಿಲ್ಲೆಗಳಿಗೆ ನಾವು ಹೋಗುತ್ತೇವೆ ನಮಗೆ ಸಮಯ ಕೊಡಿ ಎಂದು ಸದನವನ್ನು ಕೇಳಿದ್ದಾರೆ. ಸದನ ಈಗಾಗಲೇ ಅವರಿಗೆ ಸಮಯವನ್ನು ಕೊಟ್ಟಿದೆ. ಆದರೆ ಅವರು ಎರಡು ಜಿಲ್ಲೆಗಳಿಗೆ ಹೋಗಿ ನೋಡಿಕೊಂಡು ಬಂದು ಅಲ್ಲಿನ ಪರಿಸ್ಥಿತಿಯನ್ನು ನೋಡಿ ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ನೋಡಿದಾಗ ನಿಜವಾಗಲೂ ಪರಿಸ್ಥಿತಿ ಬಹಳ ಗಂಭೀರತೆಯಿಂದ ಕೂಡಿದೆ ಎನ್ನುವುದು ಸದನಕ್ಕೆ ಅರ್ಥವಾಗುತ್ತದೆ. ಮುಂಗಾರು ಹಿಂಗಾರು ಮಳೆ ಬಾರದೆ ರಬಿ ಕ್ರಾಪ್ ಜೊತೆಗೆ ಹಿಂಗಾರಿ ಮತ್ತು ಮುಂಗಾರಿ ಬೆಳೆಗಳೂ ಕೂಡ ಫೇಲ್ ಆಗಿವೆ. ಅವೆರಡೂ ಫೇಲ್ ಆದಮೇಲೆ ಅದಕ್ಕೆ ಪರಿಹಾರವೇನು? ಯಾವರೀತಿಯಾಗಿ ಸರ್ಕಾರ ಸಹಾಯ ಮಾಡುವುದಕ್ಕೆ ಸಿದ್ಧವಿದೆ? ಈಗಾಗಲೇ ಮಂತ್ರಿಗಳು ಹೇಳುತ್ತಿದ್ದಾರೆ ಕೇಂದ್ರಸರ್ಕಾರಕ್ಕೆ 400 ಕೋಟಿ ರೂಪಾಯಿ ಪರಿಹಾರ ಕೊಡಬೇಕೆಂದು ಮನವಿ ಕೊಟ್ಟಿದ್ದೇವೆಂದು. ಕೇಂದ್ರಸರ್ಕಾರ ಏನು ಕೊಡುತ್ತದೆ ಅದನ್ನು ನೋಡಿಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇವೆ ಎನ್ನತಕ್ಕ ದಾಟಿಯಲ್ಲಿ ಇವತ್ತು ಅವರು ಬರುತ್ತಿದ್ದಾರೆ. 400 ಕೋಟಿ ರೂಪಾಯಿಗಳನ್ನು ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಯಾವಾಗಲೂ ಕೇಳತಕ್ಕದ್ದು ಇದೆ. 400 ಕೋಟಿ ರೂಪಾಯಿಗಳನ್ನು ಯಾವ ಸರ್ಕಾರ ಯಾವಾಗಲೂ ಕೊಡುವುದಿಲ್ಲ. ಈಗ ಸ್ಪೆಷಲ್ ಗ್ರ್ಯಾಂಟ್ ಏನಾದರೂ ಸಿಗಬೇಕಾದರೆ ಭಾರಿ ಪ್ರಯತ್ನ ಮತ್ತು ಭಾರೀ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ತಂದು, ಏನಾದರೂ ತೆಗೆದುಕೊಳ್ಳಬೇಕೇ ಹೊರತಾಗಿ ಇಲ್ಲದಿದ್ದರೆ ಸಾಧ್ಯವಿಲ್ಲ. ಪಶ್ಚಿಮ ಬಂಗಾಲ ಮತ್ತು

ಒರಿಸ್ಸಾದಲ್ಲಿ ಭೂಕಂಪ ಮತ್ತು ಬಿರುಗಾಳಿ ಆದ ಸಂದರ್ಭದಲ್ಲಿ ಕೆಲವು ಸ್ಪೆಷಲ್ ಗ್ರಾಂಟನ್ನು ಸಿಎಂರವರು, ಪಿಎಂರವರು ಆಸಕ್ತಿ ವಹಿಸಿ ಕೊಟ್ಟರು. ಆ ರೀತಿ ಆಸಕ್ತಿವಹಿಸಿದರೆ ಮಾತ್ರ ಸ್ಪೆಷಲ್ ಗ್ರಾಂಟ್ ಸಿಗುತ್ತದೆ. ಇವತ್ತು ಅದೇ ಪರಿಸ್ಥಿತಿ ಇಲ್ಲೂ ಇದೆ. ಅಂದರೆ, ಯಾವ ಬಿರುಗಾಳಿಯಿಂದ ಇವತ್ತು ಪಶ್ಚಿಮ ಬಂಗಾಲ ಮತ್ತು ಒರಿಸ್ಸಾದಲ್ಲಿ ಪರಿಸ್ಥಿತಿ ಆಯಿತೋ, ಅದೇ ಪರಿಸ್ಥಿತಿ ಇವತ್ತು ಮಳೆ ಬಾರದ ಕಾರಣ ಅಥವಾ ಅತಿ ಮಳೆಯಾದ ಕಾರಣ, ಜನರೇನು ತೊಂದರೆಗೀಡಾಗಿದ್ದಾರೆ ಅವರ ಪರಿಸ್ಥಿತಿಯೂ ಕೂಡ ಹೀಗೆ ಇದೆ. ಅದಕ್ಕಾಗಿ ಇವತ್ತು ಸರ್ಕಾರದ ಮೇಲೆ ದೊಡ್ಡ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ನಿಭಾಯಿಸಬೇಕಾದರೆ ಬಜೆಟ್‌ನಲ್ಲಿ ಕೇವಲ 22 ಕೋಟಿ ಅಥವಾ 30 ಕೋಟಿ ರೂಪಾಯಿಗಳನ್ನೇನು ನಿಸರ್ಗ ವಿಕೋಪದಡಿಯಲ್ಲಿ ಇಡುವುದರಿಂದ ಮಾತ್ರ ಇದು ಸಾಲ್ವ್ ಆಗುವುದಿಲ್ಲ. ಇವತ್ತು ಈ ಶಿಫಾರಸ್ಸನ್ನು ಮಾಡಿದ್ದರೂ ಕೂಡ, ನಾನು ಕಮಿಟಿಯವರನ್ನು ಕೇಳಿಕೊಳ್ಳುತ್ತೇನೆ. ಅವರು ಈಗ ಮಧ್ಯಂತರ ವರದಿ ಕೊಟ್ಟಿದ್ದು, ಅದರಲ್ಲಿ ಶಿಫಾರಸ್ಸು ಏನು ಮಾಡಿದ್ದಾರೆಂದರೆ ಪ್ರತಿ ಎಕರೆಗೆ 500 ರೂ.ಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನಾವು ಮೊದಲೇ ಪ್ರತಿ ಎಕರೆಗೆ 500 ರೂ.ಗಳನ್ನಾದರೂ ನೀವು ಕೊಡಿ ಎಂದು ಕೇಳಿದ್ದೆವು. ಇವತ್ತು ಪ್ರತಿ ಎಕರೆಗೆ 500 ರೂ. ಎಂದರೆ ಮೋರ್ ಆರ್ ಲೆಸ್ ಪ್ರತಿ ಎಕರೆಗೆ 250 ರೂಪಾಯಿ ಕೂಡ ಬೀಳುವುದಿಲ್ಲ. ಅದನ್ನು ಇವರು ಎಷ್ಟು ಜನರಿಗೆ ಕೊಡುವುದಕ್ಕೆ ತಯಾರಿದ್ದೀರಿ? ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಇವತ್ತು ತಾವು ಬಿಡುಗಡೆ ಮಾಡಿದ್ದು 4 ಕೋಟಿ ರೂಪಾಯಿಗಳನ್ನು ಮಾತ್ರ ಎಂದು ಹೇಳಿದ್ದಾರೆ. ಇವತ್ತು 500 ರೂಪಾಯಿ ಪ್ರಕಾರವೇ ಲಕ್ಷಾಂತರ ಎಕರೆಗಳಲ್ಲಿ ಬೆಳೆ ಹಾನಿಯಾಗಿದೆ ಎನ್ನುವ ಮಾತನ್ನು ಕೇವಲ ಬೀದರ್, ಗುಲಬರ್ಗಾದಲ್ಲೇ ಹೇಳಬೇಕಾದರೆ ಅವರು ಕೊಟ್ಟ ಅಂಕಿ-ಸಂಖ್ಯೆಗಳ ಪ್ರಕಾರವೇ ಇವತ್ತು ಹೆಚ್ಚು ಕಡಿಮೆ 4 ಲಕ್ಷ 65 ಸಾವಿರ 310 ಹೆಕ್ಟೇರ್ಸ್ ಬೆಳೆ ಹಾಳಾಗಿದೆ. ಇದು ಕೇವಲ ರಬಿ. ಹಿಂಗಾರು ಮತ್ತು ಮುಂಗಾರು ಎರಡೂ ಸೇರಿ ಇವತ್ತು ಅವರ ಹೇಳಿಕೆಯ ಪ್ರಕಾರ ಗುಲಬರ್ಗಾ ಜಿಲ್ಲೆಯಲ್ಲಿನ ಹಿಂಗಾರು, ಸೂರ್ಯಕಾಂತಿ, ಉದ್ದು, ಹೆಸರು ಎಲ್ಲವನ್ನೂ ಹೇಳಿದರು. ಜೋಳ 65 ಪರ್ಸೆಂಟ್ ಡ್ಯಾಮೇಜಾಗಿದೆ. ಅದರಲ್ಲಿ ಬಿತ್ತಿದ ಏರಿಯಾವೆಂದರೆ, ಸುಮಾರು 9,548 ಹೆಕ್ಟೇರ್ಸ್. ಆಮೇಲೆ, ಮಳೆ ಅಭಾವದಿಂದ ಕೆಟ್ಟುಹೋಗಿದ್ದು 6,149 ಹೆಕ್ಟೇರ್ಸ್. ಸಜ್ಜೆ ಬಿತ್ತಿದ್ದು 73,534 ಹೆಕ್ಟೇರ್ಸ್, ಕೆಟ್ಟುಹೋಗಿದ್ದು 35,295 ಹೆಕ್ಟೇರ್ಸ್, ತೊಗರಿ ಬಿತ್ತನೆಯಾಗಿದ್ದು 2,36,888 ಹೆಕ್ಟೇರ್ಸ್, ಕೆಟ್ಟುಹೋಗಿದ್ದು ಸುಮಾರು 2,28,888. ಅದೇ ರೀತಿ ಉದ್ದು, ಹೆಸರು ಇವೆಲ್ಲವೂ ಇವೆ. ನಾನು ಇದರ ಬಗ್ಗೆ ವಿವರವಾಗಿ ಹೇಳುವುದಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಲಕ್ಷಾಂತರ ಎಕರೆಗಳಲ್ಲಿ ಇವತ್ತಿನ ದಿವಸ ಬೆಳೆ ಹಾನಿಯಾಗಿದೆ. ಇಷ್ಟೊಂದು ಹಾನಿಯಾದ ಮೇಲೆ ಇದಕ್ಕೆ ಸರ್ಕಾರದ ಶಿಫಾರಸ್ಸು ಪ್ರಕಾರವೂ ಕೂಡ 500-500 ರೂಪಾಯಿಗಳನ್ನು ಪ್ರತಿ ಎಕರೆಗೆ ಕೊಡಬೇಕೆಂದರೂ ಇವತ್ತು ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದರ ವ್ಯವಸ್ಥೆಯನ್ನು ಇವರು ಮಾಡಿದ್ದಾರೆ.

ಇವತ್ತು 500 ರೂಪಾಯಿಗಳನ್ನು ಪ್ರತಿ ಎಕರೆಗೆ ಕೇಳುವುದು ಅತಿಶಯೋಕ್ತಿ ಏನಲ್ಲ. ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಸರ್ಕಾರದವರು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಪ್ರತಿ ಹೆಕ್ಟೇರ್‌ಗೆ 1,250 ರೂಪಾಯಿಗಳನ್ನೂ ಮತ್ತು ಮಹಾರಾಷ್ಟ್ರ ಸರ್ಕಾರದವರು ಹತ್ತಿ ಬೆಳೆಗೆ ಪ್ರತಿ ಎಕರೆಗೆ 1,000 ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ಹೀಗೆ ನಮ್ಮ ಅಕ್ಕಪಕ್ಕದ ರಾಜ್ಯಗಳು ಯಾವಾಗ ಪ್ರತಿ ಎಕರೆಗೆ 500 ಮತ್ತು ಸಾವಿರ ರೂಪಾಯಿಗಳನ್ನು ಕೊಡುವಾಗ, ನಾವು 250 ರೂಪಾಯಿಗಳನ್ನು ಕೊಡುತ್ತೇವೆಂದರೆ ಇದು ಯಾವ ನ್ಯಾಯ? ಎರಡನೆಯದಾಗಿ, ಇದರ ಬಗ್ಗೆ ಕೂಲಂಕಷವಾಗಿ ತಿಳಿದುಕೊಂಡೇ ನೀವು ಕೊಡುತ್ತೇವೆನ್ನುವ ಮಾತನ್ನು ಮೊದಲೇ ಹೇಳಿದಿರಿ. ಇವತ್ತು ಈ ಸದನಸಮಿತಿ ಹೋಗಿ ಅವರು ಶಿಫಾರಸ್ಸು ಮಾಡಿದ್ದಾರೆ. ಇದರಿಂದ ನಿಜವಾಗಲೂ ರೈತರಿಗೆ ಖುಷಿ ಇಲ್ಲ. ಏಕೆಂದರೆ ಗರಿಷ್ಠ 2 ಸಾವಿರ ರೂಪಾಯಿ ಎಂದರೆ ಏನಾಗುತ್ತದೆ ಇಂದಿನ ಕಾಲದಲ್ಲಿ? ಅದಕ್ಕೆ ಮಧ್ಯಂತರ ವರದಿಯಲ್ಲೂ ಕೂಡ ಸ್ವಲ್ಪ ಮಾರ್ಪಾಡು ಮಾಡಿಕೊಂಡು, ಸರ್ಕಾರದವರು ಅವರ ಶಿಫಾರಸು ಒಪ್ಪಿಕೊಂಡರೂ ಸಹ, ಕನಿಷ್ಠ ಎಲ್ಲರಿಗೂ 5 ಸಾವಿರ ರೂಪಾಯಿಗಳನ್ನಾದರೂ ಕೊಡುವ ವ್ಯವಸ್ಥೆ ಮಾಡಬೇಕು. ಆಮೇಲೆ, ಪೂರ್ಣ ವರದಿ ಬಂದ ಮೇಲೆ ಶಾಶ್ವತ ಪರಿಹಾರ ಕೊಡುವುದಾಗಲೀ, ಬೀಜ ಕೊಡುವುದಾಗಲೀ ಇನ್‌ಪುಟ್ಸ್ ಆಗುವುದೇ ಆಗಲಿ ಅಥವಾ ಕೇಂದ್ರ ಸರ್ಕಾರದಿಂದ ನಿಮಗೆ ಸಹಾಯ ಬಂದಮೇಲೆ ಯಾವ ರೀತಿಯಾಗಿ ಕೊಡಬೇಕೆನ್ನುವುದರ ಬಗ್ಗೆ ನೀವು ಚಿಂತಿಸಿ. ಆದರೆ, ಈಗ ಏನು ಶಿಫಾರಸು ಮಾಡಿದ್ದಾರೆ, ಇದರಲ್ಲಿ ಒಂದು ಶಿಫಾರಸನ್ನು ತಕ್ಷಣ ಜಾರಿಗೆ ತರಬೇಕು. ಎರಡನೆಯದಾಗಿ, ಅವರು ಮಾಡಿರುವ ಶಿಫಾರಸು ಏನಿದೆ ಗರಿಷ್ಠ 2 ಸಾವಿರ ಕೊಡಬೇಕೆಂಬುದು, ಅದಾಗುವುದಿಲ್ಲ. ಅದಕ್ಕೆ ಯಾರೂ ಕೂಡ ಒಪ್ಪುವುದಿಲ್ಲ. 1997-98ನೇ ಸಾಲಿನಲ್ಲಿ ಬೆಳೆ ನಷ್ಟದ ಪರಿಹಾರಕ್ಕೆಂದು ಪ್ರತಿ ಎಕರೆಗೆ 500 ರೂಪಾಯಿ ಮತ್ತು ಒಬ್ಬ ರೈತನಿಗೆ ಗರಿಷ್ಠ ಪರಿಹಾರ 2,500 ರೂಪಾಯಿ ಮೀರದಂತೆ ನೀಡುವುದು, ಇದು ಸಮಿತಿಯ ಶಿಫಾರಸ್ಸು. ಆದರೆ, 2,500 ರೂಪಾಯಿಗಳಿಂದ ಏನೂ ಆಗುವುದಿಲ್ಲ. ಕನಿಷ್ಠ 5 ಸಾವಿರ ರೂಪಾಯಿಗಳನ್ನಾದರೂ ಮಾಡಬೇಕು. ಅವರು 500 ರೂಪಾಯಿ ಎಂದು ಏನು ಶಿಫಾರಸು ಮಾಡಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಾವು 1,000 ರೂಪಾಯಿ ಕೇಳಿದ್ದೇವೆ. ಆದರೆ, ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ನಾವು ಇವತ್ತು ತಿಳಿದುಕೊಂಡರೂ ಕೂಡ, ಕನಿಷ್ಠಪಕ್ಷ ಪ್ರತಿ ಎಕರೆಗೆ 500 ರೂಪಾಯಿ ಕೊಡಬೇಕು ಮತ್ತು ಗರಿಷ್ಠ ಪರಿಹಾರವನ್ನು ಇವತ್ತು ಇಂಟರಿಂ ಆಗಿ 2,500 ರೂಪಾಯಿಗಳಿಂದ 5,000 ರೂಪಾಯಿಗಳೆಂದು ಮಾಡಬೇಕು. ಆಮೇಲೆ, ಎಲ್ಲಾ ಬೆಳೆಗಳೂ ಸೇರಿದಂತೆ ಹಾಗೂ ಎಷ್ಟೇ ಜಮೀನು ಇದ್ದರೂ ಗರಿಷ್ಠ ಪರಿಹಾರ 2,500 ರೂಪಾಯಿ ಕೊಡಬೇಕೆಂದು ಏನಿದೆ ಅದನ್ನು 5,000 ರೂಪಾಯಿ ಕೊಡಬೇಕೆಂದು ಹೇಳಿದ್ದೇವೆ. ಈ ಶಿಫಾರಸನ್ನು ಸದನದಲ್ಲಿರುವ ಸದಸ್ಯರೂ ಕೊಟ್ಟಿದ್ದಾರೆ. ಇದರಲ್ಲಿ ಯಾವ ಪಾಲಿಟಿಕ್ಸ್ ಕೂಡ ಇಲ್ಲ. ಸದನ ಸಮಿತಿ ಹೋಗಿ

ಯಾರಾದರೂ ಪೊಲಿಟಿಕಲ್ ಮೈಲೇಜ್ ಮಾಡಿಕೊಳ್ಳಬೇಕೆಂದೂ ಇಲ್ಲ. ಶ್ರೀ ಜಿ.ಬಿ.ಶಿವಕುಮಾರ್‌ರವರು ಇದರ ಅಧ್ಯಕ್ಷರು. ಈ ಕಡೆಯ ಕೆಲವು ಸದಸ್ಯರು, ಆ ಕಡೆಯ ಕೆಲವು ಸದಸ್ಯರು ಸೇರಿ ಇವತ್ತು ಈ ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಅದರಲ್ಲೂ ಸ್ವಲ್ಪ ಮಾರ್ಪಾಟು ಮಾಡಿ ಈ ಶಿಫಾರಸನ್ನು ತಾವು ತಕ್ಷಣ ಒಪ್ಪಿಕೊಳ್ಳಬಹುದು. ಎರಡನೆಯದೆಂದರೆ, ಬೆಳೆ ನಷ್ಟ ಪರಿಹಾರ, ನಷ್ಟವಾಗಿರುವ ಎಲ್ಲ ಬೆಳೆಗಳಿಗೂ ಮತ್ತು ಎಲ್ಲಾ ವರ್ಗದ ರೈತರಿಗೆ ಅಂದರೆ ಹಿಡುವಳಿ ಆಗಿರುವ ಮಿತಿಯಿಲ್ಲದ ಎಲ್ಲಾ ವರ್ಗದ ರೈತರಿಗೂ ಪರಿಹಾರ ನೀಡುವುದೆಂದು ಹೇಳಿದ್ದಾರೆ. ಅಂದರೆ, ಇಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಮಾತ್ರ ಕೊಡಬೇಕೆಂದು ಮಾನ್ಯ ಸಚಿವರು ಘೋಷಣೆ ಮಾಡಿದ್ದಾರೆ. ಈಗ ಭೂ ಸುಧಾರಣೆ ಕಾನೂನು ಬಂದ ಮೇಲೆ, ಗರಿಷ್ಠ ಭೂಮಿ ಎಷ್ಟಿರಬೇಕು, ಕನಿಷ್ಠ ಎಷ್ಟಿರಬೇಕೆಂಬ ಪ್ರಶ್ನೆ ಇಲ್ಲ. ಆದರೆ, ಗರಿಷ್ಠ ಎಷ್ಟು ಇಟ್ಟುಕೊಳ್ಳಬೇಕೆನ್ನುವುದಕ್ಕೆ ಸೀಲಿಂಗ್ ಹಾಕಿದ್ದೇವೆ. ಒಂದು ಕುಟುಂಬಕ್ಕೆ ಸೀಲಿಂಗ್ 54 ಎಕರೆ ಎಂದ ಮೇಲೆ ಪುನಃ ನಾವು ಅದಕ್ಕೆ ಸ್ಮಾಲ್, ಮಾರ್ಜಿನಲ್, ಮೀಡಿಯಂ ಮತ್ತು ಮೀಡಿಯಂಗಿಂತ ಹೆಚ್ಚು ಎನ್ನುವ ಪ್ರಶ್ನೆ ಬರುವುದಿಲ್ಲ. ಅದಕ್ಕಾಗಿ ನಾನು ಗರಿಷ್ಠ 5 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಎಷ್ಟೇ ಜಮೀನಿದ್ದರೂ ಕೂಡ 5 ಸಾವಿರದ ಮೇಲೆ ಬರುವುದು ಇಲ್ಲವೇ ಇಲ್ಲ. ಪ್ರತಿ ಎಕರೆಗೆ ಕನಿಷ್ಠ 500 ರೂಪಾಯಿಗಳನ್ನು ಕೊಡಬೇಕೆಂದು ನಾವು ಇವೊತ್ತು ಹೇಳುತ್ತಿದ್ದೇವೆ. ಈ ಶಿಫಾರಸನ್ನೂ ಕೂಡ ಅಂದರೆ, ಎಲ್ಲರಿಗೂ ಕೊಡಬೇಕೆಂದು ಹೇಳುವುದನ್ನು ಅವರು ಒಪ್ಪಿಕೊಳ್ಳುತ್ತಾರೆನ್ನುವ ಮಾತನ್ನು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ, ಬೆಳೆ ನಷ್ಟ ಪರಿಹಾರ ನೀಡಲು ಸರಳವಾದ ಪದ್ಧತಿಯನ್ನು ರೂಪಿಸಬೇಕು ಹಾಗೂ ಈ ಬಗ್ಗೆ ಬೆಳೆ ಆಣೆವಾರಿಯನ್ನು ಕೂಡಲೇ ಪ್ರಕಟಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಸೂಚನೆ ನೀಡಬೇಕೆಂದು ಹೇಳಲಾಗಿದೆ. ಈ ಮೂರೇ ಶಿಫಾರಸ್ಸು ಮಾಡಲಾಗಿದೆ. ಬೀದರ್‌ನ ಸುಮಾರು 13 ಜನ ಮತ್ತು ಗುಲಬರ್ಗಾದಲ್ಲಿ 3 ಜನರ ಆತ್ಮಹತ್ಯೆ ಪ್ರಕರಣಗಳೇನಿವೆ, ಇದಕ್ಕೆ ಅವರು ಒಂದೊಂದು ಲಕ್ಷ ರೂಪಾಯಿಗಳ ಪರಿಹಾರ ಕೊಡುವುದಕ್ಕೆ ಶಿಫಾರಸ್ಸು ಮಾಡಿದ್ದಾರೆ. ಮೂರು ಪ್ರಕರಣಗಳಲ್ಲಿ ಮಾತ್ರ ಸರ್ಕಾರವೂ ಒಪ್ಪಿಕೊಂಡಿಲ್ಲ, ಅಲ್ಲಿನ ಜಿಲ್ಲಾಧಿಕಾರಿಗಳೂ ಕೂಡ ಅದಕ್ಕೆ ಬೇರೆ ಕಾರಣಗಳನ್ನು ತಿಳಿಸಿದ್ದಾರೆ.

3.50 ಪಿ.ಎಂ.

ಅವು ಯಾವುದೆಂದರೆ, (1) ಬೋಜರಾಗ ಭಾತಂಬ್ರ, (2) ಬಸಪ್ಪ ಕೆಳವಾಡಿ, (3) ದಿಲೀಪ್ ಕುಂಠಿಸಿರ್ಷಿ, ಈ ಮೂರು ಊರಿನಲ್ಲಿ ಮಾತ್ರ ಬೆಳೆಹಾನಿಯಿಂದಾಗಲಿ, ಅತಿವೃಷ್ಠಿಯಿಂದಾಗಲಿ ಅವರು ಸತ್ತಿಲ್ಲ. ಆತ್ಮಹತ್ಯೆ ಮಾಡಿಕೊಂಡಿಲ್ಲ. ಅವರು ಬೇರೆ ಕಾರಣಕ್ಕೆ ಮಾಡಿಕೊಂಡಿದ್ದಾರೆಂದು ಈ ಶಿಫಾರಸ್ಸಿನಲ್ಲಿ ಹೇಳಿದ್ದಾರೆ. ಉಳಿದಂಥ 10 ಜನರಿಗೆ ಏನು ಪರಿಹಾರ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಕೇವಲ ಮೂರು

ಜನರಿಗೆ ಕೊಟ್ಟಿದ್ದಿರಿ, ಇನ್ನೂ ಏಳು ಜನರಿಗೆ ಕೊಡಬೇಕು. ಕೊಡುತ್ತೇವೆಂದು ಹೇಳುತ್ತೀರಿ, ಯಾವಾಗ ಕೊಡುತ್ತೀರಿ? ವರದಿ ಬರಬೇಕು, ಕಾಯಬೇಕು, ಎಂದು ಹೇಳುವುದಾದರೆ, ನಾವು ಇಲ್ಲಿ ಒತ್ತಾಯ ಮಾಡಿ ಸದನದ ಸಮಿತಿಯನ್ನು ಅಲ್ಲಿಗೆ ಕಳುಸಿಸಿದ್ದು ಒಳ್ಳೆಯದು ಆಯಿತೆನ್ನುವ ಭಾವನೆ ಬರುತ್ತದೆ. ಅಂದರೆ ನಾವು ಒತ್ತಾಯ ಮಾಡಿಯಾದ ಮೇಲೆ, ಸಮಿತಿಯವರನ್ನು ಅಲ್ಲಿಗೆ ಕಳುಹಿಸಿ ಕೊಟ್ಟಾದ ಮೇಲೆ, ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಇದು ಸರಿಯಾಗಿದೆ ಎಂದು ಹೇಳಿದ ಮೇಲೆ ನೀವು ಪರಿಹಾರ ಕೊಡುವುದಕ್ಕೆ ತಯಾರಾಗಿದ್ದೀರಿ. ಅಲ್ಲಿಯವರೆವಿಗೆ ನಿಮ್ಮ ಆಡಳಿತ ಮಲಗಿದೆ ಎಂದಾಯಿತು. They are not ready to take any action though there is a request from the people.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಕಾರಣಕ್ಕಾಗಿ ಮೂರು ಜನ ಸತ್ತಿದ್ದಾರೆಂದು ಜಿಲ್ಲಾಧಿಕಾರಿಗಳು ವರದಿ ಕೊಟ್ಟ ತಕ್ಷಣವೇ ನಾವು ಅವರಿಗೆ ಪರಿಹಾರ ಬಿಡುಗಡೆ ಮಾಡಿದ್ದೇವೆ. ಇನ್ನೂ ಬೇರೆ ವರದಿಯನ್ನೂ ಕೂಡ ಕೇಳುತ್ತಿದ್ದೆವು. ಅಷ್ಟರಲ್ಲಿ, ನೀವು ಸದನ ಸಮಿತಿ ರಚನೆ ಮಾಡಿ ಎಂದಾಗ, ಸಮಿತಿಯವರೇ ಹೋಗಿ ಬರಲಿ ಎಂದು ವಿಳಂಬವಾಯಿತು. ಸರ್ಕಾರದಿಂದ ಯಾವುದೇ ರೀತಿಯ ವಿಳಂಬವಾಗಲಿಲ್ಲ. ಒಂದು ಪಕ್ಷ ಸದನ ಸಮಿತಿ ರಚನೆಯಾಗದಿದ್ದಲ್ಲಿ, ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ನಾವು ಕ್ರಮಗಳನ್ನು ಕೈಗೊಳ್ಳುತ್ತಿದ್ದೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಮಗೆ ಗೊತ್ತಿರುವ ಹಾಗೆ, ಸದನ ಸಮಿತಿ ರಚನೆಯಾಗುವುದಕ್ಕಿಂತ ಮುಂಚೆ, ಈ ಸದನದಲ್ಲಿ 13 ಜನರ ಹೆಸರನ್ನು ನಾವೇ ಹೇಳಿದ್ದೇವೆ. ಕ್ರೆಡಿಟ್ ನೀವೇ ತೆಗೆದುಕೊಳ್ಳಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ತಾವು ಸ್ವಲ್ಪ ಕೇಳಿ, ನೀವೇ ಸಿಓಡಿ ತನಿಖೆ ಮಾಡಿಸಿ ಎಂದು ಸಲಹೆ ಕೊಟ್ಟಿದ್ದಿರಿ. ನಿಮ್ಮ ಸಲಹೆಯಂತೆ ನಾವು ಸಿಓಡಿಗೆ ಕಳುಹಿಸಿಕೊಟ್ಟಿದ್ದೇವೆ. ಅವರು ವರದಿ ಕೊಡುವಷ್ಟರಲ್ಲಿ ಈ ಸದನಸಮಿತಿ ರಚನೆಯಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಸ್ವತಃ ಬೀದರ್‌ಗೆ ಹೋಗಿ ಅಲ್ಲಿರುವ ಸುಮಾರು ಹತ್ತು ಕುಟುಂಬಗಳನ್ನು ಭೇಟಿ ಮಾಡಿ ಬಂದೆ. ನಾನು ಹೋಗಿ ಬಂದ ಮೇಲೆ ಕೂಡ ನೀವು ಅನೌನ್ಸ್ ಮಾಡಿಲ್ಲ. ಅನೇಕ ಬೇರೆ ಬೇರೆ ಪಕ್ಷದ ಮುಖಂಡರು ಹೋದರು, ನಿಮ್ಮ ಅಧಿಕಾರಿಗಳು ನಮಗಿಂತ ಮುಂಚೆ ಕೆಲವು ಕಡೆ ಹೋದರು, ಆದರೆ ಪರಿಹಾರ ಕೊಡುವುದಕ್ಕೆ ತಮಗೇನು ತೊಂದರೆ? ಈಗ ಕೊಡುತ್ತೇವೆಂದರೆ ಏನರ್ಥ? ಅಂದರೆ ನಾವು ಇಲ್ಲಿ ಪ್ರಶ್ನೆ ಹಾಕಿ, ಕೇಳಿ ಗಲಾಟೆ ಮಾಡಿಯಾದ ಮೇಲೆ ಆ ಸದನಸಮಿತಿಯವರು ಹೇಳಿದಾದ ಮೇಲೆ ನೀವು ಪರಿಹಾರ ಕೊಡಬೇಕು

ಎಂದಿದೆಯೇ? ನೀವು ಹೇಳುವ ಪ್ರಕಾರ ಐದುನೂರು ರೂಪಾಯಿ ಅಂದರೆ ಸ್ವಲ್ಪ ಹೆಚ್ಚು ಕಡಿಮೆ ಇನ್ನೂರು ಐವತ್ತು ರೂಪಾಯಿ ಒಂದು ಎಕರೆಗೆ ಬರುತ್ತದೆ. ಸದನ ಸಮಿತಿಯವರು ಶಿಫಾರಸ್ಸು ಮಾಡಿದ್ದು ಐದು ನೂರು ರೂಪಾಯಿ ಎಂದು. ಕೊನೇ ಪಕ್ಷ ಇದಕ್ಕೆ ಇಪ್ಪತ್ತೈದು ಕೋಟಿ ರೂಪಾಯಿಗಳನ್ನಾದರೂ ತಾವು ತೆಗೆದಿಡಬೇಕು. ಆದರೆ ನೀವು ಇಟ್ಟಿರುವುದು ಕೇವಲ ನಾಲ್ಕು ಕೋಟಿ ರೂಪಾಯಿಗಳು ಮಾತ್ರ. ಇಂತಹ ಸನ್ನಿವೇಶದಲ್ಲಿ ಹಿಂದಿನ ಸರ್ಕಾರ ಎಷ್ಟು ಹಣ ಇಟ್ಟಿದೆ ಎಂಬುದನ್ನು ತಾವು ಬೇಕಾದರೆ ರಿಕಾರ್ಡ್ಸ್ ತೆಗಿಸಿ ನೋಡಿ. ಬೆಳೆ ಹಾನಿಗಾಗಿ ಸುಮಾರು ಹನ್ನೊಂದು ಕೋಟಿ ರೂಪಾಯಿಗಳನ್ನು ಒಂದು ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಒಂದು ಎಕರೆಗೆ ಸುಮಾರು ಐದುನೂರು ರೂಪಾಯಿಗಳನ್ನು ಕೊಟ್ಟಿದ್ದೇವೆ. ನೀವು ಇವತ್ತು ಯಾವುದೇ ಒಂದು ಅಸೆಸ್‌ಮೆಂಟ್ ಇಲ್ಲದೆ ಹಣವನ್ನೂ ಕೂಡ ಇಟ್ಟಿಲ್ಲ. ನಾವು ಜಿಲ್ಲಾಧಿಕಾರಿಗಳನ್ನು ಕೇಳಿದರೆ, ಬೀದರ್‌ಗೆ ಒಂದು ಕೋಟಿ, ಗುಲ್‌ಬರ್ಗಾಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಒಂದು ಕೋಟಿ ಇಪ್ಪತ್ತು ಲಕ್ಷ ಇರಬಹುದು ಎನ್ನುತ್ತಾರೆ. ಇದರ ಜೊತೆಗೆ ನಿಮ್ಮಲ್ಲಿರುವ ಪಿ.ಡಿ.ಅಕೌಂಟಿನಿಂದ ಕೊಟ್ಟು ಬಿಡಿ ಎಂದು ನೀವು ಒಂದು ಆರ್ಡರ್ ಕೂಡ ಮಾಡಿದ್ದೀರಿ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ನೀವು ಸದನಸಮಿತಿಯ ವರದಿ ಬರುವವರಿಗೆ ಕಾಯುತ್ತೇವೆಂದರೆ ಹೇಗೆ? ಏಕೆಂದರೆ ನಿಮ್ಮ ಸೋರ್ಸಸ್ ಎಷ್ಟಿದೆ? ನಿಮ್ಮ ಆಡಳಿತ ಇದೆ, ಯಥಾಪ್ರಕಾರ ನೀವು ಕೆಲಸ ಮಾಡಬೇಕಾಗುತ್ತದೆ. ಅಂದರೆ ಇದು ಎಲ್ಲವನ್ನೂ ಬಿಟ್ಟು ವರದಿ ಬರುವವರಿಗೆ ಕಾಯುತ್ತೇವೆಂದರೆ ಏನು? ಮತ್ತೊಂದು ಕಡೆ ಪರಿಹಾರ ಏಕೆ ಕೊಟ್ಟಿಲ್ಲ ಎಂದರೆ, ವರದಿ ಬರಲಿ ಕೊಡುತ್ತೇವೆ ಎನ್ನುತ್ತೀರಿ. ಸಂಪೂರ್ಣ ವರದಿ ಬರುವುದಕ್ಕೆ ಸುಮಾರು ಇನ್ನೂ ಮೂರು ತಿಂಗಳಾಗುತ್ತದೆ. ಅಂದರೆ ಆ ವರದಿ ಬರುವವರಿಗೆ ಮೂರು ತಿಂಗಳು ರಿಲೀಫ್ ಕೊಡುವುದಕ್ಕೆ ಕಾಯುತ್ತೀರಾ? These are emergent matters. ಯಾರೂ ಕೂಡ ಎಷ್ಟು ಬೆಳೆ ಹಾನಿಯಾಗಿದೆ ಅಷ್ಟಕ್ಕೂ ಪರಿಹಾರ ಕೊಡಿ ಎಂದು ಕೇಳುವುದಿಲ್ಲ. ಸರ್ಕಾರಕ್ಕೆ ಅಷ್ಟೊಂದು ಪರಿಹಾರ ಕೊಡುವುದಕ್ಕೂ ಸಾಧ್ಯವಿಲ್ಲ. ಆದರೆ ಕನಿಷ್ಠ ಪಕ್ಷ ಕಷ್ಟದಲ್ಲಿರುವವರಿಗೆ ಸರ್ಕಾರದ ವತಿಯಿಂದ ಏನು ಪರಿಹಾರವಾಯಿತು? ನಿಮ್ಮ ವರದಿಯಲ್ಲಿರುವಂತೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಎಷ್ಟು ಜನರಿಗೆ ಹಂಚಿದ್ದೀರಿ ಎಂಬುದನ್ನು ಹೇಳಿ. ಎಷ್ಟು ರೈತರಿಗೆ ಅದು ತಲುಪಿದೆ ಎನ್ನತಕ್ಕಂಥ ಅಂಕಿಅಂಶವನ್ನು ನನಗೆ ಕೊಡಿ. ನಿಮ್ಮ ವರದಿ ಪ್ರಕಾರ ಹೋದರೆ ಇನ್ನೂ ಸುಮಾರು ನೂರ ಎಂಭತ್ತು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಇಷ್ಟು ಹಣ ಸಾಕಾಗುವುದಿಲ್ಲ. ಇದಕ್ಕೆ ಏನು ತಾವು ಪರಿಹಾರವನ್ನು ಕಂಡುಹಿಡಿದಿದ್ದೀರಿ ಅಥವಾ ಯಾವ ರೀತಿ ನೀವು ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ? ಏಕೆಂದರೆ ಇದು ಬಹಳ ಗಂಭೀರವಾದ ವಿಷಯ. ಪ್ರತಿ ಒಂದು ಕಡೆ ಈ ವಿಷಯದ ಬಗ್ಗೆ ಸಾಕಷ್ಟು ಹೈಲೈಟ್ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಆಂಧ್ರಪ್ರದೇಶದಲ್ಲಿ ಇದರ ಬಗ್ಗೆ ಅಲ್ಲಿನ ರೈತರ ಸಮಸ್ಯೆಗಳ ಬಗ್ಗೆ ಪ್ರತಿಯೊಂದು ಪತ್ರಿಕೆಗಳಲ್ಲಿ ನ್ಯಾಷನಲ್ ಹುಕ್‌ನಲ್ಲಿ

ಬರುತ್ತಿದೆ. ಕರ್ನಾಟಕದಲ್ಲಿ, ಮಹಾರಾಷ್ಟ್ರದಲ್ಲಿ ಒಂದೆರಡು ಕೇಸ್ ಆಗಿದೆ ಎಂದು ಎಲ್ಲಾ ಕಡೆ ಹೈಲೈಟ್ ಆಗುತ್ತಿದೆ. ಇದು ಎಲ್ಲಿಗೆ ಹೋಗಿ ತಲುಪುತ್ತದೆ ಎನ್ನತಕ್ಕಂಥದ್ದು ಗೊತ್ತಾಗುತ್ತಿಲ್ಲ. ಇದೇ ರೀತಿ ನಾವು ಮುಂದುವರಿದಿದ್ದಾದರೆ, ಎಲ್ಲಿಗೆ ಹೋಗುತ್ತೇವೆ, ಏನು ಮಾಡುತ್ತೇವೆ, ಸಾಧ್ಯವಾಗುತ್ತದೆಯೋ ಇಲ್ಲವೋ, ಎನ್ನುವುದು ಗೊತ್ತಾಗುವುದಿಲ್ಲ. ಕನಿಷ್ಠಪಕ್ಷ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನ ಸರ್ಕಾರ ಪ್ರಾಮಾಣಿಕವಾಗಿ ಮಾಡದೇ ಹೋದರೆ, ನಾವು ರೈತರ ಕಷ್ಟದಲ್ಲಿ ಸಹಾಯ ಮಾಡಿದ ರೀತಿಯಲ್ಲಿ ಆಗುವುದಿಲ್ಲ. ಅವರು ನಮಗೆ ಮತ ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆ, ಅವರ ಬಗ್ಗೆ ನಾವು ಸ್ವಲ್ಪ ಚಿಂತನೆ ಮಾಡದಿದ್ದರೆ ಹೇಗೆ? ಆದ್ದರಿಂದ, ಲಕ್ಷಾಂತರ ಎಕರೆ ಭೂಮಿಗಳಲ್ಲಿ ಆಗಿರುವ ಬೆಳೆಹಾನಿಗೆ ತಾವು ಎಷ್ಟರಮಟ್ಟಿಗೆ ಹಣವನ್ನು ಬಿಡುಗಡೆ ಮಾಡಿದ್ದಿರಿ ಎಂಬುದನ್ನು ಹೇಳಬೇಕು. ಹಾಗೂ ಈ ಹಣ ಬಿಡುಗಡೆ ಮಾಡುವುದರಲ್ಲಿ ಏಕೆ ತಡವಾಗಿದೆ? ಈ ಎಲ್ಲಾ ವಿಷಯವನ್ನು ಸದನದಲ್ಲಿ ಹೇಳಬೇಕು. ಹಾಗೂ ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಏನು ಎಂಬುದನ್ನೂ ಕೂಡ ತಾವು ತಿಳಿಸಬೇಕಾಗುತ್ತದೆ. ಈ ವರದಿಯ ಆಧಾರದ ಮೇಲೆ ಎಷ್ಟು ದಿವಸಗಳಲ್ಲಿ ಪರಿಹಾರ ಕೊಡುತ್ತೀರಿ ಎನ್ನುವುದು ತಿಳಿಸಬೇಕು, ನಾನಾಗಲೇ ತಿಳಿಸಿದಂತೆ, ಒಂದು ಎಕರೆಗೆ ಎರಡುಸಾವಿರದ ಐದುನೂರು ರೂಪಾಯಿ ಎಂದು ಮಾಡಿದ್ದೀರಿ, ಇದನ್ನು ಯಾವ ರೈತರೂ ಒಪ್ಪುವುದಿಲ್ಲ. ಆದ್ದರಿಂದ ಕನಿಷ್ಠ ಪರಿಹಾರದ ಮೊತ್ತವನ್ನು ಐದುಸಾವಿರ ರೂಪಾಯಿ ಎಂದು ಮಾಡಬೇಕು. ಹಾಗೂ ತಕ್ಷಣವೇ ಈ ರೀಲೀಫನ್ನು ಕೊಡಬೇಕೆಂದು ಹೇಳುತ್ತಾ, ಇದಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೀರಿ, ಎಷ್ಟು ಹಂಚಿದ್ದೀರಿ? ಎಷ್ಟು ರೈತರಿಗೆ ಅದು ತಲುಪಿದೆ? ಈ ಎಲ್ಲಾ ವಿಷಯಗಳ ವರದಿ ಕೊಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

\+ ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ರೈತರ ಬಗ್ಗೆ, ಬೆಳೆಹಾನಿಯ ಬಗ್ಗೆ, ರಾಜ್ಯಸರ್ಕಾರ ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾದ ಒಂದು ಧೋರಣೆಯನ್ನು ಪ್ರಕಟ ಮಾಡಬೇಕಾಗುತ್ತದೆ. ಒಂದು ಮಾನವೀಯತೆಯ ದೃಷ್ಟಿಯಿಂದ ಗಮನಿಸಿ, ಸ್ವಲ್ಪ ಕಾನೂನನ್ನು ಪಕ್ಕಕ್ಕೆ ಸರಿಸಿ, ಏನೇನು ಕ್ರಮಗಳನ್ನು ಕೈಗೊಳ್ಳಬೇಕು, ಅವುಗಳನ್ನು ಬಹಳ ತುರ್ತಾಗಿ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಕು. ಎರಡನೆಯದಾಗಿ, ಈ ಕಳಪೆ ಬೀಜಗಳ ತಯಾರಕರು ಯಾರಿದ್ದಾರೆ, ಇದಕ್ಕೆ ಸಂಬಂಧಪಟ್ಟ ಅಂಗಡಿಗಳು ಯಾವುದು ಇವೆ, ಇಂಥವರ ಬಗ್ಗೆ ಬಲಿ ಹಾಕತಕ್ಕಂಥ ಒಂದು ಕಠೋರತೆಯನ್ನು ಕೂಡ ಈ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ದ್ರೋಹಿಗಳನ್ನು ಸರ್ಕಾರದವರು ಗಮನಿಸದೆ ಹೋದರೆ ಇವರು ಹಾಗೆ ಬೆಳೆಯುತ್ತಿರುತ್ತಾರೆ. ಸರ್ಕಾರ ಸುಮಾರು ಕೋಟಿ ರೂಪಾಯಿಗಳನ್ನು ಇಂಥ ಸಂದರ್ಭಕ್ಕೆ ಕೊಡುತ್ತಾ ಹೋದರೆ ಸರ್ಕಾರವು ಉಳಿಯುವುದಿಲ್ಲ. ಆದ್ದರಿಂದ ಈಗ ಆಗಿರುವ ವಿಚಾರದ ಬಗ್ಗೆ ಈಗಾಗಲೇ ಸದನ

ಸಮಿತಿಯ ವರದಿಯ ಆಧಾರದ ಮೇಲೆ ಯಾರು ಹತ್ತುಜನ ರೈತರು ಇದ್ದಾರೆ, ಅವರಿಗೆ ಈಗಾಗಲೇ ತುರ್ತಾಗಿ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಇಲ್ಲಿಯವರೆಗೆ ಕಾಯಬೇಕಾದ ಅವಶ್ಯಕತೆ ಖಂಡಿತ ಇರಲಿಲ್ಲ. ಏಕೆಂದರೆ ಈ ವಿಷಯ ಸರ್ಕಾರಕ್ಕೂ ಗೊತ್ತಿದೆ, ಹಾಗೂ ಇದಕ್ಕೆ ಸಂಬಂಧಿಸಿದಂತೆ ಸದನಸಮಿತಿಯವರು ಹೋಗಿ ಭೇಟಿ ಮಾಡಿಕೊಂಡು ಬಂದಿದ್ದಾರೆ. ಹಾಗೂ ವರದಿಯನ್ನೂ ಕೂಡ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳ ವರದಿಯ ಮೇರೆಗೆ ಅಥವಾ ಸದನ ಸಮಿತಿಯ ಪ್ರಮುಖರ ಜೊತೆಯಲ್ಲಿ ಮಾತನಾಡಿ, ಸಂಬಧಪಟ್ಟವರಿಗೆಲ್ಲಾ ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆಂದು ಸಂಬಂಧಪಟ್ಟಿರತಕ್ಕಂಥ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೆ ನಿಜಕ್ಕೂ ತುಂಬಾ ಸಂತೋಷವಾಗುತ್ತಿತ್ತು. ಸರ್ಕಾರಕ್ಕೇನೂ ಒಂದು ಹತ್ತು ಲಕ್ಷ ರೂಪಾಯಿ ದೊಡ್ಡ ಮೊತ್ತ ಆಗುತ್ತಿರಲಿಲ್ಲ. ಸದನ ಸಮಿತಿಯ ವರದಿ ಬಂದಿದೆ, ತುರ್ತಾಗಿ ಹಣವನ್ನು ಬಿಡುಗಡೆ ಮಾಡಿದರೆ ಸದನ ಸಮಿತಿಯನ್ನು ರಚನೆ ಮಾಡಿದ್ದುದು ಸಾರ್ಥಕವಾಗುತ್ತದೆ. ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇದೆ ಎಂದು ಗೊತ್ತಾಗುತ್ತಿತ್ತು. ಈ ಬೆಳೆನಾಶವಾಗಿರುವ ರೈತರಿಗೆ ಐದುನೂರು ರೂಪಾಯಿ ಒಂದು ಎಕರೆಗೆ ಕೊಡಬೇಕೆಂದು ಸದನಸಮಿತಿಯವರು ತೀರ್ಮಾನ ಮಾಡಿದ್ದಾರೆ. ಸಮಿತಿಯವರು ಮಾಡಿರುವ ತೀರ್ಮಾನಕ್ಕೆ ನಾವು ಸೀಮಿತವಾಗಿರುತ್ತೇವೆ ಎನ್ನುವಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬಾರದು ಎಂದು ನನಗೆ ಅನ್ನಿಸುತ್ತದೆ. ಬೇರೆ ರಾಜ್ಯದಲ್ಲಿ ಯಾವ ರೀತಿ ಪರಿಹಾರ ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕು. ಪಕ್ಕದಲ್ಲಿನ ಮಹಾರಾಷ್ಟ್ರದಲ್ಲಿ ಒಂದು ಸಾವಿರ ರೂಪಾಯಿ ಪರಿಹಾರ ಕೊಡಬೇಕಾದರೆ, ನಮ್ಮ ರಾಜ್ಯದಲ್ಲಿ ಐದುನೂರು ರೂಪಾಯಿ ಕೊಟ್ಟರೆ ಹೇಗೆ? ಸಮಿತಿಯವರು ಹೇಳಿರುವಂತೆ ನಾವು ಐದುನೂರು ರೂಪಾಯಿ ಕೊಡುತ್ತೇವೆಂದರೆ ಹೇಗೆ? ದಯಮಾಡಿ ರೈತರಿಗೆ ತೊಂದರೆ ಕೊಡುವುದಕ್ಕೆ ಯೋಚನೆ ಮಾಡಬಾರದು. ಸರ್ಕಾರ ಇವತ್ತು ತುರ್ತಾಗಿ ಒಂದು ಎಕರೆಗೆ 500 ರೂಪಾಯಿ ಕೊಡಬೇಕೆಂದು ಯೋಚನೆ ಮಾಡಿದೆ, ಆ ಹಣವನ್ನು ತಕ್ಷಣ ಕೊಡಬೇಕು. ಇವತ್ತು ಸದನ ಸಮಿತಿ 500 ರೂಪಾಯಿ ಕೊಡಲು ಶಿಫಾರಸು ಮಾಡಿರುವುದಕ್ಕೆ 1000 ರೂಪಾಯಿ ಕೊಡುತ್ತೇವೆಂದು ಮಂತ್ರಿಮಂಡಲ ಮಾನವೀಯತೆ ದೃಷ್ಟಿಯಿಂದ ಯೋಚನೆ ಮಾಡಬೇಕು. ಈ ಹಣವನ್ನು ತುರ್ತಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಬೇಕು. ರೈತರಿಂದ ಸರ್ಕಾರ ಶಹಭಾಶ್‌ಗಿರಿಯನ್ನು ಪಡೆಯಲೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ, ಈ ಸದನ ಸಮಿತಿ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಿಗೆ ಮಾತ್ರ ಹೋಗಿ ಬಂದಿದೆ. ಆದರೆ ಇವತ್ತು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ. ಈ ಸದನ ಸಮಿತಿಗೆ ಸಾಕಷ್ಟು ಸಮಯ ಕೊಟ್ಟಿರುವುದರಿಂದ ಉಳಿದ ಜಿಲ್ಲೆಗಳಿಗೆ ಹೋಗಬೇಕು. ಏಕೆಂದರೆ ಇವತ್ತು ತೊಂದರೆ ಅನುಭವಿಸುತ್ತಿರುವ ರೈತರು ಸದನ ಸಮಿತಿ ಬರುತ್ತದೆಂದು ಕಾಯುತ್ತಿದ್ದಾರೆ. ಆದ್ದರಿಂದ ಈ ಸಮಿತಿ ತುರ್ತಾಗಿ ಉಳಿದ ಜಿಲ್ಲೆಗಳಿಗೆ ಹೋಗಬೇಕೆಂದು ನಾನು ಅಪೇಕ್ಷಿಪಡುತ್ತೇನೆ ಮತ್ತು ಆಗಲೀ ಹೇಳಿದ ಹಾಗೆ ಈ

ಸರ್ಕಾರಕ್ಕೆ ಕಠೋರತೆ ಕೂಡ ಇರಬೇಕು. ಕಳಪೆ ಕೀಟನಾಶಕ ಔಷಧಿಗಳನ್ನು ತಯಾರು ಮಾಡತಕ್ಕಂಥ ಕಂಪನಿಗಳು ಮತ್ತು ಡೀಲರ್‌ಗಳು ಹಾಗೂ ಅಂಗಡಿಗಳು, ಇಂಥವರ ಬಗ್ಗೆ ತುರ್ತಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಕಾರ್ಯ ಇಷ್ಟರೊಳಗೆ ಆಗಬೇಕಾಗಿತ್ತು ಆದರೂ ಇನ್ನೂ ಆಗಿಲ್ಲ. ಇದಕ್ಕೆ ಕಾನೂನಿನ ತಿದ್ದುಪಡಿಯನ್ನು ಮಾಡುವುದಾದರೆ ಮಾಡಿ. ಈಗಾಗಲೇ ಕೇಂದ್ರಸರ್ಕಾರದಲ್ಲಿ ತಿದ್ದುಪಡಿ ಮಾಡುವ ಪ್ರಯತ್ನ ಆಗುತ್ತಿದೆ ಎಂದು ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ಬಾಬಾಗೌಡ ಪಾಟೀಲ್‌ರವರು ಹೇಳಿದ್ದಾರೆ ಮತ್ತು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ರಾಜ್ಯ ಸರ್ಕಾರಕ್ಕೂ ಕಳಕಳಿ ಇದೆ, ನಾನು ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇದರ ಬಗ್ಗೆ ತುರ್ತಾಗಿ ಒಟ್ಟಿಗೆ ಯೋಚನೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಇವತ್ತು ರೈತರಿಗೆ ಕಳಪೆ ಕೀಟನಾಶಕವನ್ನು ಸರಬರಾಜು ಮಾಡತಕ್ಕಂಥ ದುಡಿಮೆ ಅವರು ಮಾಡುತ್ತಿರಬಹುದು, ಆದರೆ ರೈತರಿಗೆ ವಿಷ ಹಾಕತಕ್ಕಂಥ ಪ್ರಯತ್ನವನ್ನು ಇವತ್ತು ಮಾಡಿದ್ದಾರೆ. ಆದ್ದರಿಂದ ಸರ್ಕಾರ ತುರ್ತಾಗಿ ಕಾನೂನನ್ನು ತಿದ್ದುಪಡಿ ಮಾಡುವ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕೆಂದು, ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಲದ ವ್ಯವಸ್ಥೆಯಿಂದ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಅವರ ಸಾಲವನ್ನು ದೀರ್ಘಕಾಲದ ಸಾಲಕ್ಕೆ ಪರಿವರ್ತನೆ ಮಾಡಿ, ರೈತರಿಗೆ ರಕ್ಷಣೆ ಕೊಡಲು ನಿಮ್ಮ ಜೊತೆ ಬರಲು ತಯಾರಾಗಿದ್ದೇವೆ ಎಂದು, ಆಶ್ವಾಸನೆ ಅಥವಾ ಧೈರ್ಯ ಮತ್ತು ಪ್ರೋತ್ಸಾಹ ಕೊಟ್ಟರೆ, ಖಂಡಿತವಾಗಿ ಅವರು ನಮ್ಮ ಜೊತೆ ಸರ್ಕಾರ ಇದೆ ಎಂಬ ನಂಬಿಕೆ ಮತ್ತು ವಿಶ್ವಾಸ ಕೂಡ ಬರುತ್ತದೆ. ಆದ್ದರಿಂದ ಸರ್ಕಾರ ಈ ದಿಕ್ಕಿನಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಕಡೆ ಬಡವರು, ಪೋಸ್ಟ್‌ಮಾರ್ಟಮ್ ರಿಪೋರ್ಟ್ ಆಗಿಲ್ಲ ಮತ್ತು ಸಣ್ಣಪುಟ್ಟ ಹೇಳಿಕೆಯನ್ನು ಕೊಟ್ಟು ತೊಂದರೆ ಒಳಗಾಗಿರತಕ್ಕಂಥ ಆ ಕುಟುಂಬಗಳಿಗೆ, ಯಾವುದೋ ಒಂದು ನೆಪ ಒಡ್ಡಿ, ಅವರಿಗೆ ಇದನ್ನು ತಪ್ಪಿಸದಂತೆ ಮಾಡದೆ, ಇವತ್ತು ಎಲ್ಲೆಲ್ಲಿ ಆತ್ಮಹತ್ಯೆ ಆಗಿದೆ, ಅವರೆಲ್ಲರಿಗೂ ಕೂಡ ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕು. ಇದಕ್ಕೆ ಸುಮಾರು 150ರಿಂದ 200 ಕೋಟಿ ರೂಪಾಯಿ ಹಣ ಬೇಕಾಗುತ್ತದೆ ಈ ಕಾರ್ಯಕ್ಕೆ ರಾಜ್ಯ ಸರ್ಕಾರ ಮೊದಲನೆಯ ಆದ್ಯತೆಯನ್ನು ಕೊಡಬೇಕು. ಇದಕ್ಕೆ ಸ್ವಲ್ಪ ಸ್ವಲ್ಪ ಹಣ ಬಿಡುಗಡೆ ಮಾಡುವ ಬದಲು, ಸದನ ಸಮಿತಿ ಬೆಳೆ ನಾಶದ ಬಗ್ಗೆ ಏನು ವರದಿ ಕೊಟ್ಟಿದೆ, ಆ ಭಾಗದಲ್ಲಿನ ಸಂಕಷ್ಟರಿಗೆ ಕೊಡಲು ಬೇಕಾಗಿರುವ ಸುಮಾರು 150ರಿಂದ 200 ಕೋಟಿ ರೂಪಾಯಿ ಹಣವನ್ನು ತುರ್ತಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿ ರೈತರ ಭರವಸೆ ಸರ್ಕಾರ ಆಗಲಿ ಎಂದು ಹೇಳಿ ಒತ್ತಾಯ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ, ಸರ್ಕಾರವನ್ನು ತಮ್ಮ ಮುಖಾಂತರ ಕೇಳತಕ್ಕಂಥದ್ದೇನೆಂದರೆ,

ಮಧ್ಯಂತರ ವರದಿಯನ್ನು ಮಂಡಿಸಬೇಕೆಂದು ನಾವು ಒತ್ತಾಯ ಮಾಡಿದ್ದೆವು. ತಕ್ಷಣ ಪರಿಹಾರ ಕೊಡಬೇಕೆಂಬ ಕಾರಣದಿಂದಾಗಿ ಸದನದಲ್ಲಿ ಒತ್ತಾಯ ಮಾಡಲಾಗಿತ್ತು. ನಾನು ಮೊದಲು ಕೇಳುವುದೇನೆಂದರೆ, ಈ ಸದನ ಸಮಿತಿ ಒಪ್ಪಿಸಿರತಕ್ಕಂಥ ಮಧ್ಯಂತರ ವರದಿಯನ್ನು ಸರ್ಕಾರ ಪರಿಶೀಲನೆ ಮಾಡಿ ಒಪ್ಪಿದೆಯೇ? ಏಕೆಂದರೆ ಸದನ ಸಮಿತಿ ರಿಪೋರ್ಟ್ ಕೊಟ್ಟಿದೆ, ಸರ್ಕಾರ ಪರಿಹಾರ ಕೊಡಬೇಕಾದರೆ, ಮಧ್ಯಂತರ ವರದಿಯಲ್ಲಿರತಕ್ಕಂಥ ಅಂಶಗಳನ್ನು ಸರ್ಕಾರ ಪರಿಶೀಲನೆ ಮಾಡಿ ಒಪ್ಪಬೇಕು. ಇಲ್ಲದಿದ್ದರೆ ಕೊಡುವುದಕ್ಕೆ ಬರುವುದಿಲ್ಲ, ನಾನು ಮೊದಲನೆಯದಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದೇನೆಂದರೆ, ಈ ವರದಿಯನ್ನು ಸರ್ಕಾರ ಒಪ್ಪಿದೆಯೆ? ಇದನ್ನು ಸರ್ಕಾರ ಹೇಳಬೇಕಾಗುತ್ತದೆ. ಎರಡನೆಯದಾಗಿ, ಇದು ಮಧ್ಯಂತರ ವರದಿ ಆಗಿರತಕ್ಕಂಥ ಕಾರಣಕ್ಕೋಸ್ಕರ ವಿವರವಾದಂಥ ಅಂಶಗಳು ಇದರಲ್ಲಿ ಇಲ್ಲ. ಬಹಳಷ್ಟು ಕಡಿಮೆ ವಿವರಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ಏಕೆ ಎಂದು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಸಮಯದ ಅಭಾವ ಮತ್ತು ಸದನ ನಡೆಯುತ್ತಿರುವಾಗ ಸದಸ್ಯರು ಸದನಕ್ಕೂ ಹಾಜರಾಗಬೇಕು ಮತ್ತು ತನಿಖೆ ಮಾಡಬೇಕೆಂದು ಹೇಳತಕ್ಕಂಥದ್ದರಲ್ಲಿ ಕೆಲವು ಸಮಸ್ಯೆಗಳು ಉದ್ಭವವಾಗುತ್ತದೆ. ಆದರೆ ಈಗ ಕೊಟ್ಟಿರತಕ್ಕಂಥ ವರದಿಯಲ್ಲಿ ಏನು ಶಿಫಾರಸು ಮಾಡಿದ್ದಾರೆ, ಅದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಎರಡು ಅಂಶಗಳಿವೆ. ಮೊದಲನೆಯದು, ಬೆಳೆನಷ್ಟಕ್ಕೆ ಪರಿಹಾರ ಎಂದು ಇದರಲ್ಲಿ ಏನು ಅಭಿಪ್ರಾಯ ಕೊಟ್ಟಿದ್ದಾರೆಂದರೆ, ಪ್ರತಿ ಹೆಕ್ಟೇರಿಗೆ 500 ರೂಪಾಯಿಗಳಂತೆ ಹಾಗು ಒಬ್ಬ ರೈತನಿಗೆ 2000 ಗರಿಷ್ಠ ಪರಿಹಾರ ನೀಡಲು ತಿಳಿಸಿದೆ.

ಶ್ರೀ ಸಿ.ಬೈರೇಗೌಡ: ಸರ್ಕಾರ ಮಾಡಿರುವ ಆಜ್ಞೆಯನ್ನು ಓದುತ್ತಿದ್ದೀರಿ, ಕೊನೆಯಲ್ಲಿ ಶಿಫಾರಸ್ಸು ಮಾಡಿರುವುದು ಇದೆ, ಅದನ್ನು ನೋಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದರಲ್ಲಿ ಬೆಳೆ ನಷ್ಟಕ್ಕೆ ಪರಿಹಾರಕ್ಕೆ ಸರಳವಾದ ಪದ್ಧತಿಯನ್ನು ರೂಪಿಸುವುದು ಹಾಗೂ ಈ ಬಗ್ಗೆ ಬೆಳೆಯ ಆಣೇವಾರಿಯನ್ನು ಕೂಡಲೇ ಪ್ರಕಟಿಸುವುದೆಂದು ಇದೆ, ನಾನು ಇದರ ಬಗ್ಗೆ ಹೇಳುತ್ತಿಲ್ಲ, ಮೊದಲು ಕೊಟ್ಟಿರುವ ಅಂಶಗಳ ಬಗ್ಗೆ ಮಾತನಾಡುತ್ತಿದ್ದೇನೆ, ಇದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಮೊದಲನೆಯದರಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದು, 10 ಜನ ಸತ್ತಿದ್ದಾರೆ, ಅದರಲ್ಲಿ 3 ಜನಕ್ಕೆ ಪರಿಹಾರ ಕೊಡತಕ್ಕಂಥ ಅವಶ್ಯಕತೆ ಇಲ್ಲ, ಅವರು ಬೇರೆ ಕಾರಣಕ್ಕೋಸ್ಕರ ಸತ್ತಿದ್ದಾರೆ ಎಂಬ ಅಂಶವನ್ನು ಇದರಲ್ಲಿ ತಿಳಿಸಿದ್ದಾರೆ. ಈ ವರದಿಯಲ್ಲಿ ಭೋಜರಾಜ, ಬಸಪ್ಪ ಮತ್ತು ದಿಲೀಪ್ ಈ ಮೂರು ಜನರಿಗೆ ಅವಶ್ಯಕತೆ ಇಲ್ಲ ಎನ್ನತಕ್ಕಂಥ ರೀತಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಈ ರೀತಿ ಹೇಳುವಾಗ, ಈ ಮೂರು ಜನರು ಬೇರೆ ಕಾರಣಕ್ಕೋಸ್ಕರ ಸತ್ತಿದ್ದರೂ ಕೂಡ, ಬೆಳೆ ನಷ್ಟ ಆಗಿದೆ ಎನ್ನತಕ್ಕಂಥ ಅಂಶಗಳನ್ನು ಇದರಲ್ಲಿ ಗಮನಿಸಿದ್ದಾರೆ. ಬೆಳೆ ನಷ್ಟವಾಗಿರುವುದು ಸತ್ಯ ಎಂದು ಗೊತ್ತಾದಾಗ, ಅವರು ಬೇರೆ ಕಾರಣಕ್ಕೆ ಸತ್ತಿದ್ದಾರೆಂದು ಹೇಳತಕ್ಕಂಥದ್ದು

ಎಷ್ಟು ಸರಿ ಎಂಬುದನ್ನು ಸರ್ಕಾರ ಮರು ಪರಿಶೀಲನೆ ಮಾಡಬೇಕಾಗುತ್ತದೆ. ವರದಿಯಲ್ಲಿ ಹೇಳಿರುವ ಪ್ರಕಾರ ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ಸದನ ಸಮಿತಿ ಏನು ಶಿಫಾರಸ್ಸು ಮಾಡಿದ್ದಾರೆ ಅದರಷ್ಟಾದರೂ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಈ ಹಣಕ್ಕಿಂತ ಹೆಚ್ಚು ಮಾಡಿಯಾದರೂ ಕೊಡಬೇಕಾಗುತ್ತದೆ ಅಥವಾ ಸದನ ಸಮಿತಿ ಮಾಡಿರುವುದು ಜಾಸ್ತಿ, ಇಷ್ಟೊಂದು ಕೊಡುವುದಕ್ಕೆ ಆಗುವುದಿಲ್ಲವೆಂದು ಸರ್ಕಾರ ತೀರ್ಮಾನ ಮಾಡಿಯಾದರೂ ಕೊಡಬೇಕಾಗುತ್ತದೆ. ಇದು ತಮ್ಮ ಮುಂದೆ ಇರತಕ್ಕಂಥ ಪ್ರಶ್ನೆ. ವರದಿಯಲ್ಲಿರುವ ಹಾಗೆ ಬಹಳ ಮುಖ್ಯವಾದುದೆಂದರೆ, ತಕ್ಷಣ ಪರಿಹಾರ ಕೊಡಬೇಕೆಂಬುದೇ ನಮ್ಮ ಒತ್ತಾಯ. ಮತ್ತೆ ನೀವು ವರದಿ ಬರಬೇಕಾಗಿದೆ ಮತ್ತು ಅದರಲ್ಲಿ ಏನಿದೆ ಎಂಬುದನ್ನು ಪರಿಶೀಲನೆ ಮಾಡಬೇಕು ಎನ್ನತಕ್ಕಂಥ ಅಂಶ ಬೇರೆ. ಕೊನೆಯಲ್ಲಿ ಶಿಫಾರಸ್ಸು ಮಾಡತಕ್ಕಂಥ ಎರಡು ಅಂಶಗಳೇನೆಂದರೆ, 1997-98ನೇ ಸಾಲಿನಲ್ಲಿ ಬೆಳೆ ನಷ್ಟ ಪರಿಹಾರ ಪ್ರತಿ ಎಕರೆಗೆ 500 ರೂ.ನಂತೆ ಮತ್ತು ಒಬ್ಬ ರೈತನಿಗೆ ಗರಿಷ್ಠ 2500 ರೂ.ಗಳು ಮೀರದಂತೆ ನೀಡುವುದು, ಇದು ಸಮಿತಿಯ ಸಲಹೆಯಾಗಿದೆ. ಆದರೆ ಏನು ಆಜ್ಞೆ ಕೊಟ್ಟಿದ್ದೀರಿ, ಅದಕ್ಕೂ ಇದಕ್ಕೂ ದೊಡ್ಡ ವ್ಯತ್ಯಾಸ ಏನೂ ಇಲ್ಲ. ಸಮಿತಿ 500 ರೂಪಾಯಿ ಎಂದು ಹೇಳಿದೆ ಸರ್ಕಾರ ಕೂಡ ಅದೇ ರೀತಿ ಹೇಳಿದೆ ಮತ್ತು ಸರ್ಕಾರ 2000 ರೂಪಾಯಿ ಗರಿಷ್ಠ ಎಂದು ಹೇಳಿದರೆ, ಸಮಿತಿಯವರು ಒಂದು ಎಕರೆಗೆ 2500 ರೂಪಾಯಿ ಗರಿಷ್ಠ ಎಂದು ಮಾಡಿದ್ದಾರೆ.

ವೈಸ್ ಚೇರ್ಮನ್: ಸರ್ಕಾರ ಮಾಡಿರುವಂಥದು ಹೆಕ್ಟೇರಿಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರ, 500 ರೂಪಾಯಿ ಮತ್ತು 2000 ರೂಪಾಯಿ ಗರಿಷ್ಠ, ಒಂದು ಹೆಕ್ಟೇರಿಗೆ ಎಂದು ಹೇಳಿದೆ. ಆದರೆ ಸಮಿತಿಯವರು ಪ್ರತಿ ಎಕರೆಗೆ ಎಂದು ಹೇಳಿದ್ದಾರೆ. ಒಂದು ಹೆಕ್ಟೇರಿಗೆ, 2.5 ಎಕರೆ ಇದೇನೂ ದೊಡ್ಡ ಡಿಫರೆನ್ಸ್ ಆಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಒಂದು ಎಕರೆಗೆ 500 ರೂಪಾಯಿಯಲ್ಲಿ ಒಬ್ಬ ರೈತ ಬಂಡವಾಳ ಹಾಕಿ ವ್ಯವಸಾಯ ಮಾಡುವುದಕ್ಕೆ ಆಗುತ್ತದೆಯೋ, ಇಲ್ಲವೋ ಎಂದು ಮತ್ತು ಒಂದು ಎಕರೆಗೆ 500 ರೂಪಾಯಿಯಿಂದ 2500 ರೂಪಾಯಿ ಸೀಮಿತಗೊಳಿಸುವುದಾದರೆ ಇದು ಸಾಧ್ಯವೇ ಎಂಬುದು ನಮಗಿಂತ, ಮಾನ್ಯ ಬೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಒಬ್ಬ ರೈತ ಒಂದು ಎಕರೆಯಲ್ಲಿ ಬೇಸಾಯ ಮಾಡಬೇಕಾದರೆ, ಅದರ ಇನ್‌ವೆಸ್ಟ್‌ಮೆಂಟ್ ಕಾಸ್ಟ್ ಎಷ್ಟು ಆಗುತ್ತದೆ? ಇಲ್ಲಿ ಲಾಭನಷ್ಟದ ಪ್ರಶ್ನೆ ಬೇಡ. ಇನ್‌ವೆಸ್ಟ್‌ಮೆಂಟ್ ಕಾಸ್ಟ್ ಇವತ್ತು ಯಾವೊಬ್ಬ ರೈತನಿಗೂ 500 ರೂಪಾಯಿಯಲ್ಲಿ ಬೆಳೆ ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಅಷ್ಟಾದರೂ ಅರ್ಥ ಮಾಡಿಕೊಂಡು ಒಂದು ಎಕರೆಗೆ 500 ರೂಪಾಯಿ ಸೂಚಿಸಿರುವುದು ಬಹಳ ಕಡಿಮೆ ಆಗುತ್ತದೆ. ಆದ್ದರಿಂದ ಕನಿಷ್ಠ 1000 ರೂಪಾಯಿಗಳನ್ನಾದರೂ ಒಂದು ಎಕರೆಗೆ ಬೆಳೆ ನಷ್ಟಕ್ಕೆಂದು ಕೊಡಬೇಕಾಗುತ್ತದೆಂದು ನನ್ನ ಒತ್ತಾಯ. ಗರಿಷ್ಠ 2500 ರೂಪಾಯಿ ಎಂದು ಇದೆ, ಇದು ಬೇರೆ ಬೇರೆ ರೀತಿಯಾದ ಬೆಳೆಗಳ ಮೇಲೆ ಲೆಕ್ಕ ಹಾಕಬೇಕಾಗುತ್ತದೆ.

ಇದು ಕಾಸ್ಟ್ ಆಫ್ ಇನ್‌ವೆಸ್ಟ್‌ಮೆಂಟ್ ಮೇಲೆ ಹೊಂದಿಕೊಂಡಿರುತ್ತದೆ. ಇವತ್ತು ರೈತ ಏಕ ರೂಪದ ಬೆಳೆಯನ್ನು ಇಟ್ಟಿರುವುದಿಲ್ಲ, ಆದ್ದರಿಂದ ಬೇರೆ ಬೇರೆ ರೀತಿ ಬೆಳೆ ಇರುವುದರಿಂದ ಅದಕ್ಕೆ ಹೊಂದಿಕೊಂಡಿರುವಂತೆ ರೇಟ್ ನಿಗದಿ ಮಾಡಬೇಕಾಗುತ್ತದೆ. ಬೆಳೆ ನಾಶವಾಗಿದೆ. ನಾಶವಾದ ಎಲ್ಲಾ ಬೆಳೆಗಳಿಗೂ ಪರಿಹಾರವನ್ನು ಕೊಡಬೇಕು. ಎಲ್ಲಾ ವರ್ಗದ ರೈತರಿಗೆ ಗರಿಷ್ಠ ಮಿತಿಯಲ್ಲಿ ಪರಿಹಾರ ನೀಡತಕ್ಕಂಥ ಒಂದು ಅಂಶವನ್ನು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಸರ್ಕಾರ ಒಪ್ಪಬಹುದು. ಮತ್ತು ಇದರಲ್ಲಿರುವ ಕಡೆಯ ಅಂಶ ಇದು ಬಹಳ ಸಮಸ್ಯೆಯಾಗಿದೆ. ಇದರ ಬಗ್ಗೆ ದೀರ್ಘವಾದ ಆಲೋಚನೆ ಮಾಡುವುದು ಒಳ್ಳೆಯದು. ಕಂದಾಯ ಇಲಾಖೆ ಈ ಒಂದು ಕಾನೂನಿನ ಪ್ರಕಾರ ಬೆಳೆ ಆಣೆವಾರಿ ಡಿಕ್ಲೇರ್ ಮಾಡತಕ್ಕಂಥದ್ದು ಇದು ಬಹಳ ಹಳೆಯ ಕಾಲದ ನಿಯಮ. ಉದಾಹರಣೆಗೆ ಬೆಳೆ ಆಣೆವಾರಿ ನಷ್ಟವನ್ನು ಸರ್ಕಾರ ಪರಿಗಣನೆ ಮಾಡಬೇಕಾದರೆ ಮೂರು ವರ್ಷದ ಸರಾಸರಿ ತೆಗೆದುಕೊಳ್ಳುತ್ತಾರೆ. ಸರ್ಕಾರ ವರದಿ ತೆಗೆದುಕೊಂಡು, ಮೂರು ವರ್ಷದ ಸರಾಸರಿ ಶೇಕಡ 50 ಕಡಿಮೆ ಆದರೆ ಸರ್ಕಾರ ರೈತರಿಗೆ ಎಲ್ಲಾ ವಿನಾಯಿತಿ ನೀಡಿ, ಪರಿಹಾರವನ್ನು ಕೊಡಬೇಕೆಂದು ಈಗಿರತಕ್ಕಂಥ ಕಂದಾಯ ಇಲಾಖೆಯ ಕಾನೂನು ಹೇಳುತ್ತಿದೆ. ಆರಾಣೆ ಕಡಿಮೆ ಇರಬೇಕೆಂದು ಇದು ಸಾಧ್ಯವಿಲ್ಲ. ಮೂರು ವರ್ಷದ ಸರಾಸರಿ ತೆಗೆದುಕೊಂಡು ಬಿಟ್ಟರೆ ಸರ್ಕಾರ ಎಂದೆಂದಿಗೂ ರೈತರಿಗೆ ಆಣೆವಾರಿ ವರದಿ ಆಧಾರದ ಮೇಲೆ ಪರಿಹಾರವನ್ನು ಕೊಡುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಒಂದು ವರ್ಷ ಶೇಕಡ 80 ನಾಶವಾಗಿರುತ್ತದೆ. ನಮ್ಮ ಜಿಲ್ಲೆಯಲ್ಲಿ ಕಳೆದ ವರ್ಷದ ಅದರ ಹಿಂದಿನ ವರ್ಷ ಶೇಕಡ 80 ನಷ್ಟವಾಗಿತ್ತು ಮತ್ತು ಕಳೆದ ವರ್ಷ ಶೇಕಡ 70 ನಷ್ಟವಾಗಿದೆ. ಈಗ ಶೇಕಡ 26 ಇಲ್ಲ. ಕೆಲವು ತಾಲ್ಲೂಕುಗಳಲ್ಲಿ ಶೇಕಡ 20 ಇಲ್ಲ. ನಮ್ಮ ದುರಾದೃಷ್ಟ ಏನಾಗಿದೆ: ಮೂರು ವರ್ಷದ ಸರಾಸರಿ 80,70,26 ಅಲ್ಲಿಗೆ ಸರಾಸರಿ ಶೇಕಡ 56 ಆಗುತ್ತದೆ. ಹಾಗಾದರೆ ನಮ್ಮ ಜಿಲ್ಲೆಯಲ್ಲಿ ರೈತರ ಎಲ್ಲಾ ಬೆಲೆ ಸಂಪೂರ್ಣವಾಗಿ ನಾಶವಾಗಿದೆ. ನಮ್ಮಲ್ಲಿ ಮುಖ್ಯವಾದ ಬೆಳೆ ಕಡಲೆಕಾಯಿ. ಭತ್ತ ನಾಶವಾಗಿದೆ, ರಾಗಿ ನಾಶವಾಗಿದೆ. ಟೊಮೊಟೋ ಎಲ್ಲಾ ನಾಶವಾಗಿದೆ. ಆದರೆ ಈ ವರ್ಷ ಮಳೆ ಇಲ್ಲ, ಬೆಳೆ ಇಲ್ಲ, ಆದ ಕಾರಣ ಎಲ್ಲಾ ಹಾಳಾಗಿದೆ. ನಮ್ಮ ಸರ್ಕಾರ ಈಗ ಕೊಟ್ಟಿರುವ ವರದಿ ಪ್ರಕಾರ ಕೇವಲ 23,20,26 ಪರ್ಸೆಂಟ್ ಬೆಳೆ ನಾಶವಾಗಿದೆ ಎಂದು ಹೇಳಿದ್ದಾರೆ. ಆದರೆ ನಮಗೆ ಪ್ರಯೋಜನ ಆಗುತ್ತಾ ಇಲ್ಲ, ಕಡಿಮೆಯಾದರೂ ಕೂಡ, ಇವರು ಮೂರು ವರ್ಷದ ಸರಾಸರಿ ತೆಗೆದುಕೊಂಡರೆ ಸಾಧ್ಯವಿಲ್ಲ. ಅದನ್ನು ಖಂಡಿತವಾಗಿ ಬದಲಾವಣೆ ಮಾಡಬೇಕು. ಬದಲಾವಣೆ ಮಾಡದೇ ಹೋದರೆ ಪರಿಹಾರ ಕೊಡಲು ಸಾಧ್ಯವಾಗುವುದಿಲ್ಲ. ಇದನ್ನು ಮೂರನೇ ಅಂಶದಲ್ಲಿ ಶಿಫಾರಸ್ಸು ಮಾಡಲಾಗಿದೆ. ಬೆಳೆ ಹಾನಿಗೆ ಪರಿಹಾರವನ್ನು ನೀಡುವುದಕ್ಕೆ ಸರಳವಾದ ಪದ್ಧತಿಯನ್ನು ರೂಪಿಸುವುದು. ಆದರೆ ಈ ಬಗ್ಗೆ ಬೆಳೆ ಆಣೆವಾರಿಯನ್ನು ಕೂಡಲೇ ಪ್ರಕಟಿಸಿ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲು ಸಮಿತಿಯ ಅಭಿಪ್ರಾಯ ಪಟ್ಟಿದೆ. ಒಳ್ಳೆಯ

ಸೂಚನೆ ಕೊಟ್ಟಿದ್ದಾರೆ. ಆದರೆ ಈ ಸೂಚನೆ ಬದಲಾವಣೆ ಮಾಡಬೇಕಾಗುತ್ತದೆ. ನಿಯಮ ಬದಲಾವಣೆ ಮಾಡಬೇಕು. ನಿಯಮಗಳನ್ನು ಬದಲಾವಣೆ ಮಾಡದೆ ಈ ಆಣೆವಾರಿ ವರದಿ ಆಧಾರದ ಮೇಲೆ ಪರಿಹಾರವನ್ನು ಕೊಡಲು ಸಾಧ್ಯವಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ. ಕಂದಾಯ ಮಂತ್ರಿಗಳು ಇದನ್ನು ಗಮನಿಸಿ ಬದಲಾವಣೆ ಮಾಡಬೇಕು. ಒಂದು ಹೆಕ್ಟೇರಿಗೆ 500 ರೂಪಾಯಿಗಳನ್ನು ಇದನ್ನು ನಿಯಮದಲ್ಲಿ ಬದಲಾವಣೆ ಮಾಡಬೇಕು. ಅದನ್ನು ಬದಲಾವಣೆ ಮಾಡದೇ ಹೋದರೆ ನೀವು ಪರಿಹಾರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರ ಮೊದಲು ಒಪ್ಪಿದೆಯೇ? ಒಪ್ಪಿದ್ದರೆ ತಕ್ಷಣ ಸರ್ಕಾರ ಪರಿಹಾರವನ್ನು ಕೊಡಿ. ಆಣೆವಾರಿ ವರದಿಯ ನಿಯಮದಲ್ಲಿ ಬದಲಾವಣೆ ಮಾಡಬೇಕು. ಪ್ರತಿಯೊಂದು ಹೆಕ್ಟೇರ್‌ಗೆ 500 ರೂಪಾಯಿಗಳು ಇದ್ದದ್ದನ್ನು ಒಂದು ಸಾವಿರ ರೂಪಾಯಿಗಳಿಗೆ ಮಾಡಬೇಕು. ಗರಿಷ್ಟ ಮಿತಿಯನ್ನು ಬೆಳೆ ನಾಶದ ಆಧಾರದ ಮೇಲೆ ನಿಗದಿ ಮಾಡಬೇಕು. ಮೆಕ್ಯಾನಿಕಲ್ ಆಗಿ 2500 ರೂಪಾಯಿಗಳೆಂದು ಫಿಕ್ಸ್ ಮಾಡುವುದರಲ್ಲಿ ಅರ್ಥ ಇಲ್ಲ. ಯಾವ ಯಾವ ರೂಪದಲ್ಲಿ ರೈತ ಬೆಳೆ ಇಟ್ಟಿರುತ್ತಾನೆ, ಅದರ ಆಧಾರದ ಮೇಲೆ ಹಂಚಿಕೊಂಡು ಬೆಲೆ ನಿಗದಿ ಮಾಡಬೇಕಾಗುತ್ತದೆ. ಆ ರೀತಿ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಇತಿಹಾಸದಲ್ಲಿ ರೈತರು ಸಾಲ ಕೊಡಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಸಂಗ ನಡೆದಿರಲಿಲ್ಲ. ಇದು ನಿಜವಾಗಿಯೂ ಕಣ್ಣೀರುಡುವಂಥ ಪ್ರಸಂಗ. ಇದರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ತೀವ್ರವಾದಂಥ ಗಮನಹರಿಸಬೇಕಾದಂಥದ್ದು ಕರ್ತವ್ಯ. ಈ ಸದನದಲ್ಲಿ ಚರ್ಚೆ ಆದಾಗ ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಇದಕ್ಕೆ ಒಂದು ಸಮಿತಿ ನೇಮಕವಾಗಿದೆ. ಸಮಿತಿಯ ವರದಿ ನಮ್ಮ ಕೈಗೆ ಸೇರಿದೆ. ಶ್ರೀರಾಮರೆಡ್ಡಿಯವರು ಹೇಳಿದ ಪ್ರಕಾರ ಸರ್ಕಾರ ಮೊದಲು ಆ ಸಮಿತಿಯ ವರದಿಯನ್ನು ಒಪ್ಪಿದೆಯೇ? ಚಾಚೂ ತಪ್ಪದೆ ಈ ವರದಿಯನ್ನು ಸರ್ಕಾರ, ಅಕ್ಷರಶಃ ಒಪ್ಪಿದೆಯೇ; ಅದರ ಪ್ರಕಾರ ಮಾಡುತ್ತದೆಯೇ? ಇಲ್ಲಿ ಎರಡು ಮೂರು ಕಡೆ ಈ ವರದಿ ಅಸ್ಪಷ್ಟವಾಗಿದೆ, ಇದನ್ನು ತರಾತುರಿಯಲ್ಲಿ ಕೊಟ್ಟಿದ್ದಾರೆ. ಭಾಲ್ಕಿ ತಾಲ್ಲೂಕಿನ ಭದ್ರಾ ಗ್ರಾಮದಲ್ಲಿ ಭೋಜರಾಜ ಧೂಳಪ್ಪ ಇವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರ ಪತ್ನಿಯಾದ ಶ್ರೀಮತಿ ವಿಮಲಾಬಾಯಿ ಸಮಿತಿಗೆ ನೀಡಿರುವ ಮಾಹಿತಿ ಈ ರೀತಿ ಇರುತ್ತದೆ. ಇವರಿಗೆ ಇಬ್ಬರು ಮಕ್ಕಳು, 4 ಎಕರೆ ಜಮೀನು ಸ್ವಂತ ಇರುತ್ತದೆ. ಬೇರೆಯವರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುತ್ತಾರೆಂದು ತಿಳಿಸಿರುತ್ತಾರೆ. ಕಳೆದ ಎರಡು ವರ್ಷಗಳಲ್ಲಿ 50-60 ಸಾವಿರ ರೂಪಾಯಿಗಳನ್ನು ಸಾಲ ಮಾಡಿದ್ದು ಈ ಸಾಲವನ್ನು ತೀರಿಸುವುದು ಮತ್ತು ಬೆಳೆ ನಷ್ಟವಾಗಿರುವುದರಿಂದ ಸಾಲದ ಬಾಧೆಯಿಂದ ಮದ್ದು ಕುಡಿದು ಸತ್ತಿರುವುದಾಗಿ

ತಿಳಿಸಿರುತ್ತಾರೆ. ಆದರೆ ಈ ಪ್ರಕರಣ ಪೋಸ್ಟ್ ಮಾರ್ಟೆಮ್ ಆಗಿಲ್ಲ, ಆದ್ದರಿಂದ ಇವರಿಗೆ ನಾವು ಪರಿಹಾರವನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಬಸಪ್ಪಾ ಬಾಲ್ಕೇಶ್ವರ ಅವರ ಪೋಸ್ಟ್ ಮಾರ್ಟೆಮ್ ಆಗಿ ಸತ್ತಿದ್ದಾರೆಂದು ಆಗಿದೆ, ಈ ರೀತಿಯಾಗಿ ಪೋಸ್ಟ್ ಮಾರ್ಟೆಮ್ ಆಗದೆ ತೀರ್ಮಾನವನ್ನು ಯಾವ ರೀತಿ ತೆಗೆದುಕೊಳ್ಳುವುದು ಈ ಸಮಿತಿ. ಸಮಿತಿ ಸಮಗ್ರವಾದ ವರದಿಯನ್ನು ಕೊಡುವಾಗ ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕಾಗಿತ್ತು. ನನ್ನ ದೃಷ್ಟಿಯಲ್ಲಿ ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡಿಲ್ಲ. ಆದ್ದರಿಂದ ಸಮಿತಿಗೆ ತರಾತುರಿಯಲ್ಲಿ ವರದಿ ಕೊಡಲು ಹೇಳಿದ್ದಾರೆ, ಸಮಿತಿಯವರು ಹೋಗಿ ವರದಿಯನ್ನು ಕೊಟ್ಟಿದ್ದಾರೆ. ಆದರೆ ವಸ್ತುಸ್ಥಿತಿಯ ಬಗ್ಗೆ ವಾಸ್ತವಾಂಶವಾಗಿ ಎಲ್ಲೋ ಒಂದು ಕಡೆ ಜಾರುತ್ತಾರೆ ಎನ್ನತಕ್ಕಂಥ ಭಾವನೆ ನನಗೆ ಬರುತ್ತದೆ. ಆ ದೃಷ್ಟಿಯಿಂದ ಎಲ್ಲಿ ಪೋಸ್ಟ್ ಮಾರ್ಟೆಮ್ ಆಗಿಲ್ಲ, ಅದರ ಬಗ್ಗೆ ಪ್ರಾಮಾಣಿಕವಾಗಿ, ಇದುವರೆಗೆ ಏಕೆ ಪೋಸ್ಟ್ ಮಾರ್ಟೆಮ್ ಆಗಿಲ್ಲ ಏನು ಕಾರಣ? ಸಮಿತಿ ಹೋದಾಗ ವರದಿಯಲ್ಲಿ ಪೋಸ್ಟ್‌ಮಾರ್ಟೆಮ್ ಬಗ್ಗೆ ಬರುತ್ತದೆ. ನಾನು ಅದನ್ನು ಏಕೆ ಹೇಳುತ್ತಿದ್ದೇನೆಂದರೆ: ಸ್ವಲ್ಪ ಈ ಬಗ್ಗೆ ಏನು ಕಾರಣವೆಂದು ಬೆಳಕು ಚೆಲ್ಲಬೇಕು. ನಿಮ್ಮ ವರದಿಯ ಶಿಫಾರಸಿನಲ್ಲಿ ಹೇಳಿದ್ದಾರೆ. ಒಂದು ಎಕರೆಗೆ 500 ರೂಪಾಯಿಗಳಿಂದ 2500 ರೂಪಾಯಿಗಳಿಗೆ ಹೆಚ್ಚಿಸಬೇಕು. 500 ರೂಪಾಯಿಗಳ ಕನಿಷ್ಟ ಏನು ಮಾಡಿದ್ದಾರೆ, ಅದನ್ನು 2000 ರೂಪಾಯಿಗಳೆಂದು ಮಾಡಬೇಕೆಂದು ನನ್ನ ಒತ್ತಾಯ. 500 ರೂಪಾಯಿಗಳಿಂದ 2500 ರೂಪಾಯಿಗಳೆಂದು ಗರಿಷ್ಠ ಏನು ಮಾಡಿದ್ದಾರೆ ಇದನ್ನು ಕನಿಷ್ಠ 2000 ರೂಪಾಯಿಗಳೆಂದು ಮಾಡತಕ್ಕಂಥದ್ದು. ಆತ್ಮಹತ್ಯೆಯನ್ನು ಮಾಡಿಕೊಂಡಿರುವ ಪ್ರತಿಯೊಬ್ಬರ ಕುಟುಂಬಕ್ಕೆ ಒಂದು ಲಕ್ಷ ಪರಿಹಾರವನ್ನು ತಾವು ಪ್ರಾಮಾಣಿಕವಾಗಿ ನೀಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇದು ಕೇವಲ ಯಾವುದೋ ಒಂದು ಜಿಲ್ಲೆಗೆ ಸಂಬಂಧಪಟ್ಟಂತೆ ಇಲ್ಲ. ಎಲ್ಲಿ ಆತ್ಮಹತ್ಯೆ ಆಗುತ್ತದೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಪ್ರಸಂಗ ಇದು ನಿಜವಾಗಲೂ ಭಯಾನಕವಾದಂಥ ವಿಚಾರ. ಎಲ್ಲಿ ಶಾಶ್ವತವಾದ ಬರಗಾಲ ಇದೆ, ಆ ಬರಗಾಲವನ್ನು ಪರಿಹಾರ ಮಾಡುವುದಕ್ಕೆ ಅದನ್ನು ಶಾಶ್ವತ ಬರಗಾಲ ಪ್ರದೇಶವೆಂದು ಗುರುತಿಸಿ ಅಲ್ಲಿ ಏನು ಅನುಕೂಲ ಮಾಡಬೇಕು ಅದನ್ನು ಮಾಡಬೇಕಾಗಿದೆ. ವರದಿಯನ್ನು ತರಾತುರಿಯಲ್ಲಿ ಕೊಟ್ಟಿದ್ದಾರೆ. ನೀವು ಕೊಟ್ಟಿರತಕ್ಕಂಥ ಪರಿಹಾರ ನಿಜವಾಗಲೂ ಸಮಂಜಸವಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. 1972ರಲ್ಲಿ ಇದೆ ಸದನದಲ್ಲಿ ಇದ್ದಾಗ, ನಾವು ಕೃಷಿ ಸಚಿವರು ಎಲ್ಲರೂ ಹೋಗಿದ್ದೆವು. ಹೆಚ್.ಎಂ.ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ದೇವೇಗೌಡರು ನಾವು ಒಂದು ಸುತ್ತು ಹೋಗಿ ಬಂದಮೇಲೆ, ಏಕಸದಸ್ಯ ಆಯೋಗದ ಆರ್ಮುಗಂರವರು ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ತಾವು ಅದನ್ನು ಆರಿಸಿ ನೋಡಿ. ಎಷ್ಟು ಸುಂದರವಾಗಿ ಇಡೀ ಗುಲ್ಬರ್ಗಾ ಜಿಲ್ಲೆಯ ವರದಿಯನ್ನು ಒಬ್ಬರೇ ಕೊಟ್ಟರು ಅದಕ್ಕೆ ಯಾರೂ ಚಕಾರ ಎತ್ತಲಿಲ್ಲ. ಮಾನವೀಯತೆಯ ದೃಷ್ಟಿಯಿಂದ ಇರುವಂಥ ಒಂದು

ವರದಿಯನ್ನು ಕೊಡಬೇಕಾಗುತ್ತದೆ. ತಮ್ಮ ಉತ್ತರದಲ್ಲಿ ಇದನ್ನು ವಿಭಿನ್ನವಾಗಿ ಕೊಡಬೇಕು. ಮತ್ತು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

+ ಡಾ: ವಿಜಯಕುಮಾರ್ ಖಂಡ್ರೆ (ಬಾಲ್ಕಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಾದ್ಯಂತ ಬೆಳೆ ನಾಶವಾಗಿ ರೈತರು ಮಾಡಿಕೊಂಡಿರುವ ಆತ್ಮಹತ್ಯೆಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲಿಕ್ಕೆ ರಚಿಸಲಾದ ಜಂಟಿ ಸದನ ಸಮಿತಿಯ ಮಧ್ಯಂತರ ವರದಿಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಆ ಸಮಿತಿಯ ಸದಸ್ಯರೆಲ್ಲರೂ ಬೀದರ್ ಮತ್ತು ಗುಲ್ಬರ್ಗಾ ಈ ಎರಡು ಜಿಲ್ಲೆಗಳಿಗೆ ಹೋಗಿ ಅಲ್ಲಿರತಕ್ಕಂಥ ವಾಸ್ತವಾಂಶವನ್ನು ನೋಡಿ ಇನ್‌ಫರ್ಮೇಷನ್ ತೆಗೆದುಕೊಂಡು ಬಂದು ವರದಿಯನ್ನು ಸಲ್ಲಿಸಿದ್ದಾರೆ. ಮೊಟ್ಟಮೊದಲನೆಯದಾಗಿ ನಾನು ಈ ಸಮಿತಿಯವರಿಗೆ ಅಭಿನಂದಿಸುತ್ತೇನೆ. ಅಲ್ಲಿನ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಂಡು ಬಂದಿದ್ದಾರೆ. ಅವರ ಶಿಫಾರಸುಗಳೂ ಸಹ ಬಹಳಷ್ಟು ಸಮಂಜಸವಾಗಿವೆ. ಒಂದು ಎಕರೆಗೆ 500 ರೂಪಾಯಿಗಳನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ. ಅದರ ಬಗ್ಗೆ ಈಗಾಗಲೇ ಬಹಳ ನಾಯಕರು ಮಾತನಾಡಿದ್ದಾರೆ. ಒಂದು ಎಕರೆಗೆ 500 ರೂಪಾಯಿಗಳನ್ನು ಕೊಟ್ಟರೆ ಸ್ವಲ್ಪ ಅವರಿಗೆ ರಿಲೀಫ್ ಕೊಟ್ಟಂತಾಗುತ್ತದೆ. ಇದು ಬಹಳ ಉತ್ತಮ. ಒಂದು ತೊಂದರೆ ಏನಾಗುತ್ತದೆ: ಬಹಳಷ್ಟು ರೈತರು ಅಲ್ಲಿ 20, 30 ಎಕರೆ ಜಮೀನದವರು ದೊಡ್ಡ ಸಮಸ್ಯೆಯಲ್ಲಿ ಇದ್ದಾರೆ. ಅವರು ಹೆಚ್ಚಿನ ಪ್ರಮಾಣದ ಒಂದು ಸಾಲವನ್ನು ಮಾಡಿಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಈ ಅಪ್ಪರ್ ಲಿಮಿಟ್‌ದವರು ಒಂದು ಸಲಹೆಯನ್ನು ಮಾಡಿದ್ದಾರೆ 2500 ರೂಪಾಯಿಗಳಿಗಿಂತ ಹೆಚ್ಚಿಗೆ ಕೊಡಬಾರದೆಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ತಾವು 5 ಸಾವಿರ ರೂಪಾಯಿಗಳಂತೆ ಒಬ್ಬ ರೈತನಿಗೆ ಪರಿಹಾರವನ್ನು ಕೊಡಬೇಕೆಂದು ಅದನ್ನು ಹೆಚ್ಚಿಗೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ದುಃಖದ ವಿಷಯ ಏನೆಂದರೆ: ಸದನ ಸಮಿತಿಯವರು ಬೀದರ್‌ಗೆ ಬಂದಾಗ ಅವರು ಅಲ್ಲಿ ಉಪಸ್ಥಿತರಿದ್ದಾಗಲೇ ಆತ್ಮಹತ್ಯೆ ಆಗ ನಡೆಯಿತು. ಅದು ಆದ ಮೇಲೆ ಎನ್‌ಕ್ವೈರಿ ರಿಪೋರ್ಟ್ ಪಡೆಯುವ ಮೊದಲು ಮತ್ತು ಸದನ ಸಮಿತಿಯು ಬಂದುಹೋದ ನಂತರ ಆ ಮಧ್ಯದಲ್ಲಿ ಒಂದೆರಡು ಸಾವುಗಳು ಆಗಿರುತ್ತವೆ. ನಾನು ಹೇಳಬೇಕೆಂದರೆ, ಅಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ, ಸರ್ಕಾರ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಈಗ ಪೂರ್ಣ ವರದಿ ಬರಲಿ ಎಂದು ಅದರ ಸಮಯವನ್ನು ನೋಡಬೇಡಿ. ಆ ಸಮಸ್ಯೆ ಬಹಳ ಗಂಭೀರವಾಗಿ, ಅಲ್ಲಿಯ ರೈತರು ಕಂಗಾಲಾಗಿದ್ದಾರೆ. ಅವರಿಗೆ ಧೈರ್ಯ ಹೇಳುವವರು ಯಾರೂ ಇಲ್ಲ. ಸರ್ಕಾರ ಮುಂದೆ ಬಂದು ಹಣ ಮಂಜೂರು ಮಾಡಲಿಲ್ಲವೆಂದರೆ, ಆ ರೈತರ ಕಷ್ಟ ಇನ್ನು

ಹೆಚ್ಚಾಗುವ ಸಂಭವ ಇದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಣವನ್ನು ಬಿಡುಗಡೆ ಕೂಡಲೇ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

4.20 ಪಿ.ಎಂ.

ಇನ್ನೊಂದು ವಿಷಯವೇನೆಂದರೆ 3 ಆತ್ಮಹತ್ಯೆ ಸಾವುಗಳು ಖಾತ್ರಿಯಾಗಿಲ್ಲವೆನ್ನುವುದರ ಬಗ್ಗೆ ವರದಿಯಾಗಿದೆ. ಇದರ ಬಗ್ಗೆ ಪುನಃ ರಿವ್ಯೂ ಮಾಡಿಸಿ ಎಂದು ಸರ್ಕಾರದವರಲ್ಲಿ ನಾನು ವಿನಂತಿಸುತ್ತೇನೆ. ಏಕೆಂದರೆ ಅಲ್ಲಿ ಬೆಳೆ ಹಾನಿಯಾಗಿದ್ದರ ಬಗ್ಗೆ ಅಲ್ಲಿಗೆ ಬಂದಿದ್ದಂತಹ ಸದಸ್ಯರುಗಳು ನೋಡಿದ್ದಾರೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಲು ಬಯಸುವುದಿಲ್ಲ. ಕೊನೆಯದಾಗಿ ನಾನು ಹೇಳುವುದೇನೆಂದರೆ ಸರ್ಕಾರ ಯಾವಾಗಲೂ ಯಾರು ಸಂಘಟಿತರಿದ್ದಾರೆ, ಅವರುಗಳು ಬೇಡಿಕೆಗಳನ್ನು ಇಟ್ಟಾಗ, ಕೂಡಲೇ ಅವರುಗಳ ಬೇಡಿಕೆಗಳನ್ನು ಪೂರ್ಣ ಮಾಡುತ್ತಾರೆ. ಉದಾಹರಣೆಗಾಗಿ, ಸರ್ಕಾರಿ ನೌಕರರಲೇ ಆಗಲಿ ಅವರು ಅಸೋಸಿಯೇಷನ್ ಮುಖಾಂತರ ಹೋರಾಟ ಮಾಡಿದಾಗ ಅಥವಾ ಪ್ರತಿಭಟನೆ ಮಾಡಿ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಾಗ ತಾವು ಅವರ ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತೀರಿ. ಆದರೆ ರೈತರು ದೊಡ್ಡ ಸಂಕಷ್ಟದಲ್ಲಿದ್ದಾಗ ಯಾರೂ ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮುಂದಾಗುವುದಿಲ್ಲ. ಆದ್ದರಿಂದ ನಾನು ಸಭಾಧ್ಯಕ್ಷರ ಮೂಲಕ ತಮಗೆ ತಿಳಿಸಬಯಸುವುದೇನೆಂದರೆ ರೈತರ ಬಗ್ಗೆ ಆದಷ್ಟು ಬೇಗ ಕಾಳಜಿಯಿಂದ ಹಣವನ್ನು ಮಂಜೂರು ಮಾಡಬೇಕೆಂದು, ಅವರಿಗೆ ಧೈರ್ಯವನ್ನು ಹೇಳುವಂತಹ ಕಾರ್ಯವನ್ನು ಮಾಡಬೇಕು. ರೈತರು ಸಂಘಟಿತರಿಲ್ಲ, ಆದ್ದರಿಂದ ತಾವು ನಿರ್ಲಕ್ಷ್ಯ ಮಾಡಿ ನಾವು ಇದನ್ನು ಹಾಗೆಯೇ ತಳ್ಳಿಕೊಂಡು ಹೋಗುತ್ತೇವೆಂದು ತಿಳಿದುಕೊಂಡಿದ್ದರೆ ಇದು ಬಹಳ ದೊಡ್ಡ ತಪ್ಪಾಗುತ್ತದೆ. ಬೀದರ್ ಜಿಲ್ಲೆಯಲ್ಲಿರತಕ್ಕಂತಹ ರೈತರು ಇವತ್ತಿನ ದಿನ ಸಂಘಟಿತರಾಗಿದ್ದಾರೆ. ಒಂದು ವೇಳೆ ಸರ್ಕಾರದವರು ಈ ಪರಿಹಾರಧನವನ್ನು ಬೇಗ ಬಿಡುಗಡೆ ಮಾಡದಿದ್ದರೆ ಇಡೀ ಜಿಲ್ಲೆಯಲ್ಲಿ ಸರ್ಕಾರದ ಕೆಲಸಗಳು ಸಂಪೂರ್ಣವಾಗಿ ನಿಂತು ಹೋಗುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ತಾವು ದಯವಿಟ್ಟು ಈ ಒಂದು ಕೆಟ್ಟ ಪರಿಸ್ಥಿತಿ ಬಾರದೆ ಇರುವ ಹಾಗೆ ನೋಡಿಕೊಳ್ಳಬೇಕು. ರೈತರು ಬೀದಿಗೆ ಬರುವುದಕ್ಕೆ ಅವಕಾಶವನ್ನು ಕೊಡಬಾರದು. ನನಗೆ ಸರ್ಕಾರದ ಮೇಲೆ ಸಂಪೂರ್ಣವಾದ ವಿಶ್ವಾಸವಿದೆ, ಮಂತ್ರಿಮಂಡಲದಲ್ಲಿರುವ ಅನೇಕರಿಗೆ ರೈತರ ಬಗ್ಗೆ ಕಾಳಜಿ ಇದೆ. ಜಂಟಿ ಸದನ ಸಮಿತಿಯು ಒಳ್ಳೆಯ ವರದಿಯನ್ನು ಕೊಟ್ಟಿದೆ. ತಾವು ಇದರ ಬಗ್ಗೆ ಕೂಡಲೇ ಸ್ಪಂದಿಸಿ ಹಣವನ್ನು ಮಂಜೂರು ಮಾಡುತ್ತೀರೆಂದು ನಾನು ವಿಶ್ವಾಸವನ್ನು ಹೊಂದಿದ್ದೇನೆ. ದಯವಿಟ್ಟು ಒಂದು ಲಾ ಅಂಡ್ ಆರ್ಡರ್ ಪರಿಸ್ಥಿತಿಯು ವಿಫಲವಾಗದ ಹಾಗೆ ತಾವು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡು ರೈತರ ಸಮಸ್ಯೆಯನ್ನು ಬಗೆಹರಿಸುತ್ತೀರೆಂದು ತಮ್ಮಲ್ಲಿ ಮತ್ತೊಂದು ಸಲ ವಿನಂತಿ ಮಾಡಿಕೊಂಡು ಸಭಾಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ

ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವಿಚಾರ ಒಂದು ಸಲ ಅಲ್ಲ, ಸಾಕಷ್ಟು ಸಲ ಈ ಅಧಿವೇಶನದಲ್ಲಿ ಚರ್ಚೆಯಾಗಿದೆ. ಬಹುಶಃ ನನ್ನ ನೆನಪಿನ ಪ್ರಕಾರ 3-4 ಸಾರಿ ಚರ್ಚೆಗೆ ಬರುತ್ತಾ ಇರುವುದು. ನಾನು ಈಗಾಗಲೇ ನಡೆದಿರತಕ್ಕಂತಹ ವಿಚಾರಗಳನ್ನು ಹೇಳುವುದಕ್ಕೆ ಹೋಗವುದಿಲ್ಲ. ಸದನ ಸಮಿತಿಯು ರಚನೆಯಾಗಿ ಅದರ ವರದಿಯೂ ಸಹ ಬಂದಿದೆ. ವರದಿಯಲ್ಲಿ ಕಾಣಿಸಿರತಕ್ಕಂತಹ ವಿಚಾರಗಳನ್ನು ಮಾನ್ಯ ಸದಸ್ಯರು ಒಂದೊಂದಾಗಿ ಹೇಳಿದ್ದಾರೆ. ನಾನು ಪುನಃ ಅದನ್ನು ಹೇಳುವಂತಹ ಅವಶ್ಯಕತೆ ಇಲ್ಲ. ಈ ತರಹ ನೋವುಗಳು ಬೆಳೆನಷ್ಟವಾಗಿರುವಂತದ್ದು ಪ್ರಥಮ ಬಾರಿ ಏನೂ ಅಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಹಿಂದೆ 1972-73ರಲ್ಲಿ ಆ ಭಾಗದಲ್ಲಿ ಇದಕ್ಕಿಂತ ಭೀಕರವಾದ ಪರಿಸ್ಥಿತಿ ಉಂಟಾಗಿತ್ತು. ಆಗ ನಾನು ವಿರೋಧಪಕ್ಷದಲ್ಲಿದ್ದೆ. ನಾನು ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀ ಚೆನ್ನಬಸಪ್ಪನವರೂ ಸಹ ನೋಡಿಕೊಂಡು ಹೋಗಿ ಬಂದಿದ್ದೆವು. ಆಗಲೂ ಕೂಡ ಈ ಬೆಳೆ ಪರಿಹಾರ ಆಗಿರಲಿಲ್ಲ. ಆದರೆ ಜನಕ್ಕೆ ಕೆಲಸ ಇಲ್ಲ ಎನ್ನುವ ಕಾರಣಕ್ಕಾಗಿ ಕೆಲಸಗಳನ್ನು ಕೊಡತಕ್ಕಂಥದ್ದಕ್ಕೆ ನಾವು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೆವು. ಅದಕ್ಕೆ ಸರ್ಕಾರ ವಿಶೇಷವಾದ ಕ್ರಮವನ್ನು ತೆಗೆದುಕೊಂಡು ಕೆಲಸಗಳನ್ನು ಒದಗಿಸುವಂತದ್ದು ಆಗಿತ್ತು. ಕರ್ನಾಟಕಕ್ಕೆ ಈ ಪರಿಸ್ಥಿತಿ ಸೀಮಿತವಾಗಿಲ್ಲ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಆಂಧ್ರದಲ್ಲೂ ಹಾಗೂ ಮಹಾರಾಷ್ಟ್ರದಲ್ಲೂ ಇದೇ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಈ ದೇಶದ ಧಾನ್ಯದ ಕಣಜವಾದ ಪಂಜಾಬ್ ಇದೆ. ಪಂಜಾಬ್‌ನಲ್ಲಿ ಇದಕ್ಕಿಂತ ಭೀಕರವಾದ ಪರಿಸ್ಥಿತಿ ಉಂಟಾಗಿದ್ದರಿಂದ ಮಾನವ ಹಕ್ಕುಗಳ ಆಯೋಗವು ಪಂಜಾಬ್‌ಗೆ ಹೋಗಿ ಅಧ್ಯಯನ ಮಾಡಿ ವರದಿಯನ್ನು ಕೊಟ್ಟಿರುವುದು ಉಂಟು. ಈ ಹಿನ್ನೆಲೆಯಲ್ಲಿ ಈ ರಾಜ್ಯದಲ್ಲಿ ನಾನು ಕೊಟ್ಟಿರತಕ್ಕಂತಹ ವರದಿಯ ಆಧಾರದ ಮೇಲೆ ಹೇಳುವುದಾದರೆ ಏನೇನು ಆಗುತ್ತದೆ ಎಂಬುದರ ಬಗ್ಗೆ ನಾನು ಚಿತ್ರವನ್ನು ಕೊಡಬೇಕಾಗುತ್ತದೆ. ಈಗಾಗಲೇ ನಾನು ಹೇಳಿದ್ದೇನೆ. ಮಧ್ಯಂತರ ವರದಿಯಲ್ಲಿ ಸತ್ತಿರುವಂತಹ ಕುಟುಂಬಗಳ ಬಗ್ಗೆ ಶಿಫಾರಸ್ಸು ಮಾಡಿರತಕ್ಕಂತಹ ಎಲ್ಲಾ ಪ್ರಕರಣಗಳಲ್ಲೂ ಸಹ ನಾವು ಒಂದು ಲಕ್ಷ ರೂಪಾಯಿಗಳನ್ನು ಆ ಕುಟುಂಬದವರಿಗೆ ಕೊಡುವುದಕ್ಕೆ ಸರ್ಕಾರ ಒಪ್ಪಿದೆ. ಉಳಿದಂತಸ ಪ್ರಕರಣಗಳಲ್ಲಿ ನಾನು ಸಭೆಯ ಗಮನಕ್ಕೆ ತರಬೇಕಾದದ್ದು ನನ್ನ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೀದರ್ ಜಿಲ್ಲೆಯಲ್ಲಿ 4,01,705 ಹೆಕ್ಟೇರ್, ಇದರಲ್ಲಿ ಕಡಿಮೆ ಮಳೆ, ಹೆಚ್ಚು ಮಳೆ ಹಾಗೂ ಕೀಟನಾಶಕ ಬಾಧೆಯಿಂದ ಆದ ಒಟ್ಟು ವಿಸ್ತೀರ್ಣ ಮುಂಗಾರು ಮತ್ತು ಹಿಂಗಾರು ಸೇರಿ 1,96,702 ಹೆಕ್ಟೇರ್, ಒಟ್ಟು ಶೇಕಡಾವಾರು 49ರಷ್ಟು ಬೆಳೆ ಇವತ್ತು ಹಾನಿಯಾಗಿದೆ ಎಂಬುದು ಮಧ್ಯಂತರ ವರದಿಯಲ್ಲಿ ವರದಿಯಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 97ರಲ್ಲಿ ಮುಂಗಾರು ಹಾಗೂ ಹಿಂಗಾರು

ಹಂಗಾಮಿನಲ್ಲಿ ಬಿತ್ತನೆಯಾದ ಒಟ್ಟು ಕ್ಷೇತ್ರ 12,32,321 ಹೆಕ್ಟೇರ್. ಇದರಲ್ಲಿ ಕಡಿಮೆ ಮಳೆ ಮತ್ತು ಹೆಚ್ಚಿನ ಮಳೆ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದ ಒಟ್ಟು ವಿಸ್ತೀರ್ಣ ಮುಂಗಾರು ಮತ್ತು ಹಿಂಗಾರು ಸೇರಿ 8,04,432 ಹೆಕ್ಟೇರ್‌ಗಳು. ಒಟ್ಟು ಶೇಕಡವಾರು 65ರಷ್ಟು ಗುಲ್ಬರ್ಗ ಜಿಲ್ಲೆಯಲ್ಲಿ ನಷ್ಟವಾಗಿದೆ. ಈ ಪೈಕಿ ವಿವಿಧ ಬಾಧೆಗಳಿಗೆ ಒಳಪಟ್ಟ ವಿಸ್ತೀರ್ಣ ಈ ರೀತಿ ಇದೆ. ಬೀದರ್ ಜಿಲ್ಲೆ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ, ಬೀದರ್ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಕಡಿಮೆ ಮಳೆಯಿಂದ ಹಾನಿಗೊಳಗಾಗಿರುವ ಬೆಳೆಯ ವಿಸ್ತೀರ್ಣ 1,87,961 ಹೆಕ್ಟೇರ್. ಗುಲ್ಬರ್ಗ ಜಿಲ್ಲೆಯಲ್ಲಿ 4,61,628 ಹೆಕ್ಟೇರ್ ಆಗಿದೆ. ಮುಂಗಾರು ಹಂಗಾಮಿನಲ್ಲಿ ಹೆಚ್ಚಿನ ಮಳೆ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದ ವಿಸ್ತೀರ್ಣ ಬೀದರ್ ಜಿಲ್ಲೆಯಲ್ಲಿ 39,984 ಹೆಕ್ಟೇರ್. ಗುಲ್ಬರ್ಗ ಜಿಲ್ಲೆಯಲ್ಲಿ 1,75,047 ಹೆಕ್ಟೇರ್. ಹಿಂಗಾರು ಹಂಗಾಮಿನಲ್ಲಿ ಹೆಚ್ಚು ಮಲೆ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದ ವಿಸ್ತೀರ್ಣ ಬೀದರ್ ಜಿಲ್ಲೆಯಲ್ಲಿ 27,315 ಹೆಕ್ಟೇರ್. ಗುಲ್ಬರ್ಗಾ ಜಿಲ್ಲೆಯಲ್ಲಿ 1,67,757 ಹೆಕ್ಟೇರ್. ಹಾನಿಗೊಳಗಾದವರಿಗೆ ನೀಡಲಾದ ಪರಿಹಾರ ಧನ ಪ್ರತಿ ಹೆಕ್ಟೇರಿಗೆ 1250 ರೂಪಾಯಿಗಳು. ನಮ್ಮ ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಎಷ್ಟು ಖರ್ಚು ಆಗುತ್ತದೆ ಎಂಬುದು ಈ ರೀತಿ ಇದೆ. ಮುಂಗಾರು ಹಂಗಾಮಿನಲ್ಲಿ ಕಡಿಮೆ ಮಳೆಯಿಂದ ನಷ್ಟಕ್ಕೆ ಒಳಗಾಗಿರುವವರಿಗೆ ಪರಿಹಾರದ ಮೊತ್ತ ಬೀದರ್ ಜಿಲ್ಲೆಯಲ್ಲಿ 23.5 ಕೋಟಿ ರೂಗಳು. ಗುಲ್ಬರ್ಗ ಜಿಲ್ಲೆಯಲ್ಲಿ 57,70 ಕೋಟಿ ರೂಗಳು ಬೇಕಾಗುತ್ತದೆ. ಕೇವಲ ಇದು ಮುಂಗಾರು ಬೆಳೆಯ ಕಾಲಕ್ಕೆ ಬೇಕಾಗುತ್ತದೆ. ಅದೇ ರೀತಿ ಮುಂಗಾರು ಹಂಗಾಮಿನಲ್ಲಿ ಹೆಚ್ಚಿನ ಮಳೆ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದ ಪರಿಹಾರದ ಮೊತ್ತ ಬೀದರ್ ಜಿಲ್ಲೆಗೆ 5 ಕೋಟಿ ರೂಗಳು ಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಗೆ 21.88 ಕೋಟಿ ರೂಗಳು ಬೇಕಾಗುತ್ತದೆ. ಮುಂಗಾರು ಹಂಗಾಮಿನಲ್ಲಿ ಹೆಚ್ಚು ಮಳೆ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದವರಿಗೆ ಪರಿಹಾರದ ಮೊತ್ತ ಬೀದರ್ ಜಿಲ್ಲೆಯಲ್ಲಿ 3.41 ಕೋಟಿ ರೂ. ಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 20.96 ಕೋಟಿ ರೂ.ಗಳಷ್ಟು ಹಣ ಬೇಕಾಗುತ್ತದೆ. ಇದೆಲ್ಲಾ ಒಟ್ಟುಗೂಡಿಸಿದರೆ ಬೀದರ್ ಜಿಲ್ಲೆಗೆ 31.91 ಕೋಟಿ ರೂಗಳಷ್ಟು ಬೇಕಾಗುತ್ತದೆ. ಗುಲ್ಬರ್ಗ ಜಿಲ್ಲೆಗೆ 100.54 ಕೋಟಿ ರೂ.ಗಳ ಹಣ ಬೇಕಾಗುತ್ತದೆ. ಅಂದರೆ ಒಟ್ಟಿಗೆ ಸೇರಿದರೆ 132 ಕೋಟಿ ರೂ.ಗಳಷ್ಟು ಹಣ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಸೀಮಿತವಾಗಿರುವಂತೆ ಹಣ ಬೇಕಾಗುತ್ತದೆ. ಬೆಳೆ ನಷ್ಟ ಪರಿಹಾರಕ್ಕೆ ಹೆಚ್ಚಿನ ಮಳೆ ಹಾಗೂ ಕೀಟನಾಶಕ್ಕೆ ಒಳಗಾದ ವಿಸ್ತೀರ್ಣವನ್ನು ಮಾತ್ರ ಪರಿಗಣಿಸಿದಲ್ಲಿ ಬೀದರ್ ಜಿಲ್ಲೆಯಲ್ಲಿ ಎರಡು ಹಂಗಾಮುಗಳು ಸೇರಿ 67,299 ಹೆಕ್ಟೇರ್‌ಗಳು ಕೀಟಬಾಧೆಗೆ ಒಳಪಟ್ಟಿರುತ್ತದೆ. ಈ ವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರ್‌ಗೆ 1250 ರೂ.ನಂತೆ ಪರಿಹಾರ ನೀಡಬೇಕಾದರೆ ಒಟ್ಟು ಅನುದಾನ 8.41 ಕೋಟಿ ರೂ.ಗಳು ಬೇಕಾಗುತ್ತದೆ. ಹೆಚ್ಚು ಮಳೆ, ಕೀಟ ಬಾಧೆಗೆ ಒಳಗಾದ ಒಟ್ಟು ವಿಸ್ತೀರ್ಣವನ್ನು ಮಾತ್ರ

ಪರಿಗಣಿಸಿದಲ್ಲಿ ಬೆಳೆಪರಿಹಾರಕ್ಕೆ ಗುಲ್ಬರ್ಗಾ ಜಿಲ್ಲೆಯಲ್ಲಿ ಎರಡು ಹಂಗಾಮುಗಳು ಸೇರಿ 3,42,804 ಹೆಕ್ಟೇರ್‌ಗಳು ಕೀಟಬಾಧೆಗೆ ಒಳಪಟ್ಟಿರುತ್ತದೆ. ಈ ವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರ್‌ಗೆ 1250 ರೂ.ನಂತೆ ಪರಿಹಾರ ನೀಡಬೇಕಾಗುವ ಒಟ್ಟು ಅನುದಾನ 42.84 ಕೋಟಿ ರೂ.ಗಳು ಬೇಕಾಗುತ್ತದೆ. ಈ ಎರಡು ಜಿಲ್ಲೆಗಳಿಗೆ ಈ ಬಾಬತ್ತಿಗೆ ಬೇಕಾಗುವ ಒಟ್ಟು ಅನುದಾನ 51.25 ಕೋಟಿ ರೂ.ಗಳು ಬೇಕಾಗುತ್ತದೆ. ಇದು ಎರಡು ಜಿಲ್ಲೆಗಳಿಗೆ ಸಂಬಂಧಪಟ್ಟ ಚಿತ್ರ. ಅದೇ ರೀತಿಯಲ್ಲಿ ಎರಡು ಜಿಲ್ಲೆಗಳಲ್ಲಿ ಏನು ಸೂತ್ರವನ್ನು ನಾವು ಅನುಸರಿಸುತ್ತಿದ್ದೇವೋ ಅದೇ ಸೂತ್ರವನ್ನು ಅನುಸರಿಸಿ ಇಡೀ ರಾಜ್ಯಾದ್ಯಂತ ಎಷ್ಟು ಹಣದ ಮೊತ್ತ ಬೇಕಾಗುತ್ತದೆಂಬುದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 1997-98ರಲ್ಲಿ ಇಡೀ ರಾಜ್ಯದಲ್ಲಿ ಹೆಚ್ಚಿನ ಮಳೆಯಿಂದ ಹಾಗೂ ಕೀಟಬಾಧೆಯಿಂದ ಹಾನಿಗೊಳಗಾದ ವಿಸ್ತೀರ್ಣ ಮತ್ತು ಪರಿಹಾರ ನೀಡಿರುವ ವಿವರಗಳು ಪ್ರತಿ ಹೆಕ್ಟೇರಿಗೆ 1250 ರೂಪಾಯಿಗಳು. ಮುಂಗಾರು ಹಂಗಾಮಿನಲ್ಲಿ ಕಡಿಮೆ ಮಳೆ ಹಾನಿಯಿಂದ ನಷ್ಟ ಹೊಂದಿರುವ ವಿಸ್ತೀರ್ಣ ಇಡೀ ರಾಜ್ಯದಲ್ಲಿ 17,65,525 ಹೆಕ್ಟೇರ್‌ಗಳು ಮತ್ತು ಹಣ ಬೇಕಾಗಿರತಕ್ಕದ್ದು 220.69 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಮುಂಗಾರು ಹಂಗಾಮಿನಲ್ಲಿ ಹೆಚ್ಚಿನ ಮಳೆಯಿಂದ ಹಾಗು ಕೀಟ ಬಾಧೆಯಿಂದ ಹಾನಿಗೊಳಗಾದ ವಿಸ್ತೀರ್ಣ 4,65,310 ಲಕ್ಷ ಹೆಕ್ಟೇರ್‌ಗಳು. ಇದಕ್ಕೆ ಬೇಕಾಗಿರತಕ್ಕ ಹಣ 58.16 ಕೋಟಿ ರೂಪಾಯಿಗಳು. ಹಿಂಗಾರು ಹಂಗಾಮಿನಲ್ಲಿ ಹೆಚ್ಚಿನ ಮಳೆ ಮತ್ತು ಕೀಟ ಬಾಧೆಯಿಂದ ಹಾನಿಗೊಳಗಾದ ವಿಸ್ತೀರ್ಣ 2,40,700 ಹೆಕ್ಟೇರ್‌ಗಳು. ಇದಕ್ಕೆ ಸಮಿತಿಯವರು ಶಿಫಾರಸ್ಸು ಮಾಡಿರುವ ಹಾಗೆ ದಾಮಾಷಾ ಪ್ರಕಾರ ನಾವು ಕೊಡುವುದಾದರೆ 30.08 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಒಟ್ಟಾರೆ 308.93 ಕೋಟಿ ರೂಪಾಯಿಗಳಷ್ಟು ಹಣ ಇಡೀ ರಾಜ್ಯದಲ್ಲಿ ನಾವು ಕೊಡಬೇಕಾಗಿರತಕ್ಕ ಪರಿಸ್ಥಿತಿ ಇದೆ. ಇದನ್ನು ನಾನು ಸಭೆಯ ಮುಂದಿಡುತ್ತಾ, ಇವತ್ತು ನಾವು ಸೇರಿರತಕ್ಕ ಅಧಿವೇಶನ ಏನಿದೆ ಇದು ಬಜೆಟ್ ಅಧಿವೇಶನ ಆಗಿದ್ದು, ಇವತ್ತು ಕೇವಲ ಒಂದೆರಡು ಇಲಾಖೆಗಳ ಬೇಡಿಕೆಗಳ ಮೇಲೆ ಮಾತ್ರ ಚರ್ಚೆಯಾಗಿದೆ.

ಡಾ: ಎಂ.ಪಿ.ಕರ್ಕಿ: ಮಾನ್ಯ ಸಚಿವರು ಹೇಳಿದ್ದಕ್ಕೆ ಒಂದು ಫ್ಯಾಲಸಿ ಇದೆ. ಅಂದರೆ ಅವರು ಒಟ್ಟು ವಿಸ್ತೀರ್ಣ ಹೇಳುತ್ತಾರೆ. ನಾವು 5 ಹೆಕ್ಟೇರ್ ಇಂತಿಷ್ಟು ಎಂದು ಸೀಲಿಂಗ್ ಹಾಕುತ್ತೇವೆ. ಅದು ಒಳಪಟ್ಟು ಆಗುವುದಿಲ್ಲ. ಎಕರೆಗೆ ಇಷ್ಟು ಎಂದು ಗುಣಾಕಾರ ಮಾಡಿದಾಗ ಆಗುವಷ್ಟು, ಸೀಲಿಂಗ್ ಹಾಕಿದಾಗ ಆಗುವುದಿಲ್ಲ, ಅದು ಬಹಳಷ್ಟು ಕಡಿಮೆಯಾಗುತ್ತದೆ.

ಶ್ರೀ ಸಿ.ಬೈರೇಗೌಡ: ಕಡಿಮೆಯಾದರೆ ಸಂತೋಷ. ನಮ್ಮ ಲೆಕ್ಕ ಸರಿ ಇಲ್ಲದಿದ್ದರೆ ಸರಿಪಡಿಸಿಕೊಳ್ಳೋಣ. ಗುಣಾಕಾರ, ಭಾಗಾಕಾರ ಸರಿ ಇಲ್ಲದಿದ್ದರೆ ಲೆಕ್ಕ ಸರಿಪಡಿಸಿಕೊಳ್ಳೋಣ. ಅದನ್ನು ಒಗಟಾಗಿ ಇಟ್ಟುಕೊಳ್ಳತಕ್ಕ ಅವಶ್ಯಕತೆ ಇಲ್ಲ. ಈ ಪರಿಸ್ಥಿತಿ ನಮ್ಮಲ್ಲಿದೆ. ಇವತ್ತು ನಾವು ಆಯವ್ಯಯ ಅಧಿವೇಶನ ಸೇರಿದ್ದೇವೆ. ಇವತ್ತು

ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದೆ. ಮಾನ್ಯ ಸದಸ್ಯರು ಈ ಸಭೆಯಲ್ಲಿ ತೀರ್ಮಾನ ಮಾಡಬೇಕಾಗುತ್ತದೆ. ಇವತ್ತು ನಮಗೆ ಆದಾಯ ಎಷ್ಟಿದೆ ಎಂಬುದು ಗೊತ್ತಿದೆ. ನಮ್ಮ ಖರ್ಚು ಯಾವ ಯಾವ ಬಾಬಿಗೆ ಎಷ್ಟೆಷ್ಟು ಮಾಡುತ್ತಿದ್ದೇವೆಂಬುದು ಮಾನ್ಯ ಸಭೆಯ ಮುಂದಿದೆ. ಇದನ್ನು ಈ ಸದನ ತೀರ್ಮಾನ ಮಾಡಬೇಕಾಗುತ್ತದೆ. ಯಾವ ಬಾಬಿನಿಂದ ಕಡಿತ ಮಾಡಿ ಈ ಬಾಬಿಗೆ ಕೊಡಬೇಕೆಂದು ಸದನ ತೀರ್ಮಾನ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿ ನಾವು ರಾಜ್ಯ ಸರ್ಕಾರ ಸುಮ್ಮನೆ ಇರಲಿಲ್ಲ. ನಾವು ಮೊಟ್ಟಮೊದಲ ಸಾರಿ ನಮ್ಮ ಅಧಿಕಾರಿಗಳನ್ನು ಕರೆದುಕೊಂಡು ನಾನು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಹೊಸದಾಗಿ ರಚನೆಯಾಗಿರತಕ್ಕ ಕೇಂದ್ರ ಸರ್ಕಾರದ ಹತ್ತಿರ ಹೋಗಿ ಅಲ್ಲಿರತಕ್ಕ ಮಂತ್ರಿಗಳನ್ನು ಕಂಡಿದ್ದೇವೆ ಮತ್ತು ಪ್ರಧಾನ ಮಂತ್ರಿಗಳಿಗೂ ಸಹ ನಮ್ಮ ಮನವಿ ಪತ್ರವನ್ನು ಅವರ ಕಛೇರಿಗೆ ತಲುಪಿಸಿ ಬಂದಿದ್ದೇವ. ಅದಾದನಂತರ ಮಾನ್ಯ ಪ್ರಧಾನಮಂತ್ರಿಗಳ ಹತ್ತಿರ ಹಿರಿಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ಹೋಗಿ ನಮ್ಮ ಬೇಡಿಕೆಗಳನ್ನು ಸಲ್ಲಿಸಿ ಬಂದಿದ್ದೇವೆ. ಇದನ್ನು ಅಧ್ಯಯನ ಮಾಡುವುದಕ್ಕೆ ಒಂದು ತಂಡವನ್ನು ಕಳುಹಿಸಬೇಕೆಂದು ಕೇಂದ್ರ ಸರ್ಕಾರದಲ್ಲಿ ವಿನಂತಿ ಮಾಡಿದ್ದೇವೆ. ಅಧ್ಯಯನ ತಂಡ ಕೂಡ ಬಂದುಹೋಗಿದೆ. ಅಧ್ಯಯನ ತಂಡ ಬಂದು ಹೋದಮೇಲೆ, ಮೊದಲು ಕುಡಿಯುವ ನೀರು ಮೊದಲಾದ ಬಾಬುಗಳನ್ನು ಏನು ಸೇರಿಸಿರಲಿಲ್ಲ ಅದನ್ನು ಸೇರಿಸಿ ಮನವಿ ಸಲ್ಲಿಸಿದ್ದೇವೆ. ಮೊದಲು ಕೇವಲ 124 ಕೋಟಿ ರೂಪಾಯಿ ನಷ್ಟವಾಗಿದೆ, ಅದಕ್ಕೆ ಪರಿಹಾರ ಕೊಡಬೇಕಾಗುತ್ತದೆಂದು ಮನವಿ ಸಲ್ಲಿಸಿದ್ದೆವು; ಅದು ಈಗ 400 ಕೋಟಿ ರೂಪಾಯಿ ಬೇಕಾಗುತ್ತದೆಂಬ ಮನವಿಯನ್ನು ಪುನಃ ಕೇಂದ್ರ ಸರ್ಕಾರದಲ್ಲಿ ಸಲ್ಲಿಸಿದ್ದೇವೆ. ಇವತ್ತು ಇಷ್ಟೊಂದು ದೊಡ್ಡ ಮೊತ್ತದ ಹಣ ಕೊಡಬೇಕಾದ ಪರಿಸ್ಥಿತಿ ಇರುವಾಗ ಎಲ್ಲಾ ರೀತಿಯಾಗಿ ಒಂದು ಅಧ್ಯಯನವನ್ನು ನಾವು ಮಾಡಬೇಕಾಗುತ್ತದೆ. ಸಚಿವ ಸಂಪುಟದ ಸಭೆ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಏನು ಬರುತ್ತದೆ ಎಂದು ಎಂಬುದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ, ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಬೇಕಾಗುತ್ತದೆ. ಇಷ್ಟೊಂದು 300 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಹಣವನ್ನು ರಾಜ್ಯ ಸರ್ಕಾರ ಭರಿಸುವುದು ಕಷ್ಟ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಖರ್ಗೆಯವರು ಹೇಳಿದ್ದಾರೆ, ಯಾವ ರಾಜ್ಯ ಸರ್ಕಾರ ಕೂಡ ಇದನ್ನು ಭರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅವರೂ ಕೂಡ ಸರ್ಕಾರ ನಡೆಸಿರತಕ್ಕವರು ಮತ್ತು ಅಭಿಪ್ರಾಯ ಕೂಡ ಅದೇ ಆಗಿದೆ. ಈ ಪರಿಸ್ಥಿತಿಯಲ್ಲಿ ನಾವು ಸಚಿವಸಂಪುಟದಲ್ಲಿ ಪರಿಶೀಲನೆ ಮಾಡಬೇಕಾಗಿದೆ. ಈ ವರದಿ ಶುಕ್ರವಾರ ನಮ್ಮ ಕೈ ಸೇರಿದೆ. ಶುಕ್ರವಾರದ ನಂತರ ಶನಿವಾರ ಒಂದು ಕಳೆದು ಇವತ್ತು ಸಭೆ ಸೇರುತ್ತಿದ್ದೇವೆ. ನಮಗೆ ಕಾಲಾವಕಾಶ ಬೇಕಾಗಿರುವ ಕಾರಣ, ನಾವು ಪರಿಶೀಲನೆ ಮಾಡಿ ಸಚಿವ ಸಂಪುಟದ ಮುಂದೆ ಹೋಗಬೇಕಾಗಿದೆ; ಮತ್ತು ಸಾಧಕ ಬಾಧಕಗಳನ್ನೆಲ್ಲಾ ಯೋಚಿಸಬೇಕಾಗಿದೆ. ಆ ಕಾರಣದಿಂದ ನಮಗೆ ಸಮಯ ಬೇಕೆಂಬ ಮನವಿಯನ್ನು ಈ

ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕಲಬೆರಕೆ ಔಷಧಿಗಳ ಬಗ್ಗೆ ಇನ್ನೂ ಸಮಿತಿಯವರು ವರದಿ ಕೊಟ್ಟಿಲ್ಲ. ಸರ್ಕಾರ ಅಂದರೆ ಮೊದಲಿನಿಂದ ಈ ಕೆಲಸವನ್ನು ನಾವು ಮಾಡುತ್ತಾ ಬಂದಿದ್ದೇವೆ. ಎಲ್ಲೆಲ್ಲಿ ಈ ಕಲಬೆರಕೆ ಔಷಧಿಗಳನ್ನು ಮಾರಾಟ ಮಾಡಿರತಕ್ಕ ಪ್ರಕರಣಗಳು ಇವೆ, ಅದು ಗುಲ್ಬರ್ಗ ಜಿಲ್ಲೆ ಇರಬಹುದು, ಬೀದರ್ ಜಿಲ್ಲೆ ಇರಬಹುದು, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಕಲಬೆರಕೆ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ ಅಂಥವರ ಮೇಲೆ ಈಗಾಗಲೇ ನಾವು ಉಗ್ರ ಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೆ ಕಾನೂನು ಇದೆ. ಕಾನೂನು ಇರತಕ್ಕ ಸಂದರ್ಭದಲ್ಲಿ ಹೊರಗಡೆ ಪತ್ರಿಕೆಗಳಲ್ಲಿ ಬರುತ್ತದೆ. ಅದೇನೆಂದರೆ, ಕಳಪೆ ಕ್ರಿಮಿನಾಶಕ, ಕಳಪೆ ಬೀಜ ಎಂದು. ಏನು ಎತ್ತ, ಕಾನೂನು ಮತ್ತೊಂದು ಮಗದೊಂದು ಗೊತ್ತಿಲ್ಲದೆ ಇರತಕ್ಕವರು ಮಾತೆತ್ತಿದರೆ ಕಳಪೆ ಬೀಜ, ಕಳಪೆ ಕ್ರಿಮಿನಾಶಕ ಎಂದು ಬರೆಯುತ್ತಿರತಕ್ಕದ್ದನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದಕ್ಕೆ ದೇಶದಲ್ಲಿ ಕಾನೂನು ಇದೆ. ಕಾನೂನು ಮೀರಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ಇವತ್ತು ನಮ್ಮಲ್ಲಿರತಕ್ಕ ಕಾನೂನುಗಳಿಗೆ ಹಲ್ಲಿಲ್ಲ. ಹಲ್ಲಿಲ್ಲದೆ ಇರತಕ್ಕ ಕಾನೂನುಗಳು ನಮ್ಮ ದೇಶದಲ್ಲಿವೆ. ಹಲ್ಲು ಇಲ್ಲದೆ ಇರತಕ್ಕ ಕಾನೂನುಗಳನ್ನು ಇಟ್ಟುಕೊಂಡು ಇವತ್ತು ಇದನ್ನು ತಡೆಗಟ್ಟಿಲ್ಲವೆಂದು ಹೇಳುವುದಾದರೆ ಯಾವ ರೀತಿ ತಡೆಗಟ್ಟುವುದಕ್ಕಾಗುತ್ತದೆ? ಅದರಲ್ಲಿ ನಾಮಿನಲ್ ಆಗಿ ಜುಲ್ಮಾನೆ ಹಾಕುವುದಕ್ಕೆ ಅವಕಾಶ ಇದೆ. 3 ವರ್ಷ ಸಜಾ ವಿಧಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಆದರೆ ಸಾಮಾನ್ಯವಾಗಿ ಇವತ್ತು ತೀರ್ಮಾನವಾಗಿರತಕ್ಕ ಮೊಕದ್ದಮೆಗಳು ಏನಿವೆ ಅವುಗಳಲ್ಲಿ 3-4-5 ನೂರು ರೂಪಾಯಿ ಜುಲ್ಮಾನೆ ಹಾಕಿಬಿಟ್ಟಿದ್ದಾರೆ. ನಾವು ನ್ಯಾಯಾಲಯಕ್ಕೆ ಹೇಳುವುದಕ್ಕಾಗುವುದಿಲ್ಲ. ನ್ಯಾಯಾಲಯದಲ್ಲಿ ಏನು ತೀರ್ಪು ಬರುತ್ತದ ಆ ತೀರ್ಪನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಆಗಿರತಕ್ಕ ತೀರ್ಪುಗಳಲ್ಲಿ 500 ರೂಪಾಯಿಗಳಿಗಿಂತ ಹೆಚ್ಚಿಗೆ ಜುಲ್ಮಾನೆ ಹಾಕಿಲ್ಲ. ಯಾರಿಗೂ ಕೂಡ ಶಿಕ್ಷೆ ವಿಧಿಸಿಲ್ಲ. ಅದಕ್ಕೋಸ್ಕರ ಕಳಪೆ ಔಷಧಿ ತಯಾರಿಸತಕ್ಕವರು ಮತ್ತು ಮಾರಾಟ ಮಾಡತಕ್ಕವರು ಏನು ಮಾಡುತ್ತಿದ್ದಾರೆಂದರೆ ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ. ಕಾನೂನಿನ ಪ್ರಕಾರವೇ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ. ಯಾವ ರೀತಿ ಎಂದರೆ ಅದನ್ನು ಕಂಟೆಸ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ನೇರವಾಗಿ ಕೋರ್ಟಿಗೆ ಹೋಗುತ್ತಾರೆ. ಹೌದು, ಕಲಬೆರಕೆ ಆಗಿದೆ ಎಂದು ಹೇಳುತ್ತಾರೆ. ನ್ಯಾಯಾಧೀಶರು 500 ರೂಪಾಯಿ ಜುಲ್ಮಾನೆ ಹಾಕಿದ್ದೇವೆಂದು ಹೇಳುತ್ತಾರೆ. ಆ ಕೇಸ್ ವಕೀಲರಿಗೂ ಗೊತ್ತಿರುತ್ತದೆ. ಅವರು ಅದನ್ನು ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. 500 ರೂಪಾಯಿ ಜುಲ್ಮಾನೆ ಕೊಡುತ್ತಾರೆ, ಹೊರಗಡೆ ಬರುತ್ತಾರೆ. ಈ ರೀತಿ ಹಲ್ಲಿಲ್ಲದ ಕಾನೂನುಗಳಾಗಿರುವ ಕಾರಣದಿಂದ ಇದನ್ನು ಯಶಸ್ವಿಯಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ ರಾಜ್ಯ ಸರ್ಕಾರ ಒಂದು ಸಾರಿ ಎಲ್ಲಾ ನ್ಯಾಯಾಧೀಶರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ. ಅದೇನೆಂದರೆ, ಈ ಹಲ್ಲು ಇಲ್ಲದೆ ಇರತಕ್ಕ ಕಾನೂನು ಏನಿದೆ ಇದಕ್ಕೆ ಹಲ್ಲುಗಳು ಬರತಕ್ಕ

ವ್ಯವಸ್ಥೆ ಆಗಬೇಕು, ಅದಕ್ಕೆ ತಿದ್ದುಪಡಿಯಾಗಬೇಕಾದುದು ಅವಶ್ಯಕತೆ ಇದೆ ಎಂದು ಒಂದಲ್ಲ ಅನೇಕ ಸಾರಿ ನಾವು ಹೇಳಿದ್ದೇವೆ. ನಾನೂ ಸಹ ಈ ದೇಶದ ಕೃಷಿ ಮಂತ್ರಿಗಳ ಸಮ್ಮೇಳನ ದೆಹಲಿಯಲ್ಲಿ ನಡೆದ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆದುದರಿಂದ ಇದು ಏನು ಕಾನೂನು ಇದೆ ಈ ಕಾನೂನನ್ನು ಪ್ರತಿ ವಿಧಿಗಳಲ್ಲಿ ಪಾಲನೆ ಮಾಡಿದ್ದೇವೆ. ಇನ್ನು ಮುಂದೆಯೂ ಸಹ ಇದಕ್ಕಿಂತ ಯಾರೇ ಅಧಿಕಾರಿಗಳು ಏನಾದರೂ ಆಲಸ್ಯ ಮನೋಭಾವದಿಂದ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಮತ್ತು ವಿಧಿಯನ್ನು ಅನುಸರಿಸಿ ಪ್ರತಿಯೊಬ್ಬರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂಬ ತಕ್ಕ ವಿಚಾರವನ್ನು ಈ ಸದನದ ಗಮನಕ್ಕೆ ಮತ್ತು ತಮ್ಮ ಗಮನಕ್ಕೆ ತರುತ್ತಾ, ಇನ್ನೊಂದು ಏನು ನಾನು ಆಲೋಚನೆ ಮಾಡಿದ್ದೇನೆಂದರೆ ಇವತ್ತು ರೈತರ ಸಮಸ್ಯೆಗಳು ಹಲವಾರು ಇವೆ. ಈ ವರದಿ ಎಷ್ಟು ಭೀಕರವಾಗಿದೆ ಎಂದು ವರದಿ ನೋಡತಕ್ಕವರಿಗೆ ಗೊತ್ತಾಗುತ್ತದೆ. ನಮಗೆ ವರದಿ ಬೇಕಾಗಿಲ್ಲ. ಕಣ್ಣಿರತಕ್ಕವರು ಗ್ರಾಮೀಣ ಪ್ರದೇಶಗಳಲ್ಲಿ ರೈತರ ಪರಿಸ್ಥಿತಿ ಏನಿದೆ, ಯಾವ ರೀತಿ ಆಗುತ್ತಿದೆ, ಅವರ ಬದುಕು ಬಾಳು ಎಂದು ನೋಡಿದರೆ ಕಣ್ಣಿರತಕ್ಕವರಿಗೆ ಕಣ್ಣಲ್ಲಿ ನೀರು ಬಾರದೆ ಇರತಕ್ಕದ್ದು ಆಶ್ಚರ್ಯ. ಇಂಥ ಪರಿಸ್ಥಿತಿ ಇವತ್ತಿನ ದಿವಸ ನಮ್ಮ ದೇಶದಲ್ಲಿ ಇದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳು ಕಳೆದಿವೆ. 50 ವರ್ಷಗಳು ಆದನಂತರವೂ ಕೂಡ 100ಕ್ಕೆ 70ರಷ್ಟು ಇರತಕ್ಕಂಥ ಈ ವರ್ಗದ ಜನರ ಪರಿಸ್ಥಿತಿ ಈ ರೀತಿಯಲ್ಲಿ ನಿಂತಿದೆ. ಆದ್ದರಿಂದ ಇದನ್ನು ಚರ್ಚೆ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೂ ಕೂಡ ನಾವು ತಿಳಿಸಲಿದ್ದೇವೆ. ಬೆಳೆ ನಾಶವಾಗಿರುವ ಬಗ್ಗೆ, ಆತ್ಮಹತ್ಯೆ ಬಗ್ಗೆ ಮಾತ್ರವಲ್ಲ ಎಲ್ಲಾ ಸಮಸ್ಯೆಗಳನ್ನೂ ಆಮೂಲಾಗ್ರವಾಗಿ ಕನಿಷ್ಟ ಎರಡು ದಿವಸವಾದರೂ ಚರ್ಚೆ ಮಾಡುವುದಕ್ಕೆ ಎಲ್ಲಾ ರಾಜ್ಯಗಳ ಕೃಷಿ ಮಂತ್ರಿಗಳ ಸಮ್ಮೇಳನವನ್ನು ಬರುವ ತಿಂಗಳು ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ. ಈ ಸಮ್ಮೇಳನವನ್ನು ಮಾಡುವುದಕ್ಕೆ ಆದಷ್ಟು ಜಾಗ್ರತೆಯಾಗಿ ಏರ್ಪಾಟು ಮಾಡಬೇಕು ಎನ್ನುವಂಥ ಸೂಚನೆಯನ್ನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಈ ಪರಿಹಾರವನ್ನು ಕೊಡತಕ್ಕಂಥ ವಿಚಾರದಲ್ಲಿ ಸಚಿವ ಸಂಪುಟದ ಸಭೆಯ ಮುಂದೆ ತೀರ್ಮಾನವಾಗಬೇಕಾಗಿರುವ ಕಾರಣ ಕಾಲಾವಕಾಶ ನೀಡಬೇಕೆಂದು ಈ ಸಂದರ್ಭದಲ್ಲಿ ಮನವಿಯನ್ನು ಮಾಡಿಕೊಳ್ಳುವುದಕ್ಕೆ ನಾನು ಇಚ್ಛೆಪಡುತ್ತೇನೆ ಮತ್ತು ಈಗ ತಂದಿರತಕ್ಕಂಥ ನಿಲುವಳಿ ಸೂಚನೆಯ ಬಗ್ಗೆ ಮಾನ್ಯ ಅಧ್ಯಕ್ಷರ ತೀರ್ಪಿಗೆ ಬಿಟ್ಟಿದ್ದೇನೆ.

+ ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನಮ್ಮ ಸಹೋದ್ಯೋಗಿಗಳಾದ ಮಾನ್ಯ ಕೃಷಿ ಮಂತ್ರಿಯವರು ಬೆಳೆ ವಿವರಗಳನ್ನು ಮತ್ತು ಅದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಇಂಥ ಪ್ರಕರಣದಲ್ಲಿ ಪರಿಹಾರವನ್ನು ನಾವು ನ್ಯಾಷನಲ್

ಕೆಲ್ಯಾಮಿಟಿ ರಿಲೀಫ್ ಫಂಡ್ಸ್‌ನಲ್ಲಿ ಕೊಡಬೇಕಾಗುತ್ತದೆ. ಕೇಂದ್ರದಿಂದ ಎನ್.ಸಿ.ಆರ್.ಎಫ್.ನ ಮೂಲಕ ಒಂದು ವರ್ಷಕ್ಕೆ ಸುಮಾರು 44 ಕೋಟಿ ರೂಪಾಯಿಗಳು ಬರುತ್ತದೆ. ಅದರಲ್ಲಿ ಶೇಕಡ 25ರಷ್ಟನ್ನು ರಾಜ್ಯಸರ್ಕಾರ ಭರಿಸಬೇಕಾಗುತ್ತದೆ ಮತ್ತು ಶೇಕಡ 75 ಭಾಗವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಕೇಂದ್ರಸರ್ಕಾರದ 10ನೇ ಹಣಕಾಸಿನ ಆಯೋಗದ ಗೈಡ್‌ಲೈನ್ಸ್, ನಾರ್ಮ್ಸ್ ಪ್ರಕಾರ ನಮ್ಮ ರಾಜ್ಯ ಸರ್ಕಾರಕ್ಕೆ 44 ಕೋಟಿ ರೂಪಾಯಿ ಬರುತ್ತದೆ. ಈ ರೀತಿ ಕೊಡುವಂಥ ಹಣವನ್ನು ವರ್ಷವೊಂದಕ್ಕೆ ಶೇಕಡ 5ರಷ್ಟು ಹೆಚ್ಚಿಗೆ ಮಾಡುತ್ತಾರೆ. ಆದ್ದರಿಂದ ಈ ವರ್ಷ 46 ಕೋಟಿ ರೂಪಾಯಿಗಳು ಬರುತ್ತಿವೆ. ಇದರ ಜೊತೆಗೆ 22 ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಹಣವನ್ನು ಈ ವರ್ಷ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಕೊಟ್ಟಿದೆ. ಒಟ್ಟಿನಲ್ಲಿ ಇಲ್ಲಿಯವರೆಗೆ ಸುಮಾರು 70 ಕೋಟಿ ರೂಪಾಯಿಗಳನ್ನು ನ್ಯಾಷನಲ್ ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ ಖರ್ಚು ಮಾಡಿದ್ದೇವೆ. ಅದರಲ್ಲಿ 4 ಕೋಟಿ ರೂಪಾಯಿಗಳನ್ನು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಏನು ಬೆಳೆ ನಾಶವಾಗಿದೆ ಅದಕ್ಕೆ ನಾವು ಕೊಟ್ಟಿದ್ದೇವೆ ಮತ್ತು ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಬೆಳೆ ಎಷ್ಟು ನಾಶವಾಗಿದೆ ಅವೆಲ್ಲದಕ್ಕೂ ನಾವು ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲ. ಮತ್ತು ಅದು ಸಾಧ್ಯವೂ ಇಲ್ಲ. ಆದರೆ ಕೇಂದ್ರ ಸರ್ಕಾರದ ನಾರ್ಮ್ಸ್‌ನಲ್ಲಿ ಇನ್‌ಪುಟ್ ಸಬ್ಸಿಡಿ ಎಂದು ಇರುವುದರಿಂದ ಅದನ್ನು ನಾವು ಕೊಡತಕ್ಕಂಥ ಅವಕಾಶವಿದೆ ಮತ್ತು ಕೊಟ್ಟಿದ್ದೇವೆ. ಇನ್‌ಪುಟ್ ಸಬ್ಸಿಡಿ ಎಂದು ಸುಮಾರು 500 ರೂಪಾಯಿಗಳನ್ನು ಏನು ಕೊಟ್ಟಿದ್ದೇವೆ ಅದು ಸಾಲುವುದಿಲ್ಲವೆಂದು ಹೇಳಿ, ಅದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ನಾವು ಹೊಸದಾಗಿ ಸರ್ವೆ ಮಾಡಿ ಕೇಂದ್ರಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಈ ಪರಿಹಾರಕ್ಕೋಸ್ಕರ 250 ಕೋಟಿ ರೂಪಾಯಿಗಳು, ಉದ್ಯೋಗ ದೃಢೀಕರಣ ಯೋಜನೆಗೆ 100 ಕೋಟಿ ರೂಪಾಯಿಗಳು ಮತ್ತು ಕುಡಿಯುವ ನೀರಿಗೋಸ್ಕರ 50 ಕೋಟಿ ರೂಪಾಯಿಗಳು ಹೀಗೆ ಒಟ್ಟು 400 ಕೋಟಿ ರೂಪಾಯಿಗಳಿಗೆ ನಾವು ಈಗಾಗಲೇ ಪ್ರಸ್ತಾವನೆಯನ್ನು ಕೇಂದ್ರಸರ್ಕಾರಕ್ಕೆ ಕೊಟ್ಟಿದ್ದೇವೆ. ಅದನ್ನು ಈ ಅಧಿವೇಶನ ಮುಗಿದ ತಕ್ಷಣ ನಾನು ಮತ್ತು ಶ್ರೀ ಬೈರೇಗೌಡರು ಕೇಂದ್ರ ಕೃಷಿ ಇಲಾಖೆಗೆ ಹೋಗಿ ಅವರಿಗೆ ಒತ್ತಾಯ ಮಾಡಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಬಿಡುಗಡೆ ಮಾಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನು ಈ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಈಗಾಗಲೇ ಮಾನ್ಯ ಬೈರೇಗೌಡರು ಹೇಳಿದ್ದಾರೆ. ಈ ಆತ್ಮಹತ್ಯೆ ಪ್ರಕರಣಗಳು ಈ ವರ್ಷ ಮಾತ್ರ ಆಗಿರತಕ್ಕಂಥದ್ದು ಅಲ್ಲ. ಪ್ರತೀ ವರ್ಷವೂ ಸಹ ಬೀದರ್, ಗುಲ್ಬರ್ಗಾ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ನಡೆದುಕೊಂಡು ಬಂದಿವೆ. ಬೀದರ್ ಜಿಲ್ಲೆ ಒಂದನ್ನು ತೆಗೆದುಕೊಂಡರೆ 1993ರಲ್ಲಿ 106 ಆತ್ಮಹತ್ಯೆ ಪ್ರಕರಣಗಳು ಆಗಿವೆ. 1994ರಲ್ಲಿ 122 ಆತ್ಮಹತ್ಯೆ ಪ್ರಕರಣಗಳು ಆಗಿವೆ. 1995ರಲ್ಲಿ 109 ಆತ್ಮಹತ್ಯೆ ಪ್ರಕರಣಗಳು ಆಗಿವೆ.

ಶ್ರೀ ವಿಜಯಕುಮಾರ್ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಸರ್ಕಾರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಈ ರೀತಿ ಹಗುರವಾಗಿ ಮಾತನಾಡುತ್ತಿದೆ. ಈ ರೀತಿ ರೈತರ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ. ಇದು ಜನರ ಮನಸ್ಸಿಗೆ ಬಹಳ ನೋವು ಆಗುತ್ತದೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): 1996ರಲ್ಲಿ 111 ಆತ್ಮಹತ್ಯೆ ಪ್ರಕರಣಗಳು ಆಗಿವೆ, 1997ರಲ್ಲಿ 115 ಪ್ರಕರಣಗಳು ಮತ್ತು 1998ರಲ್ಲಿ ಇಲ್ಲಿಯವರೆಗೆ 17 ಆತ್ಮಹತ್ಯೆ ಪ್ರಕರಣಗಳು ಆಗಿವೆ. ಯಾವುದೇ ವರ್ಷ ಸಹ ಬೆಳೆ ಹಾನಿಯಿಂದ ಆತ್ಮಹತ್ಯೆಗಳು ಎಷ್ಟೆಷ್ಟು ಆಗಿವೆಯೆಂದು ನಾವು ಪಟ್ಟಿ ಮಾಡಿರಲಿಲ್ಲ. ಆದರೆ ಈ ವರ್ಷ ಇಂಥ ಪಟ್ಟಿಯನ್ನು ಮಾಡಬೇಕೆನ್ನುವ ಅಭಿಪ್ರಾಯ ಮೂಡಿಬಂತು. ಬೆಳೆ ಹಾನಿಯಿಂದ ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಥ ಪ್ರಕರಣಗಳನ್ನು ಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟ ನಂತರ ನಿರ್ದಿಷ್ಟವಾದ ಮೂರು ಪ್ರಕರಣಗಳನ್ನು ಅವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು. ಆ 3 ಪ್ರಕರಣಗಳಿಗೆ ತಕ್ಷಣ ಒಂದು ಲಕ್ಷ ರೂಪಾಯಿಯಂತೆ ಸರ್ಕಾರದಿಂದ ಹಣ ಬಿಡುಗಡೆ ಮಾಡಲಾಯಿತು. ಬಾಕಿ ಪ್ರಕರಣಗಳ ವಿವರಗಳನ್ನು ತರಿಸಬೇಕಿತ್ತು, ಅಷ್ಟರಲ್ಲಿ ಜಂಟಿ ಸದನ ಸಮಿತಿ ರಚನೆಯಾಯಿತು. ಆ ಸದನಸಮಿತಿ ಅಲ್ಲಿಗೆ ಹೋಗಿ ನೋಡಿಬಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಬಹುದೆಂದು ನಾವು ಬಾಕಿ ಪ್ರಕರಣಗಳ ವಿವರಗಳನ್ನು ತರಿಸುವುದನ್ನು ತಡೆಹಿಡಿದಿದ್ದೆವು. ಮತ್ತು ಆತ್ಮಹತ್ಯೆ ಪ್ರಕರಣದ ಬಗ್ಗೆ ಈಗಾಗಲೇ ಸಿ.ಓ.ಡಿ ಎನ್‌ಕ್ವೈರಿ ಆಗಿದ್ದು ಅದರ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಹಾಗೆಯೇ ಎಲ್ಲಾ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು ಬೆಳೆದ ಬೆಳೆಗೆ ಸಂಬಂಧಪಟ್ಟಂತೆ ಆಣೇವಾರಿಯನ್ನು ಬರೆಯಬೇಕು ಮತ್ತು ವಿವರಣೆಯನ್ನು ಸರ್ಕಾರಕ್ಕೆ ಒದಗಿಸಿಕೊಡಬೇಕು ಎಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಜಿಲ್ಲಾಧಿಕಾರಿಗಳು ಇದಕ್ಕೆ ಸಂಬಂಧಪಟ್ಟಂತೆ ಸರ್ವೆ ಕೆಲಸವನ್ನು ಮಾಡುತ್ತಿದ್ದು ಆ ಕೆಲಸ ಮುಗಿಯುತ್ತಾ ಬಂದಿದೆ. ಆದಷ್ಟು ಬೇಗ ಮಾಡಿ ಮುಗಿಸಿ ಎಂದು ಹೇಳುತ್ತೇನೆ. ಸದನಸಮಿತಿಯ ಮಧ್ಯಂತರ ವರದಿ ಸಹ ನಮ್ಮ ಮುಂದಿದೆ. ನಮ್ಮ ಸಹೋದ್ಯೋಗಿಗಳು ಹೇಳಿದ ಹಾಗೆ ಒಂದೆರಡು ದಿನಗಳಲ್ಲಿ ಸಚಿವ ಸಂಪುಟದ ಸಭೆಯ ಮುಂದೆ ಈ ಪ್ರಸ್ತಾವನೆಯನ್ನು ಇಟ್ಟು ಏನು ತೀರ್ಮಾನ ಕೈಗೊಳ್ಳಬೇಕೋ ಅದನ್ನು ನಾವು ಮಾಡುತ್ತೇವೆ. ಸರ್ಕಾರ ಯಾವುದೇ ಕಾರಣದಿಂದ ಈ ವಿಷಯದಲ್ಲಿ ವಿಳಂಬ ಮಾಡಿಲ್ಲ. ನಾವು ಎಷ್ಟು ಜಾಗ್ರತೆಯಿಂದ ಕ್ರಮ ತೆಗೆದುಕೊಳ್ಳಬೇಕಿತ್ತೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದರೆ ಆ ಪರಿಹಾರಕ್ಕಾಗಿ ನಮ್ಮ ರಾಜ್ಯ ಸರ್ಕಾರದಿಂದ ಎಲ್ಲ ಹಣವನ್ನೂ ಒದಗಿಸುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದಿಂದ ನ್ಯಾಷನಲ್ ಕೆಲಾಮಿಟಿ ರಿಲೀಫ್ ಫಂಡ್ಸ್‌ನಿಂದ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ಬಿ.ಜೆ.ಪಿ.ಯ ಮಾನ್ಯ ಸದಸ್ಯರುಗಳು

ಕೇಂದ್ರ ಮೇಲೆ ಒತ್ತಾಯ ಮಾಡುತ್ತೇವೆ. ಆದ್ದರಿಂದ ಕೇಂದ್ರಸರ್ಕಾರದಿಂದ ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸಹಕಾರ ಕೊಡಬೇಕೆಂದು ಹೇಳಿ, ಪರಿಹಾರದ ಬಗ್ಗೆ ಸರ್ಕಾರದಿಂದ ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಸುಮಾರು 500ರಿಂದ 600 ಕೋಟಿ ರೂಪಾಯಿಗಳಷ್ಟು ಕೀಟನಾಶಕ ಬಳಕೆಯಾಗುತ್ತಿದೆ ಎಂದು ಕೆಲವರು ಆಸ್ಟ್ರೊನಾಮಿಕಲ್ ಫಿಗರ್ಸ್‌ನ್ನು ಹೇಳುತ್ತಿದ್ದಾರೆ. ವಾಸ್ತವಾಂಶ ಏನು ಇದೆ ಎನ್ನುವುದನ್ನು ಸಹ ನಾನು ಸಭೆಯ ಗಮನಕ್ಕೆ ತರತಕ್ಕಂಥ ಅವಶ್ಯಕತೆಯಿದೆ. ರಾಜ್ಯದಲ್ಲಿ ಕೀಟನಾಶಕ ಔಷಧಿಗಳ ಬಳಕೆ ಈ ರೀತಿ ಇದೆ: 1996-97ನೇ ಇಸವಿಯಲ್ಲಿ 3,665 ಮೆಟ್ರಿಕ್ ಟನ್ನುಗಳು, 1997-98ರಲ್ಲಿ 2,962 ಮೆಟ್ರಿಕ್ ಟನ್ನುಗಳಷ್ಟು ಕೀಟನಾಶಕ ಔಷಧಿಗಳು ರಾಜ್ಯದಲ್ಲಿ ಖರ್ಚಾಗಿದೆ. ಇದರ ಬೆಲೆ ಎಷ್ಟು ಆಗುತ್ತದೆಂದರೆ ಸುಮಾರು 155ರಿಂದ 165 ಕೋಟಿ ರೂಪಾಯಿಗಳಷ್ಟಾಗುತ್ತದೆ. ಇನ್ನು ಬೀದರ್ ಮತ್ತು ಗುಲ್ಬರ್ಗಾ ಈ 2 ಜಿಲ್ಲೆಗಳಲ್ಲಿ ಎಷ್ಟು ಕೀಟನಾಶಕ ಔಷಧಿಗಳು ಖರ್ಚಾಗಿವೆಯೆಂದು ಲೆಕ್ಕ ಹಾಕಿದರೆ 1996-97ರಲ್ಲಿ ಕೇವಲ 96 ಮೆಟ್ರಿಕ್ ಟನ್ನುಗಳಷ್ಟು ಕೀಟನಾಶಕ ಔಷಧಿಗಳು ಬೀದರ್‌ನಲ್ಲಿ ಖರ್ಚಾಗಿವೆ. ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ 515 ಮೆಟ್ರಿಕ್ ಟನ್ನುಗಳಷ್ಟು ಕೀಟನಾಶಕ ಔಷಧಿ ಖರ್ಚಾಗಿದೆ. 1997-98ರಲ್ಲಿ ಬೀದರ್ ಜಿಲ್ಲೆಯಲ್ಲಿ 105 ಮೆ.ಟನ್ನಿನಷ್ಟು ಕೀಟನಾಶಕ ಔಷಧಿ ಖರ್ಚಾಗಿದೆ, ಗುಲ್ಬರ್ಗಾ ಜಿಲ್ಲೆಯಲ್ಲಿ 475 ಮೆಟ್ರಿಕ್ ಟನ್ನಿನಷ್ಟು ಮಾತ್ರ ಕೀಟನಾಶಕ ಔಷಧಿ ಖರ್ಚಾಗಿದೆ. ಈ ಎರಡೂ ಜಿಲ್ಲೆಗಳಲ್ಲಿ ಖರ್ಚಾದಂಥ ಕೀಟನಾಶಕಗಳ ಬೆಲೆ ಸುಮಾರು 35ರಿಂದ 40 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಆದರೆ ಇದರ ಪ್ರಕಾರ ಏನಾಗುತ್ತಿದೆ ಎಂದರೆ, 500ರಿಂದ 600 ಕೋಟಿ ರೂಪಾಯಿಗಳ ಬೆಲೆಯುಳ್ಳ ಕೀಟನಾವಕ ಔಷಧಿಗಳು ಗುಲ್ಬರ್ಗಾ ಒಂದೇ ಜಿಲ್ಲೆಯಲ್ಲಿ ಖರ್ಚಾಗಿದೆ, ವಿನಿಯೋಗವಾಗಿದೆ, ಬೀದರ್ ಜಿಲ್ಲೆಯಲ್ಲಿ ಖರ್ಚಾಗಿದೆ ಎಂದು ಹೇಳುತ್ತಿದ್ದಾರೆ. ವಾಸ್ತವಾಂಶದಿಂದ ಬಹಳ ದೂರ ಇರುವಂಥ ವರ್ತಮಾನವನ್ನು ಕೊಡುತ್ತಿದ್ದಾರೆ. ಇದು ಈ ರೀತಿ ಏಕೆ ಮಾಡುತ್ತಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಇದನ್ನು ನೋಡಿದರೆ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ. ಇಡೀ ರಾಜ್ಯದಲ್ಲಿಯೇ ಖರ್ಚಾಗದೆ ಇರತಕ್ಕಂಥದ್ದು ಈ ಎರಡು ಜಿಲ್ಲೆಗಳಲ್ಲಿ ಕೀಟನಾಶಕ ಔಷಧಿಗಳು ಖರ್ಚಾಗಿವೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ವಾಸ್ತವಾಂಶವನ್ನು ನಾನು ಈಗ ಹೇಳಿದ್ದೇನೆ. ನಾನು ವಾಸ್ತವಾಂಶವನ್ನು ಈ ಸಭೆಯ ಮುಂದಿಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

4.50 ಪಿ.ಎಂ.

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ): ನಮ್ಮ ಮಂತ್ರಿಗಳು ಕೊಪ್ಪಳ ಮತ್ತು ರಾಯಚೂರು ಜಿಲ್ಲೆ ಬಗ್ಗೆ ಮರೆತೇಬಿಟ್ಟಿದ್ದಾರೆ. ಇದು ಒಂದು ಕಡೆ ಮಳೆ ಇಲ್ಲದೆ ಲಾಸ್ ಆದರೆ ನಮ್ಮ ಕಡೆ ಕೆನಾಲ್ ಒಡೆದರೆ ನಮಗೆ ಲಾಸ್ ಆಗುತ್ತದೆ. ಎಷ್ಟು ಕೋಟಿ ಲಾಸ್ ಆಗಿದೆಯೆಂದು ತಮಗೆ ಗೊತ್ತು. ಆ ರೈತರ ಬಗ್ಗೆ ಏನು ಮಾಡುತ್ತಿದ್ದೀರಿ? ಮುಂದೆ ಲಾಸ್ ಆಗದ ಹಾಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮಾನ್ಯ ಅಗ್ರಿಕಲ್ಚರ್ ಮಿನಿಸ್ಟರ್ ಮತ್ತು ಇರಿಗೇಷನ್ ಮಿನಿಸ್ಟರ್ ಅವರುಗಳು ನಮಗೆ ಈ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಗ್ರಿಕಲ್ಚರಲ್ ಮತ್ತು ಇರಿಗೇಷನ್ ಮಿನಿಸ್ಟರ್ ಬಗ್ಗೆ ಕೇಳಿದ್ದಾರೆ. ಆಮೇಲೆ ಹೇಳುತ್ತೀರಾ?

ಶ್ರೀ ಸಿ.ಬೈರೇಗೌಡ: ವಿವರಗಳನ್ನು ತರಿಸಿ ಒದಗಿಸಬೇಕಾಗುತ್ತದೆ. ತತ್‌ಕ್ಷಣದಲ್ಲಿ ರಾಯಚೂರು ಜಿಲ್ಲೆ ಅಥವಾ ಕೊಪ್ಪಳ ಜಿಲ್ಲೆಯಲ್ಲಿ ಏನಾಗಿದೆ ಎಂದು ನಮ್ಮಲ್ಲಿ ಅಂಕಿಅಂಶಗಳು ಇಲ್ಲ. ಇದನ್ನು ಒದಗಿಸಬೇಕೆಂದರೆ ಒದಗಿಸೋಣ. ಮಾನ್ಯ ಅಧ್ಯಕ್ಷರೇ, ಇದು ಜಂಟಿ ಜವಾಬ್ದಾರಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಈಗ ಮಾನ್ಯ ನಮ್ಮ ಕೃಷಿ ಸಚಿವರು ಏನು ಉತ್ತರ ಕೊಟ್ಟರು, ಅದು ಇದಕ್ಕೆ ನೇರವಾದ ಉತ್ತರವನ್ನು ಅವರು ಕೊಟ್ಟಿಲ್ಲ. ಅವರು ಸುತ್ತಿ ಬಳಸಿ ದೇಶದ ಎಲ್ಲಾ ವಿಚಾರಗಳನ್ನು ಹೇಳಿದರು. ಆಮೇಲೆ ಔಷಧಿಗಳಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆ, ಅದರಲ್ಲಿ ಬೀದರ್‌ಗೆ ಎಷ್ಟು, ಗುಲ್ಬರ್ಗಾಕ್ಕೆ ಎಷ್ಟು ಇದೆಲ್ಲವನ್ನೂ ಕೊಟ್ಟು ಮಿಕ್ಸಪ್ ಮಾಡಿ ಕೊನೆಗೆ ಯಾರ ಕೈಯಲ್ಲೂ ಏನೂ ಮಾಡುವುದಕ್ಕೆ ಆಗುವುದಿಲ್ಲ, ಮುಂದೆ ಯಾರು ಬಂದರೂ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಸ್ವಲ್ಪ ಸಮಯ ಕೊಟ್ಟರೆ ನಾವು ಯೋಚನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಅಲ್ಲಿಗೆ ಕ್ಲೋಸ್ ಮಾಡತಕ್ಕಂಥ ಮಾತನ್ನು ಆಡಿದ್ದಾರೆ. ತಮಗೆ ಗೊತ್ತಿದ್ದೂ ಏಕೆ ಹೀಗೆ ಹೇಳುತ್ತಾರೋ ಗೊತ್ತಿಲ್ಲ. ತೊಗರಿ ಬೆಳೆಗೆ ಗುಲ್ಬರ್ಗಾ ಒಂದು ಜಿಲ್ಲೆಗೇ ಹತ್ತು ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದೆವು. ಮತ್ತೆ ಕೊಟ್ಟಿಲ್ಲ ಎನ್ನತಕ್ಕಂಥ ಪ್ರಶ್ನೆ ಬರುವುದಿಲ್ಲ. ಸಂಕಟದಲ್ಲಿ ಇದ್ದಾಗ ಎಲ್ಲಾ ಕಡೆ ಕೊಡಬೇಕು ಎಂದು ಅಲ್ಲ. ಎಲ್ಲಿ ಯಾವ್ಯಾವ ಜಿಲ್ಲೆಗಳು ತೊಂದರೆಗೀಡಾಗಿವೆ, ಆ ಜಿಲ್ಲೆಗಳಿಗೆ ನೀವು ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದನ್ನು ಕೊಡಬೇಕೆಂದು ಹೇಳಿ ನಿನ್ನೆ ರಿಪೋರ್ಟ್ ಬಂದಿದೆ ಎಂದರೆ ಇಂಟರೀಮ್ ರಿಪೋರ್ಟ್ ತರಿಸಿದ್ದು ಏಕೆ? ತರಾತುರಿಯಲ್ಲಿ ಅದನ್ನು ತರಿಸಿದ್ದು ಕಾರಣ ಏನೆಂದರೆ ಅವರಿಗೆ ಬೇಗನೆ ರಿಲೀಫ್ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಿಂದ. ಸರ್ಕಾರ ಏನಾದರೂ ತಕ್ಷಣ ಅವರಿಗೆ ಫಸ್ಟ್ ಏಡ್ ಇದ್ದಹಾಗೆ ಇದು ಕೊಡಬೇಕಾಗುತ್ತದೆ. ಆಪರೇಶನ್ ಮಾಡುವುದಕ್ಕೆ ನಿಮಗೆ ಟೈಮ್ ಹಿಡಿಯುತ್ತದೆ ಎಂದರೆ ಕನಿಷ್ಟ ಪಕ್ಷ ಫಸ್ಟ್ ಏಡ್ ತರಹ

ನೀವು ಏನು ಸಹಾಯ ಮಾಡುತ್ತೀರೋ ಅದನ್ನು ಮಾಡಬೇಕು. ಅದಕ್ಕಾಗಿ ನ್ಯಾಚುರಲ್ ಕೆಲಾಮಿಟಿ ಫಂಡ್‌ನಿಂದ ನಾಲ್ಕೂವರೆ ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಇನ್ನೂ ಒಂದು ನಯಾಪೈಸೆ ಕೂಡ ಬಿಡುಗಡೆಯಾಗಿಲ್ಲ. ನೀವು ಕೊಟ್ಟ ಅಂಕಿಅಂಶಗಳ ಪ್ರಕಾರ total cultivatable area in Bidar and Gulbarga ಜಿಲ್ಲೆಯದ್ದು 12 ಲಕ್ಷ 36 ಸಾವಿರದ 321 ಹೆಕ್ಟೇರ್‌ಗಳು. Crop loss due to rain and insects ಇದು ಎರಡೂ ಸೇರಿಸದರೆ 8 ಲಕ್ಷ 4 ಸಾವಿರದ 422 ಹೆಕ್ಟೇರ್‌ಗಳು. ಇದು ನೀವೇ ಹೇಳಿದ್ದನ್ನು ನಾನು ಬರೆದುಕೊಂಡಿದ್ದು. ಇಷ್ಟೊಂದು ಇದ್ದರೂ ಇದಕ್ಕೆ ನೀವು ವರದಿ ಪ್ರಕಾರವೂ ಕೂಡ ಒಪ್ಪುತ್ತಿಲ್ಲ. ಆಮೇಲೆ ನಾವೇನೂ ಎಕ್ಸೆಸ್ ಕೇಳುತ್ತಿಲ್ಲ. ಆದರೆ ಒಂದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ 29. 1. 1998ರಂದು ಆಂಧ್ರಪ್ರದೇಶದ ಸರ್ಕಾರದವರು ಒಂದು ಗವರ್ನಮೆಂಟ್ ಆರ್ಡರನ್ನು ಇಷ್ಯೂ ಮಾಡಿದ್ದಾರೆ. ಅದರಲ್ಲಿ Cotton at Rs.1250 per hectare. In case the yield losses are 50% and above the normal yield. ಅಬೋವ್ 50 ಪರ್ಸೆಂಟ್ ಆದರೆ 1250 ರೂಪಾಯಿ ಅಂತಿದೆ. ಆಮೇಲೆ ರೆಡ್‌ಗ್ರಾಮ್‌ಗೆ ಒಂದು ಸಾವಿರ ರೂಪಾಯಿ ಪರ್ ಹೆಕ್ಟೇರ್. ಅದೇರೀತಿಯಾಗಿ ಇದು ಚೆಕ್ ಮೂಲಕ ಕೊಡಬೇಕೆಂದು ಇದೆಲ್ಲವನ್ನೂ ಕೂಡ ಹೇಳಿದ್ದಾರೆ. ಅಲ್ಲಿ ನಮ್ಮ ಪಕ್ಕದಲ್ಲಿ ಹಾಗೆ ಇದನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರ ಸರ್ಕಾರ ಕೂಡ ಅಲ್ಲಿ ಇವತ್ತು ಒಂದು ಸಾವಿರ ರೂಪಾಯಿ ಕೊಡಬೇಕೆಂದು ಅಲ್ಲಿ ಮಾಡಿದ್ದಾರೆ. ಆದರೆ ನೀವು ಮಾತ್ರ ಪರ್ ಹೆಕ್ಟೇರ್ 500 ರೂಪಾಯಿ ಹಿಡಿದುಕೊಂಡು ಕುಳಿತಿದ್ದೀರಿ. ಇದು ಏಕೆ ಹೇಳುತ್ತಿದ್ದೇನೆ ಎಂದರೆ, ನ್ಯಾಚುರಲ್ ಕೆಲಾಮಿಟಿಯಲ್ಲಿ ರೂಲ್ಸ್‌ನಲ್ಲಿ ಅಥವಾ ಸರ್ಕ್ಯುಲರ್‌ನಲ್ಲಿ ಐದುನೂರು ರೂಪಾಯಿ ಎಂದು ಇದೆ. ಅದಕ್ಕಾಗಿ ನೀವು 500 ರೂಪಾಯಿ ಮಾಡಿದ್ದಾರೆ ಎಂದು ಹೇಳುತ್ತೀರಿ. ಹಾಗಾದರೆ ಮಹಾರಾಷ್ಟ್ರದಲ್ಲಿ ಅವರಿಗೆ ನ್ಯಾಚುರಲ್ ಕೆಲಾಮಿಟಿ ಫಂಡ್ ಸರ್ಕ್ಯುಲರ್ ಅಪ್ಲಿಕೇಬಲ್ ಅಲ್ವಾ? ಇದು ನ್ಯಾಚುರಲ್ ಕೆಲ್ಯಾಮಿಟಿ ರೂಲ್ ಪ್ರಕಾರ ಇಷ್ಟು ಕಾಂಪನ್‌ಸೇಷನ್ ಕೊಡಬೇಕೆಂದು ಇರತಕ್ಕಂಥಾದ್ದು ಇಲ್ಲಿ ನಾವು ಮಾಡಿಕೊಂಡಿದ್ದು. ನಮ್ಮ ನಮ್ಮ ರಾಜ್ಯಗಳಿಗೆ ಅನ್ವಯವಾಗತಕ್ಕಂಥ ರೀತಿಯಲ್ಲಿ ನಾವು ಸರ್ಕಾರಗಳು ಇಷ್ಯು ಮಾಡುತ್ತೇವೆ. ಅವರು ಟೆಂತ್ ಕಮಿಷನ್ ಪ್ರಕಾರ ಒಂದು ಅಮೌಂಟನ್ನು ನಿಗದಿ ಮಾಡಿದ್ದಾರೆ. ಅದರ ಮೇಲೆ ಅವರು ಹೆಚ್ಚಿಗೆ ಕೊಡುವುದಿಲ್ಲ. ಅವರು ಕೊಡತಕ್ಕಂಥಾದ್ದನ್ನು ನಮಗೆ ನಿಗದಿ ಮಾಡಿದ್ದು. ಈಗ 46 ಕೋಟಿ ಎಂದು ಹೇಳುತ್ತೀರಿ. ಹೋದಸಲ 33 ಕೋಟಿ ಇದೆ. ಅದಕ್ಕಿಂತ ಹಿಂದೆ 22 ಕೋಟಿ ಇತ್ತು. ಆದ್ದರಿಂದ ಅದಕ್ಕೂ ಇದಕ್ಕೂ ಯಾವ ಸಂಬಂಧ ಕೂಡ ಇಲ್ಲ. ಆ ನಾರ್ಮ್ಸ್ ಪ್ರಕಾರ ರೂಲ್ಸ್ ಮಾಡಿ ಹೊಸ ಗವರ್ನಮೆಂಟ್ ಆರ್ಡರ್ ಇಷ್ಯು ಮಾಡಿ ತಕ್ಷಣ ಕೊಡುವುದಕ್ಕೆ ಸರ್ವ ಅಧಿಕಾರ ಈ ಸರ್ಕಾರಕ್ಕೆ ಇದೆ. ಆದರೆ ನಮಗೆ ಸಮಯ ಬೇಕು ಎನ್ನುವುದು ಕುಂಟು ನೆಪ. ಈ ಗವರ್ನಮೆಂಟ್ ಆರ್ಡರನ್ನು ಏನು ಇಷ್ಯು ಮಾಡಿದ್ದಾರೆ, ಅದನ್ನು ನೀವು ನೋಡಿಲ್ಲವೇನು? ನಿಮ್ಮ ಅಧಿಕಾರಿಗಲು ಹೋಗಿಲ್ವಾ

ಅಥವಾ ನೀವು ಹೈದರಾಬಾದ್‌ಗೆ ಎಷ್ಟು ಕೊಟ್ಟಿದ್ದಾರೆ ಎಂದು ಹೋಗಿದ್ದಾಗ ನೋಡಿಲ್ಲವಾ? ಇಷ್ಟೊಂದು ಅಕ್ಕಪಕ್ಕದಲ್ಲಿರತಕ್ಕಂಥವರು ಕೊಡಬಹುದು. ಬೀದರ್‌ಗೆ ಹತ್ತಿರ ಜಹೀರಾಬಾದ್ ಇದೆ. ಜನ ಏನನ್ನುತ್ತಾರೆ? ಅರೆ, ನಮ್ಮ ಜಹಿರಾಬಾದ್‌ನಲ್ಲಿ ಕೊಟ್ಟಿದ್ದಾರೆ, ಬೀದರ್‌ನಲ್ಲಿ ಇಲ್ಲ ಎಂದು ಹೇಳುತ್ತಾರೆ. ಸೇಡಮ್‌ನವರು ಏನು ಹೇಳುತ್ತಾರೆ? ತಾಂಡೂರಿನಲ್ಲಿ ಕೊಟ್ಟಿದ್ದಾರೆ, ಆದರೆ ಸೇಡಮ್‌ನಲ್ಲಿ ಇಲ್ಲ ಎಂದು ಹೇಳುತ್ತಾರೆ. ಯಾದ್ಗೀರ್‌ನವರು ಪಕ್ಕದಲ್ಲಿರುವ ಮೆಹಬೂಬ್ ಜಿಲ್ಲೆಯಲ್ಲಿ ಕೊಟ್ಟಿದ್ದಾರೆ, ಯಾದ್ಗೀರ್‌ನಲ್ಲಿ ಇಲ್ಲ ಎಂದು ಹೇಳುತ್ತಾರೆ. ಕೋಲಾರದ ಪಕ್ಕದಲ್ಲಿರತಕ್ಕಂಥಾದ್ದು ಚಿತ್ತೂರು. ಹೀಗೆ ಎಲ್ಲಾ ಕಡೆಯಲ್ಲೂ ಕೂಡ ಒಂದಕ್ಕೊಂದು ಹತ್ತಿರದಲ್ಲಿರತಕ್ಕಂಥ ಪ್ರದೇಶಗಳಲ್ಲಿ ಮತ್ತು ಸಾಯಿಲ್ ಕೂಡ ಸಿಮಿಲರ್ ಇರತಕ್ಕಂಥಾದ್ದು, ಅನೇಕ ಕಡೆ ಕ್ರಾಪ್ ಸಿಮಿಲರ್ ಇರತಕ್ಕಂಥಾದ್ದು, ಹವಾಮಾನ ಸಿಮಿಲರ್ ಇರತಕ್ಕಂಥಾದ್ದು, ಸೀಸನಲ್ ಕಂಡೀಷನ್ ಸೇಮ್ ಇರತಕ್ಕಂಥಾದ್ದು, ಇಷ್ಟೆಲ್ಲಾ ಇದ್ದರೂ ಕೂಡ ನಿಮ್ಮ ಗಮನ ಆ ಕಡೆಗೆ ಇಲ್ಲವೆಂದರೆ ನಾವು ಇದಕ್ಕೆ ಏನು ಹೇಳಬೇಕು? ಅಂದರೆ ನಿಮಗೆ ಕಾಳಜಿ ಇಲ್ಲವೆನ್ನಬೇಕಾಗುತ್ತದೆ. ಬಹಳ ಜೋರಾಗಿ ನೀವು ಮಾತನಾಡುತ್ತೀರಿ, ಬಹಳ ಜೋರಾಗಿ ಹೇಳಿಕೊಂಡು ಬಂದಿದ್ದೀರಿ. ಆದರೆ ಸಹಾಯ ಮಾಡತಕ್ಕಂಥ ಸಮಯ ಬಂದಾಗ ಅದಕ್ಕೆ ತಕ್ಕಂತೆ ನಡೆದುಕೊಳ್ಳುವ ಸ್ವಭಾವ ನೀವು ಮಾಡಿಕೊಂಡಿಲ್ಲ. ಏಕೆಂದರೆ ಸರ್ಕಾರಕ್ಕೆ ಡಿಫೆಂಡ್ ಮಾಡಬೇಕೆಂದು ಆ ರೀತಿ ಹೇಳುತ್ತಿದ್ದೀರಿ. ಆದ್ದರಿಂದ ದಯವಿಟ್ಟು ತತ್‌ಕ್ಷಣ ಇದಕ್ಕಿಂತ ಹೆಚ್ಚು ಪರಿಹಾರ ಕೊಡುತ್ತೇವೆ ಎಂದು ಹೇಳಬೇಕು. ಇಲ್ಲದಿದ್ದರೆ ಇಂಟರೀಮ್ ರಿಪೋರ್ಟ್ ತರಿಸುವ ಅವಶ್ಯಕತೆ ಇರಲಿಲ್ಲ. ಏಕೆ ಎರಡು ಜಿಲ್ಲೆಗಳಿಗೆ ಟೂರ್ ಮಾಡಿಕೊಂಡು 15 ಜನ ಇಲ್ಲಿಯ ಶಾಸಕರು ಮತ್ತು 5 ಮಂದಿ ಕೌನ್ಸಿಲ್ ಮೆಂಬರ್‌ಗಳು ಸೇರಿ ಒಟ್ಟು 20 ಜನ ಶಾಸಕರು ಹೋಗತಕ್ಕಂಥ ಅವಶ್ಯಕತೆ ಅವರಿಗೆ ಏನಿತ್ತು? ಅವಶ್ಯಕತೆ ಏನಿತ್ತು ಎಂದರೆ ತಾತ್ಕಾಲಿಕವಾಗಿ ಅವರಿಗೆ ಏನಾದರೂ ಮಾಡಿ ರಿಲೀಫ್ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಮಾಡಿದ್ದು. ಮತ್ತೆ ನೀವು ನಾಲ್ಕು ಕೋಟಿ ಈಗಾಗಲೇ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಟೈಮ್ ತೆಗೆದುಕೊಳ್ಳುತ್ತೀರಿ. ಅದಕ್ಕೆ ತಕ್ಷಣ ಎಲ್ಲಾ ರೈತರಿಗೆ ಕೊಡಬೇಕು. ಕೊಟ್ಟಿಲ್ಲ ಎಂದರೆ ನಾವು ಇಲ್ಲಿ ಧರಣವನ್ನು ಹೂಡುತ್ತೇವೆ. ನೀವು ಕೊಡುವವರೆಗೆ, ನೀವು ಹೇಳುವವರೆಗೆ, ನಾವು ನಮ್ಮ ಧರಣವನ್ನು ಮುಂದುವರೆಸಬೇಕಾಗುತ್ತದೆ. ಏಕೆಂದರೆ ನೀವು ಎಲ್ಲಿಯಾದರೂ ಹೀಗೆ ಕೊಟ್ಟಿದ್ದಾರಾ ಎಂದು ಕೇಳಿದಿರಿ. ನಾನು ಗವರ್ನಮೆಂಟ್ ಆರ್ಡರನ್ನು ಕೂಡ ಕೋಟ್ ಮಾಡಿದ್ದೇನೆ. ಅದೇರೀತಿಯಾಗಿ ಮಹಾರಾಷ್ಟ್ರದ್ದು ಗವರ್ನಮೆಂಟ್ ಆರ್ಡರ್ ಇದೆ. ಇದೆಲ್ಲಾ ನಿಮ್ಮ ಮುಂದೆ ಇದ್ದರೂ ಕೂಡ ಇವತ್ತು ನೀವು ತಾತ್ಕಲಿಕವಾಗಿ ಪರಿಹಾರ ಕೊಡತಕ್ಕಂಥಾದ್ದು ಮಾಡುತ್ತಿಲ್ಲ ಎಂದರೆ, ಇದು ಈ ಒಂದು ವಿಷಯವನ್ನು ಮುಚ್ಚಬೇಕು ಎನ್ನುವ ತಮ್ಮ ಪ್ರಯತ್ನ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ಅದಕ್ಕಾಗಿ ಇದನ್ನು ದಯಮಾಡಿ ಸ್ಪಷ್ಟವಾಗಿ ಹೇಳಿ. ಇಲ್ಲದಿದ್ದರೆ

ನಮಗೆ ಇದು ಅನಿವಾರ್ಯವಾಗುತ್ತದೆ. ಒಂದು ವಿಷಯದಲ್ಲಿ ಅವರು ಹೇಳಿದರು ನಮ್ಮ ಇಂಟರೀಮ್ ರಿಪೋರ್ಟ್ ಬರುವವರೆಗೆ ಕಾಯಬೇಕು ಎಂದು. ರೈತರಿಗೆ ಪರಿಹಾರ ಕೊಡುವುದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ, ಎಂದು ಹೇಳುತ್ತಿದ್ದೀರಿ. ಒಂದೊಂದು ಲಕ್ಷ ಪರಿಹಾರ ಏಕೆ ಕೊಟ್ಟಿಲ್ಲ ಎಂದರೆ ಇಂಟರೀಮ್ ರಿಪೋರ್ಟ ಬಂದಿದ್ದಿಲ್ಲ ಅದಕ್ಕೆ ಕೊಟ್ಟಿಲ್ಲ ಎಂದು ಹೇಳಿದರು. ಈಗ ಇಂಟರೀಮ್ ರಿಪೋರ್ಟ್ ಬಂದಿದೆ, ಇದಕ್ಕೆ ಕೊಡುತ್ತೇವೆ ಎಂದು ಹೇಳುತ್ತೀರಿ. ಇಂಟರೀಮ್ ರಿಪೋರ್ಟ್‌ನಲ್ಲಿ ಪರ್ ಎಕರೆ ಐದುನೂರು ರೂಪಾಯಿ ತಾತ್ಕಾಲಿಕವಾಗಿ ಕೊಡಿ ಎಂದು ಬಂದಿದೆ. ಮ್ಯಾಕ್ಸಿಮಮ್ ಐದು ಸಾವಿರವರೆಗೆ ಯಾರ್ಯಾರು ಈ ಹಾನಿಯಿಂದ ಒಳಗಾಗಿದ್ದಾರೆ ಅವರಿಗೆ ಕೊಡಿ ಎಂದು ಅವರು ಕೇಳುತ್ತಾರೆ. ಅದಕ್ಕೂ ಕೂಡ ತಾವು ಏನೂ ಉತ್ತರ ಹೇಳಲಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಸಾರಾಸಗಟಾಗಿ ಎಲ್ಲರಿಗೂ ಕೊಡಿ ಎಂದು ಹೇಳುತ್ತಿಲ್ಲ. ಇದಕ್ಕೆ ತಾವು ತಮ್ಮ ವರದಿಯನ್ನು ತರಿಸಿಕೊಂಡು ಮತ್ತು ಇವತ್ತು ಇಂಟರೀಮ್ ರಿಪೋರ್ಟ್ ಏನಿದೆ ಆ ರಿಪೋರ್ಟ್ ಆಧಾರದ ಮೇಲೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಆದ್ದರಿಂದ ದಯವಿಟ್ಟು ಇದನ್ನು ಅವರು ಒಪ್ಪಿಕೊಳ್ಳಬೇಕು ಮತ್ತು ತಕ್ಷಣ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಇದನ್ನು ಮಾಡದೇ ಹೋದರೆ, ಇದಕ್ಕೆ ಸ್ಪಂದಿಸದೇ ಹೋದರೆ ಖಂಡಿತವಾಗಿ ನಮಗೆ ಬೇರೆ ದಾರಿ ಇಲ್ಲ. ಈ ಬಾವಿಯೊಳಗೆ ಬೀಳತಕ್ಕಂಥಾದ್ದು ಒಂದೇ ದಾರಿ....

ಅಧ್ಯಕ್ಷರು: ಯೋಚನೆ ಮಾಡೋಣ ಇರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯೋಚನೆ ಇಲ್ಲ. ಇದು ಮೂರನೇ ಸಲ ಅಲ್ಲ, ನಾಲ್ಕನೆ ಸಲ ಕೇಳುತ್ತಿರುವುದು. ಇವರು ಒಂದು ಸಾರಿ ಆಲೂಗಡ್ಡೆ ಕೆಟ್ಟುಹೋದಾಗ ಇಲ್ಲಿ ತಂದು ಸುರಿದರು....

ಅಧ್ಯಕ್ಷರು: ಇಲ್ಲಲ್ಲ. ಅದು ಮಿಸ್‌ಕೋಟ್. .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿಧಾನಸೌಧದ ಮುಂದೆ ದೊಡ್ಡ ಹೋರಾಟ ಮಾಡಿದರು. ಈಗ ಹೋರಾಟ ಎಲ್ಲಿ ಹೋಯಿತು?

ಶ್ರೀ ವಾಟಾಳ್ ನಾಗರಾಜ್: ಆ ಬೈರೇಗೌಡರು ಅಲ್ಲ ಇವರು. ಆ ಬೈರೇಗೌಡರು ಈ ಕಡೆಗೆ ಇದ್ದರು. ಈಗ ಅವರು ಆ ಕಡೆಗೆ ಹೋಗಿದ್ದಾರೆ. ನಿಮ್ಮ ಸರ್ಕಾರ ಇದ್ದಾಗ ಅವರು ಈ ಕಡೆಗೆ ಇದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮನ್ನು ಬಯ್ಯುವುದಕ್ಕೆ ಮಾತ್ರ ಅದು; ಮಾಡುವುದಕ್ಕೆ ಅಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಸಭಾಧ್ಯಕ್ಷರೇ, ಇದು ಹೇಗೆ ಎಂದರೆ

ಬೈರೇಗೌಡರು ನೋಡುವಾಗ ಒಂದು ಕನ್ನಡಕ ಮತ್ತು ಓದುವಾಗ ಒಂದು ಕನ್ನಡಕ ಹೀಗೆ ಎರಡು ಕನ್ನಡಕಗಳನ್ನು ಉಪಯೋಗಿಸುತ್ತಾರೆ. ಹಾಗೆ ಇಲ್ಲಿರುವಾಗ ಒಂದು ತರಹ ಕನ್ನಡಕ ಮತ್ತು ಅಲ್ಲಿರುವಾಗ ಒಂದು ತರಹ ಕನ್ನಡಕ....

ಶ್ರೀ ಬೈರೇಗೌಡ: ಅಲ್ಲಿ ಇದ್ದಾಗಲೂ ಎರಡು ಕನ್ನಡಕಗಳು ಇದ್ದವು. ಇಲ್ಲಿ ಇರುವಾಗಲೂ ಎರಡು ಕನ್ನಡಕಗಳು ಇವೆ.

ಶ್ರೀ ವಾಟಾಳ್ ನಾಗರಾಜ್: ತಾವು ಹಿಂದಿನ ಕಡತ ತರಿಸಿ ನೋಡಿ. ಸ್ವಲ್ಪ ಹೆಚ್ಚು ಕಡಿಮೆ ಒಂದು ದಿನದಲ್ಲಿ ಕನಿಷ್ಟ ಒಂದು ನೂರು ಸಾರಿ ಸರ್ಕಾರದ ವಿರುದ್ಧ ಹೇಳುತ್ತಿದ್ದರು. ಅಂದರೆ ಗರಿಷ್ಟ ಎಷ್ಟು ಇರಬಹುದೆಂಬುದನ್ನು ತಾವೇ ಲೆಕ್ಕ ಹಾಕಿ ಹೇಳಿ. ಅಂದರೆ ಎಷ್ಟು ಕಾಳಜಿ ವಹಿಸಿ ಪ್ರತಿಯೊಂದು ವಿಚಾರಕ್ಕೂ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದವರು ಏಕೆ ಹೀಗಾದರು? ನೀವು ಹೀಗೆ ಆಗುತ್ತೀರಿ ಎಂದು ನಾನು ಅಂದುಕೊಂಡಿರಲಿಲ್ಲ. ಇದನ್ನು ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ. ಅದೇನು ಹೀಗೆ ಆಗಿಬಿಟ್ಟಿರಿ ನೀವು?

ಅಧ್ಯಕರು: ಒಂದೇ ಒಂದು ಚಿಕ್ಕ ಅನೌನ್ಸ್‌ಮೆಂಟ್ ಇದೆ. ಅದನ್ನು ಓದುತ್ತೇನೆ.

ANNOUNCEMENT

MR. SPEAKER: I welcome Shir. H.S.Pandit, Chairman and Members of the Estimates Committee of Bihar Vidhana Sabha, who are witnessing the proceeding from the Speaker's Gallery.

SRI C. BYREGOWDA: My friend Mr. Kharge...

ಶ್ರೀ ವಾಟಾಳ್ ನಾಗರಾಜ್: ಏಕೆ, ಕನ್ನಡದಲ್ಲಿಯೇ ಹೇಳಿ...

ಅಧ್ಯಕ್ಷರು: ಅವರು ಹೊರ ರಾಜ್ಯದಿಂದ ಬಂದಿದ್ದಾರೆ, ನಮ್ಮ ಕಲಾಪಗಳನ್ನು ವೀಕ್ಷಣೆ ಮಾಡುತ್ತಿದ್ದಾರೆ. ಒಂದು ಕ್ಷಣ ಕಾಲ ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ಅವರಿಗೂ ಗೊತ್ತಾಗಲಿ ಎನ್ನುವ ಕಾರಣಕ್ಕಾಗಿ ಇಂಗ್ಲೀಷ್‌ನಲ್ಲಿ ಹೇಳುತ್ತಾರೆ. ಅವರಿಗೆ ಹಿಂದಿ ಬರುವ ಹಾಗಿದ್ದರೆ, ಹಿಂದಿಯಲ್ಲಿ ಹೇಳಿ ಎಂದು ಹೇಳಬಹುದಿತ್ತು. ಅವರಿಗೆ ಹಿಂದಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಯಾರೋ ಬಂದಿದ್ದಾರೆ, ಅವರಿಗೆ ಗೊತ್ತಾಗಲಿ ಎಂದು ಇಂಗ್ಲೀಷ್, ಹಿಂದಿಯಲ್ಲಿ ಮಾತನಾಡುವುದು ಮತ್ತು ನಮ್ಮ ಭಾಷೆ ಬದಲಾವಣೆಯಾಗುವುದು ಬೇಡ. ನಾನು ಹೇಳುತ್ತೇನೆ, ನಮ್ಮ ಸದನಕ್ಕೆ, ನಮ್ಮ ರಾಜ್ಯಕ್ಕೆ

ಗೊತ್ತಾದರೆ ಸಾಕು. ಈಗ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಶ್ಚಿಮ ಬಂಗಾಳದಲ್ಲಿ ವಿಯೆಟ್ನಾಮ್ ಸಮ್ಮೇಳನವಾಯಿತು. ದೇಶ ವಿದೇಶಗಳಿಂದ ಎಲ್ಲಾ ಬಂದಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಬಂಗಾಳಿ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು.

ಅಧ್ಯಕ್ಷರು: ವಿಯೆಟ್ನಾಮ್ ಭಾಷೆ ಬರದೇ ಹೋದರೆ, ಇನ್ನೇನು ಮಾಡುತ್ತಾರೆ? ಪಶ್ಚಿಮ ಬಂಗಾಳದ ಭಾಷೆಯಲ್ಲಿಯೇ ಮಾತನಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಆ ತರಹ ಬದಲಾವಣೆ ಏನಲ್ಲ. ತಮಗೆ ಸೇರಿದ್ದು, ತಮ್ಮ ತೀರ್ಪು.

ಅಧ್ಯಕ್ಷರು: ಆಯಿತು. ಬೇರೆ ಯಾರಿಗೂ ನಮ್ಮ ವಿಚಾರ ಗೊತ್ತಾಗುವುದು ಬೇಡ, ಕನ್ನಡದಲ್ಲಿಯೇ ಹೇಳಿ.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದಂಥ ಖರ್ಗೆಯವರು ನನ್ನನ್ನು ಔಟ್ ಆಫ್ ಕಾಂಟೆಸ್ಟ್ ಕೋಟ್ ಮಾಡುತ್ತಿದ್ದಾರೆ. ವಿಧಾನ ಸೌಧದ ಮುಂದೆ ಆಲೂಗಡ್ಡೆ, ತರಕಾರಿ ನಾನು ತಂದು ಎಸೆದಿರುವಂತಾದ್ದು ನಿಜ. ಏಕೆಂದರೆ, ಅವತ್ತು ಇಡೀ ದೇಶಾದ್ಯಂತ ಲಾರಿ ಮುಷ್ಕರ ಇತ್ತು. ಲಾರಿ ಮುಷ್ಕರ ಇದ್ದುದ್ದರಿಂದ, ರೈತರು ಬೆಳೆದಂಥ ಹಣ್ಣು, ತರಕಾರಿ ಮತ್ತೊಂದು ಏನಿದೆ, ಅದು ಎಲ್ಲಿಗೂ ಸಾಗಾಣಿಕೆಯಾಗಿರಲಿಲ್ಲ. ಅದೆಲ್ಲವೂ ತೋಟದಲ್ಲಿಯೇ ಕೊಳೆಯುತ್ತಾ ಇತ್ತು. ಆ ಮುಷ್ಕರವನ್ನು ಆದಷ್ಟು ಜಾಗ್ರತೆ ಬಗೆಹರಿಸಬೇಕೆನ್ನುವಂತಾದ್ದು, ಸರ್ಕಾರದ ಮೇಲೆ ಒತ್ತಾಯ ತರುವುದಕ್ಕೆ ಅವತ್ತಿನ ದಿವಸ ಮಾಡಿರತಕ್ಕ ಕೆಲಸ. ಮಾನ್ಯ ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ. ಮಂತ್ರಿಯಾದ ಮೇಲೆ ಈ ಭೈರೇಗೌಡ ಬೇರೆ, ಆ ಭೈರೇಗೌಡ ಅಲ್ಲ ಎಂದು. ಅಲ್ಲಿ ಕುಳಿತಿದ್ದ ಭೈರೇಗೌಡನೇ, ಈ ಭೈರೇಗೌಡನೂ.

ಶ್ರೀ ವಾಟಾಳ್ ನಾಗರಾಜ್: ನಾನು ಬೇಕಾದರೆ ಅದನ್ನು ಸಮರ್ಥನೆ ಮಾಡುತ್ತೇನೆ. ನೀವು ಆ ಭೈರೇಗೌಡರು ಅಲ್ಲ. ಅಧ್ಯಕ್ಷರು ನನಗೆ ಅವಕಾಶ ಕೊಡಲಿ, 10 ನಿಮಿಷದಲ್ಲಿ ನಿಮ್ಮ ಚಿತ್ರವನ್ನೇ ಇಲ್ಲಿ ಇಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರು ಏನು ಹೇಳುತ್ತಿದ್ದಾರೆಂದರೆ, ನೀವು ಇಲ್ಲಿದ್ದಾಗ ಹುಲಿಯಾಗಿದ್ದಿರಿ, ಅಲ್ಲಿಗೆ ಹೋದಮೇಲೆ ಇಲಿಯಾಗಿದ್ದೀರಿ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅವರು ಅಬಕಾರಿ ಇಲಾಖೆಯ ಬಗ್ಗೆ ಎಷ್ಟು ಸುದೀರ್ಘವಾದ ಭಾಷಣ ಮಾಡುತ್ತಿದ್ದರು. ಇವತ್ತು ಏಕೆ ಈ ರೀತಿ

ಮಾತನಾಡುತ್ತಿದ್ದೀರಿ ನೀವು.

(ಗೊಂದಲ)

ಶ್ರೀ ಸಿ.ಭೈರೇಗೌಡ: ಅದೇ ಭೇರೇಗೌಡ ಎನ್ನುವುದಕ್ಕೆ ಒಂದು ಉದಾಹರಣೆ ಕೂಡ ಇದೆ. ಕಳೆದ ಬಾರಿ ಆಲೂಗಡ್ಡೆಯನ್ನು ಕೊಂಡುಕೊಳ್ಳುವವರು ಇರಲಿಲ್ಲ. ನಾನೇ ಯಶವಂತಪುರ ಮಾರುಕಟ್ಟೆಗೆ ಹೋಗಿ ಬಂದೆ. ಆವತ್ತಿನ ದಿವಸ ಒಂದು ಕೆ.ಜಿ.ಯನ್ನು ಒಂದು ನಯಾಪೈಸೆಗೂ ಕೊಂಡುಕೊಳ್ಳುವವರು ಇರಲಿಲ್ಲ. ಆ ತಕ್ಷಣವೇ ಆಲೂಗೆಡ್ಡೆಯನ್ನು ಈರುಳ್ಳಿಯನ್ನು ಸರ್ಕಾರದ ಸಂಸ್ಥೆಗಳ ಮೂಲಕ ಕೊಂಡುಕೊಳ್ಳತಕ್ಕ ವ್ಯವಸ್ಥೆಯನ್ನು ಕೂಡ ನಾವು ಮಾಡಿಸಿದ್ದೇವೆ. ಅದೇ ಭೈರೇಗೌಡನೇ ಈ ವ್ಯವಸ್ಥೆಯನ್ನೂ ಮಾಡಿಸಿರತಕ್ಕಂಥಾದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಎಲ್ಲಿ ಹೋಯಿತು ಆ ಭೈರೇಗೌಡರ ಕಾಳಜಿ?

ಶ್ರೀ ಸಿ.ಭೈರೇಗೌಡ: ಅಡಿಕೆ ಬೆಲೆ ಕುಸಿದು ಬಿದ್ದುಹೋಗಿತ್ತು. ಅವರೇ ನನಗೆ ಪತ್ರವನ್ನೂ ಬರೆದಿದ್ದರು ಮತ್ತು ಖುದ್ದಾಗಿ ಬಂದು ಮಾತನಾಡಿಯೂ ಇದ್ದರು. ತತ್‌ಕ್ಷಣ ಅಡಿಕೆಯನ್ನು ತಿಪಟೂರು ಮಾರ್ಕೆಟ್‌ನಲ್ಲಿ ಮತ್ತು ಬೇರೆ ಬೇರೆ ಮಾರ್ಕೆಟ್‌ಗಳಲ್ಲಿ ಸರ್ಕಾರದ ಮೂಲಕ ಕೊಂಡುಕೊಳ್ಳತಕ್ಕ ವ್ಯವಸ್ಥೆಯನ್ನು ಕೂಡ, ಯಾವ ಭೈರೇಗೌಡ ವಿಧಾನಸೌಧದ ಮುಂದೆ ತರಕಾರಿ ತಂದು ಕಿತ್ತುಹಾಕಿದ್ದಾನೋ, ಅದೇ ಭೈರೇಗೌಡನೇ ಈ ವ್ಯವಸ್ಥೆಯನ್ನೂ ಮಾಡಿರತಕ್ಕಂತಾದ್ದು ಎನ್ನುವುದಕ್ಕೆ ಆಧಾರಗಳು ಇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಆಧಾರ ಇದೆ ಅವರು ಹೇಳಿಕೊಂಡಿದ್ದಾರೆ. ತಮ್ಮ ವಾದವನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ನಾನು ಕೇಳುತ್ತೇನೆ, ಒಂದು ಹೆಕ್ಟೇರ್‌ಗೆ 500 ರೂಪಾಯಿ ತಾವು ಪ್ರಕಟ ಮಾಡಿದ್ದೀರಿ. ಆದರೆ ಪಕ್ಕದಲ್ಲಿರತಕ್ಕ ರಾಜ್ಯಗಳು 1000, 1200, 2000 ರೂಪಾಯಿ ಮಾಡಿರುವಾಗ, ನೀವು ಏಕೆ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ಈ ಮಾತನ್ನು ಭೈರೇಗೌಡರು ಕ್ಯಾಬಿನೆಟ್‌ನಲ್ಲಿ ಇಟ್ಟು ಆ ಸುತ್ತೋಲೆಯನ್ನು ಅಮೆಂಡ್‌ಮೆಂಟ್ ಮಾಡುವುದನ್ನು ಏಕೆ ಮಾಡಲಿಲ್ಲ? ಅದಕ್ಕೇನೂ ಕಾಳಜಿ ಇಲ್ಲವೇನು? ಅದು ನಿಮ್ಮ ಸಂಯುಕ್ತ ರಂಗ ಸರ್ಕಾರ ಮಾಡಿದ್ದು...

ಶ್ರೀ ಬಿ.ಸೋಮಶೇಖರ್: ಕೇಂದ್ರ ಸರ್ಕಾದ ನಿಯಮದ ಪ್ರಕಾರ ಒಂದು ಎಕರೆಗೆ 500 ರೂಪಾಯಿ ಕೊಡಬೇಕೆಂದು ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲಾ ಸ್ವಾಮಿ, ಅದು ನಮಗೂ ಗೊತ್ತು. ನಾನು

ಆ ಇಲಾಖೆಯನ್ನು 6 ವರ್ಷ ನೋಡಿದ್ದೇನೆ. ನೀವು ಯಾವಾಗ ಬೇಕಾದರೂ ತಿದ್ದುಪಡಿ ಮಾಡಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಆ ನಿಯಮವನ್ನು ಬದಲಾಯಿಸಲಿ. ನಿಯಮ ಬದಲಾಯಿಸಿ, ಕರ್ನಾಟಕ ಸರ್ಕಾರ ಆದರ್ಶವಾಗಲಿ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಆದರ್ಶವಾಗಲಿ; ಯಾರು ಬೇಡ ಎಂದು ಹೇಳುತ್ತಾರೆ.

SRI M.MALLIKARJUN KHARGE: It is not a mandatory provision. It is a Circular. It can be amended by the Government at any time.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ನಿಯಮಾವಳಿಗಳನ್ನು ಬದಲಾವಣೆ ಮಾಡಿ. ಕೇಂದ್ರ ಸರ್ಕಾರದ ನಿಯಮ ಎಂದು ನೀವು ಹೇಳಿದರೆ ಆಗುವುದಿಲ್ಲ. ರಾಜ್ಯ ಸರ್ಕಾರ ಈ ನಿಯಮಾವಳಿಗಳನ್ನು ಬದಲಾವಣೆ ಮಾಡಬಹುದು.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ಕೇಂದ್ರಸರ್ಕಾರಕ್ಕೆ ಒಂದು ಸಾವಿರ ರೂಪಾಯಿ ಕೊಡಬೇಕೆಂದು ಮನವಿ ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮನವಿ ಮಾಡುವುದು ಬೇರೆ, ಇಲ್ಲಿ ಕೊಡುವುದು ಬೇರೆ. 400 ಕೋಟಿ ಎಂದು ನೀವು ಹೇಳಿದರೆ, ಅವರು 4 ಕೋಟಿ ಕೊಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಾವಿರ ರೂಪಾಯಿ ಜಾಸ್ತಿ ಕೊಡುವುದಕ್ಕೆ ಕೇಂದ್ರದ ಅನುಮತಿ ಏನೂ ಬೇಕಾಗಿಲ್ಲ. ಮಾನವೀಯತೆ ದೃಷ್ಟಿಯಿಂದ ನೀವು ಕೊಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಯಮಾವಳಿಗಳನ್ನು ಬದಲಾವಣೆ ಮಾಡದೇ, ಹಣ ಕೊಡಲಿಕ್ಕೆ ಬರುವುದಿಲ್ಲ. ಮೊದಲು ನಿಯಮಾವಳಿ ಬದಲಾವಣೆ ಮಾಡುವುದಕ್ಕೆ ನೀವು ಕ್ರಮ ಕೈಗೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ನೀವು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ.

ಶ್ರೀ ಬಿ.ಸೋಮಶೇಖರ್: 300 ಕೋಟಿ ರೂಪಾಯಿಗಳನ್ನು ಇದೊಂದೇ ಕಾರ್ಯಕ್ಕೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಪರಿಹಾರ ಕೊಡತಕ್ಕ ನಿಯಮಾವಳಿಗಳನ್ನು ಬದಲಾವಣೆ

ಮಾಡದೇ ಹೆಚ್ಚಿನ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ, ನೀವು ತಿದ್ದುಪಡಿ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ಸಿ.ಭೈರೇಗೌಡ: ಕಲಾಮಿಟಿ ರಿಲೀಫ್ ಫಂಡ್ ಪ್ರಕಾರ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಬದಲಾವಣೆ ಮಾಡಿಕೊಳ್ಳುವುದಕ್ಕೆ ಅವಕಾಶವಿದ್ದರೆ, ಅದನ್ನೇನೂ ಬದಲಾವಣೆ ಮಾಡತಕ್ಕಂತಾದ್ದು ದೊಡ್ಡ ವಿಷಯ ಅಲ್ಲ. ಆದರೆ, ಈಗ ಹಣ ಬೇಕು. 300 ಕೋಟಿ ರೂಪಾಯಿ ಹಣ ಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೊಡಲಾಗದ್ದಕ್ಕೆ ಯಾವುದೋ ಒಂದು ಕುಂಟು ನೆಪ ಹೇಳುತ್ತಾರೆ. ಎಲ್ಲಾ ಲೆಕ್ಕ ಹಾಕಿದರೂ ಕೂಡ, ನಿಮ್ಮ ಪ್ರಕಾರ 200 ಕೋಟಿ ಮೇಲೆ ಮಾಡಿದಿರಿ. ಅಷ್ಟು ಆಗುವುದಿಲ್ಲ, 165- 170 ಕೋಟಿ ರೂಪಾಯಿಗಳು ಆಗಬಹುದು. ಇದನ್ನು ಕೂಲಂಕುಷವಾಗಿ ನೋಡಿದರೆ, ಅದರಲ್ಲೂ ಕಡಿಮೆಯಾಗುತ್ತದೆ. ಏಕೆಂದರೆ, ಈ ಎರಡು ಜಿಲ್ಲೆಯಲ್ಲಿ ಈ ಸಮಸ್ಯೆ ಇದೆಯೆಂದು ನಾನು ಹೇಳುತ್ತಾ ಇಲ್ಲ. ರಾಯಚೂರು ಇರಬಹುದು ಶಿವಮೊಗ್ಗ ಇರಬಹುದು, ಕೋಲಾರವೂ ಇರಬಹುದು. ಆದರೆ, ನೋಡಿ, ನೋಡಿ ಕೊಡಬೇಕಾಗುತ್ತದೆ. ಸಾರಾಸಗಟಾಗಿ ಯಾರಿಗೂ ಕೂಡ ದಾನ ಕೊಡುವುದಕ್ಕಾಗುವುದಿಲ್ಲ. ಮಧ್ಯಂತರ ವರದಿ ಪ್ರಕಾರವಾದರೂ ಕೊಡಿ.

SRI M.MALLIKARJUN KHARGE: Then why have you called for the Interim Report when you are not going to implement it? We asked him to give certain relief. He said unless that Interim Report comes, we are not going to announce anything. Now when the Interim Report has come, why are you not going to implement it?

SRI C.BYREGOWDA: Sir, the Cabinet has to consider it. I alone not the Government. The Cabinet has to consider. I am going before the Cabinet.

SRI M.MALLIKARJUN KHARGE: When the farmers are dying, based on this report you have to give. ಈ ರೀತಿಯಾಗಿ ಮೋಸ ಮಾಡತಕ್ಕಂಥಾದ್ದು ಸರಿಯಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳು ಜಿಂದಾಲ್ ಆಸ್ಪತ್ರೆ

ಸೇರಿದ್ದರು, ಅಲ್ಲಿಯೇ ಕ್ಯಾಬಿನೆಟ್ ಮೀಟಿಂಗ್ ಸೇರಿ ತೀರ್ಮಾನ ಮಾಡಬಹುದಿತ್ತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವತ್ತು ಕ್ಯಾಂಡಿಡೇಟ್ ಆಯ್ಕೆ ಮಾಡುವುದು ಅರ್ಜೆಂಟ್ ಇತ್ತು. ಅದಕ್ಕಾಗಿ ಜಿಂದಾಲ್ ಆಸ್ಪತ್ರೆಯಲ್ಲಿ ಮೀಟಿಂಗ್ ಮಾಡಿದರು, ಆದರೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಅಧ್ಯಕ್ಷರೇ, ಇಲ್ಲಿ ತುಂಬಾ ಸ್ಪಷ್ಟವಾಗಿ ರೈತರಿಗೆ ತೊಂದರೆಯಾಗಿರುವಂಥ ಅಂಶವನ್ನು ಸರ್ಕಾರ ಕೂಡ ಒಪ್ಪಿಕೊಳ್ಳುತ್ತದೆ. ಅವರು ತೊಂದರೆಯಲ್ಲಿ ಇದ್ದಾರೆಂದು ಈಗಾಗಲೇ ಸದನದ ಸಮಿತಿ ವರದಿ ಕೂಡ ಸ್ಪಷ್ಟವಾಗಿ ಬಂದಿದೆ. ಸಚಿವರು ಹೇಳಿದರು, ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಇದೆ, ಬಿಜೆಪಿನವರು ಪ್ರಯತ್ನ ಮಾಡಿ, ಅಲ್ಲಿಂದ ಕೊಡಿಸಲಿ ಎಂದೂ ಹೇಳಿದರು. ಒಟ್ಟಾರೆ ಇವತ್ತು ರಾಜ್ಯದಲ್ಲಿ ರೈತ ತೊಂದರೆಯಲ್ಲಿದ್ದಾನೆ ಎನ್ನುವ ಅಂಶವಂತೂ ತೀರ್ಮಾನವಾಗಿದೆ. ತೀರ್ಮಾನವಾಗಿರುವಂಥ ಈ ಸಂದರ್ಭದಲ್ಲಿ ಪರಿಹಾರ ಮಾಡಬೇಕಾದವರು ಯಾರು, ಇದು ಪ್ರಶ್ನೆ ಬರುತ್ತದೆ. ಕೇಂದ್ರ ಸರ್ಕಾರಕ್ಕೆ ಹೋಗಬೇಕೇ, ಹೋಗಬೇಕು ಎನ್ನುವ ಹಾಗಿದ್ದರೆ ತೀರ್ಮಾನವನ್ನು ಇವತ್ತೇ ಮಾಡಿ. ಹೋಗೋಣ, ಬಿಜೆಪಿಯಿಂದ ನಾವು ತಯಾರಿದ್ದೇವೆ. ಎಲ್ಲಾ ಪಕ್ಷಗಳ ವತಿಯಿಂದ ಇವತ್ತೇ ಎಲ್ಲಾ ಕೆಲಸ ನಿಲ್ಲಿಸಿ ಅಲ್ಲಿಗೆ ಹೋಗೋಣ, ಎಷ್ಟು ಹಣ ಬೇಕೋ ಆ ದಿಕ್ಕಿನಲ್ಲಿ ಪ್ರಯತ್ನಪಡೋಣ. ಕೇಂದ್ರಕ್ಕೆ ಬಿಜೆಪಿಯವರು ಹೇಳಬೇಕು ಎಂದು ಹೇಳಿಕೊಳ್ಳುವ ಮೂಲಕ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎರಡನೆಯದು, ಸ್ಪಷ್ಟವಾಗಿ ಹೇಳುತ್ತಿದ್ದಾರೆ ಹತ್ತಿರ ಹತ್ತಿರ 300 ಕೋಟಿ ಬೇಕು ಎಂದು. ಇವತ್ತು ಆಸ್ಪತ್ರೆಯೆಲ್ಲಾ ಹೆಣವಾಗುವ ಸಂದರ್ಭ ಬಂದುಹೋಗಿದೆ. ಡಾಕ್ಟರು ಹೇಳಿದ್ದಾರೆ, ತಕ್ಷಣ ಆಪರೇಷನ್ ಮಾಡಬೇಕು, ಇಲ್ಲದಿದ್ದರೆ ಈ ಕೇಸು ಸತ್ತುಹೋಗಿಬಿಡುತ್ತದೆ ಎಂದು. ಇನ್ನೆಲ್ಲಿಂದಲೋ ಹಣ ತಂದಾದಮೇಲೆ ನೋಡಬೇಕು ಅಂದರೆ ಬಡತನದಲ್ಲಿರವಂತಹ ಕುಟುಂಬವಲ್ಲ ಸರ್ಕಾರವೆಂದರೆ. ನೀವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಹಣ ತರುವ ಹೊತ್ತಿಗೆ ಆ ಪೇಷೆಂಟ್ ಸತ್ತುಹೋಗುತ್ತಾನೆ. 300 ಕೋಟಿ ಬೇಕು ಎಂದು ಹೇಳುತ್ತಾ ನೀವು ಬಿಡುಗಡೆ ಮಾಡಿರುವುದು ನಾಲ್ಕೂವರೆ ಕೋಟಿ. ಇಷ್ಟು ಹಣದಿಂದ ರೈತರಿಗೆ ನ್ಯಾಯ ದೊರಕಿಸಿಕೊಟ್ಟಹಾಗೆ ಆಗುತ್ತದೆಯೇ ಅಧ್ಯಕ್ಷರೇ, ಇದನ್ನು ನಾನು ಕೇಳಬಯಸುತ್ತೇನೆ. ಆ ನಾಲ್ಕೂವರೆ ಕೋಟಿಯಲ್ಲೂ ಎಷ್ಟೆಷ್ಟು ಹಣ ಯಾರಿಗೆ ಮುಟ್ಟಿದೆಯೋ ಗೊತ್ತಿಲ್ಲ. ಇದು ಆಗಿ ಎಷ್ಟು ಸಮಯ ಆಯಿತು? ಇದು ಚುರುವಟಿಕೆಯುಳ್ಳ ಸರ್ಕಾರ ಆಗಿದ್ದರೆ 300 ಕೋಟಿ ಬೇಕೆಂದು ಯಾವತ್ತು ಇವರು ತೀರ್ಮಾನ ಮಾಡಿದ್ದರೆ ತಕ್ಷಣ ಕ್ಯಾಬಿನೆಟ್ ಕರೆಯಬೇಕಾಗಿತ್ತು, ಇವತ್ತು ಹೇಳುತ್ತಿದ್ದಾರೆ, ಸದನಸಮಿತಿ ವರದಿ ಸಭೆ ಮುಂದಿಡುತ್ತೇವೆ ತೀರ್ಮಾನ ಮಾಡಿ ಅನಂತರ ಕೊಡುತ್ತೇವೆ ಎಂದು. ಇನ್ನೊಂದು ಕಡೆ ಸ್ಪಷ್ಟವಾಗಿ ಹೇಳಿದರು: ನಿಯಮಾವಳಿ ಬದಲಾಯಿಸಬೇಕು, ಅದಕ್ಕೆ ನಮಗೆ ಆಸೆ ಇದೆ ಆದರೆ ಹಣ ಇಲ್ಲ ಎಂದು. ಅಂದರೆ ಹಣ ಇಲ್ಲದ್ದರಿಂದ ನಿಯಮಾವಳಿ

ಬದಲಾಯಿಸುವುದೆಂದು ಒಪ್ಪಿಕೊಂಡ ಹಾಗಾಯಿತು. ಇವತ್ತು ಎಷ್ಟೇ ಚರ್ಚೆ ಮಾಡಿದರೂ ಇವರು ದಿವಾಳಿಯಾಗಿರುವ ಸರ್ಕಾರ ಎಂದು ಒಪ್ಪಿಕೊಳ್ಳಲು ತಯಾರಿಲ್ಲ. ಹೋಗಲಿ, ರೈತರ ಸಮಸ್ಯೆ ಪರಿಹರಿಸಬೇಕೆಂಬ ಆಸಕ್ತಿಯೂ ಇಲ್ಲ. ಕಳಕಳಿಯಿಲ್ಲ. ಇವರದೇ ಬಡಿದಾಟ, ಗುಂಪುಗಾರಿಕೆ, ವಿಧಾನಪರಿಷತ್ತಿಗೆ ನನ್ನ ಕಡೆಯವರನ್ನು ಮಾಡಬೇಕೋ ನಿನ್ನ ಕಡೆಯವರನ್ನು ಮಾಡಬೇಕೋ ಆ ಜಾತಿಯವರನ್ನು ಮಾಡಬೇಕೋ ಈ ಜಾತಿಯವರನ್ನು ಮಾಡಬೇಕೋ - ಈ ಗಲಾಟೆಯಲ್ಲಿ ಸಾಯುತ್ತಿದ್ದಾರೆ.

ಶ್ರೀ ಸಿ.ಭೈರೇಗೌಡ: ಎಲ್ಲೆಲ್ಲಿ ಏನು ನಡೆಯುತ್ತಿದೆ, ದೆಹಲಿಯಲ್ಲಿ ಏನು ನಡೆಯುತ್ತಿದೆ ಬೇರೆ ಬೇರೆ ರಾಜ್ಯಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನೇ ಚರ್ಚೆ ಮಾಡಬೇಕೆಂದರೆ ನಾವು ಸಿದ್ಧರಿದ್ದೇವೆ, ಈ ದೇಶಕ್ಕೆ ಎಷ್ಟು ಪ್ರಧಾನಿಗಳಿದ್ದಾರೆ, ಯಾರ್ಯಾರು ಏನೇನು ಇಲಾಖೆ ಬೇಕೆಂದು ಕೇಳುತ್ತಿದ್ದಾರೆ ಎನ್ನುವುದನ್ನು ಚರ್ಚೆ ಮಾಡೋಣ, ಅದಕ್ಕೇನಂತೆ.

ಶ್ರೀ ಕೆ.ಎಸ್.ಈಶ್ವರಪ್ಪ: ಈ ಸರ್ಕಾರಕ್ಕೆ ಆಸಕ್ತಿ ಇದೆ, ಅದನ್ನು ತೋರಿಸಬೇಕಾದರೆ ಒಂದು ರೂ. ಬೇಕಾದ ಕಡೆ ಹತ್ತು ಪೈಸೆ ಆದರೂ ವಿನಿಯೋಗಿಸಿದ್ದೇವೆ ಎಂದು ತೀರ್ಮಾನವಾದಾಗ ಮಾತ್ರ 300 ಕೋಟಿ ಬೇಕೆಂದ ಕಡೆ ಇವರು ಎಷ್ಟು ವಿನಿಯೋಗಿಸಿದ್ದಾರೆ? ಸತ್ತವರಿಗೆ ಎಷ್ಟು ಕೊಟ್ಟಿದ್ದಾರೆ? ಬೆಳೆ ಪರಿಹಾರವಾದರೂ ಎಷ್ಟು ಕೊಟ್ಟಿದ್ದಾರೆ? ಯಾವ್ಯಾವ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದಾರೆ? ಸತ್ತ ರೈತರ ಬಗ್ಗೆಯಾಗಲಿ, ಹಾನಿಯಾದ ಬೆಳೆ ಬಗ್ಗೆಯಾಗಲಿ ಇವರಿಗೆ ಸ್ವಲ್ಪವೂ ಕಳಕಳಿ ಇಲ್ಲ ಕರುಣೆಯಿಲ್ಲ. ಅದಕ್ಕೋಸ್ಕರ ನಾನು ಹೇಳಿದೆ: ಮೊದಲನೆಯದಾಗಿ ಮಾನವೀಯತೆ ಬೇಕು ಎಂದು. ಎರಡನೆಯದಾಗಿ ಕಠೋರತೆ ಬೇಕು ಎಂದು. ಯಾರೋ ಕೆಲವರ ಮೇಲೆ ಇವರು ಕೇಸ್ ಹಾಕಿದವರಿಗೆ 500 ರೂ. ಪೆನಾಲ್ಟಿ ಕೋರ್ಟ್ ಹಾಕಿದರೆ ನೀವೇನೂ ಮಾಡುವುದಕ್ಕಾಗುವುದಿಲ್ಲ, ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ನೀವೇ ಅಸಹಾಯಕತೆ ತೋರಿಸಿದರೆ ಅವರಿಗೆ ರಕ್ಷಣೆ ಸಿಕ್ಕಿದಂತೆ ಆಯಿತೋ ಇಲ್ಲವೋ? ಇವತ್ತು ಕೃಷಿ ಸಚಿವರು ಹೇಳಿದರು: ಕೋರ್ಟಿನಲ್ಲಿ ನಾವು ಏನೇನೋ ಮಾಡಿ ಕೇಸ್ ಹಾಕುತ್ತಿದ್ದೇವೆ 300-400-500 ರೂ. ಪೆನಾಲ್ಟಿ ಅವರಿಗೆ ಹಾಕುತ್ತಿದ್ದಾರೆ, ನಾವೇನು ಮಾಡುವುದಕ್ಕಾಗುತ್ತದೆ? ನಿಸ್ಸಹಾಯಕರು ಎಂದು ನಾವು ಒಪ್ಪಿಕೊಂಡ ಹಾಗೆ ಆಯಿತು. ಕಾನೂನನ್ನು ತಿದ್ದುಪಡಿ ಮಾಡಿ, ಯಾರು ಕಳಪೆ ಕ್ರಿಮಿನಾಶಕ ಮಾರುತ್ತಿದ್ದಾರೆ ಅವರನ್ನು ಜೈಲಿಗೆ ಹಾಕಲು ಸರ್ಕಾರಕ್ಕೆ ಶಕ್ತಿ ಇಲ್ಲವೇ ಹಾಗಾದರೆ?

ಶ್ರೀ ಸಿ.ಭೈರೇಗೌಡ: ತಾವು ಒಂದು ಪಕ್ಷದ ಮುಖಂಡರಾಗಿ ಮಾತನಾಡುತ್ತಿದ್ದೀರಿ; ಸ್ವಾಮಿ, ಯಾರ ಕೈಗಾದರೂ ಚೈನ್ ಹಾಕಬೇಕಾದರೆ ಕಾನೂನು ಪ್ರಕಾರವೇ ಹಾಕಬೇಕೇ ವಿನಾ ನಮಗೆ ಖುಷಿ ಬಂದವರಿಗೆಲ್ಲಾ ಚೈನ್ ಹಾಕುವುದಕ್ಕಾಗುವುದಿಲ್ಲ. ಆ ಅಧಿಕಾರ

ನಮಗಿದ್ದಿದ್ದರೆ ನಿಮ್ಮನ್ನು ಕೇಳುತ್ತಲೇ ಇರಲಿಲ್ಲ, ಕೇಂದ್ರಸರ್ಕಾರಕ್ಕೆ ಇಷ್ಟೊಂದು ಸಾರಿ ಕೈಮುಗಿಯಬೇಕಾದ ಅವಶ್ಯಕತೇನೆ ಇರಲಿಲ್ಲ, ಅದು ಪಾರ್ಲಿಮೆಂಟಿನಲ್ಲಿ ತಿದ್ದುಪಡಿ ಮಾಡಬೇಕಾದ ಕಾನೂನು, ಅನೇಕ ಸಾರಿ ನಾವು ಮನವಿ ಮಾಡಿದ್ದೇವೆ, ಬೇಕಾದರೆ ನಾನೇ ಕೆಲವು ಸಭೆಗಳಲ್ಲಿ ಮಾಡಿರುವ ಭಾಷಣದ ಪ್ರತಿಯನ್ನು ಒದಗಿಸಿಕೊಡುತ್ತೇನೆ. ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿದ್ದೇವೋ ಇಲ್ಲವೋ ನೋಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಕಳ್ಳತನ ಮಾಡದಿರುವ ವ್ಯಕ್ತಿಯನ್ನು ಪೋಲಿಸರು ಒದ್ದು ಒಳಕ್ಕೆ ಹಾಕಬೇಕು ಎಂದು ತೀರ್ಮಾನ ಮಾಡಿದಾಗ ಸುಳ್ಳುಕೇಸು ಹಾಕಿರುವ ಬೇಕಾದಷ್ಟು ದಾಖಲೆ ನಾನು ನಿಮಗೆ ಕೊಡುತ್ತೇನೆ. ಯಾವನು ಕಳಪೆಬೀಜ ಮಾರುತ್ತಿದ್ದಾನೆ ಎಂಬುದು ನಿಮಗೆ ಗೊತ್ತಿರುವಾಗ ಯಾವನು 400- 500 ರೂ. ಪೆನಾಲ್ಟಿ ಕೊಟ್ಟು ಹೊರಗೆ ಬರುತ್ತಿರುವಾಗ ಅವನನ್ನು ಒಳಕ್ಕೆ ಹಾಕಿ ಸರಿಯಾದ ಬುದ್ಧಿಕಲಿಸುವ ಶಕ್ತಿ ನಿಮಗೆ ಇಲ್ಲವೆಂದು ಒಪ್ಪಿಕೊಳ್ಳುತ್ತಿದ್ದೀರಿ.

ಶ್ರೀ ಸಿ.ಭೈರೇಗೌಡ: ನಾನು ಸರಿಯಾದ ರೀತಿ ಉತ್ತರ ಕೊಡಬೇಕಾಗುತ್ತದೆ, ಏಕೆಂದರೆ ಕೋರ್ಟಿನ ಮುಂದೆ ಮುಚ್ಚಳಿಕೆ ಬರೆದುಕೊಟ್ಟ ಪ್ರಕರಣಗಳು ಏನೇನಾಗಿವೆ ಎನ್ನುವುದನ್ನೂ ಹೇಳಬೇಕಾಗುತ್ತದೆ. ಕಾನೂನು ಬಿಟ್ಟು ಸರ್ಕಾರ ಹೇಗೆ ಕೆಲಸ ಮಾಡುವುದು? ಇದಕ್ಕೆ ನಾನು ಎಲ್ಲಾ ಆ್ಯಂಗಲ್‌ನಲ್ಲೂ ಉತ್ತರ ಕೊಡಬಲ್ಲೆ, ಈಗ ವಿಷಯಕ್ಕೆ ಸಂಬಂಧಿಸಿದ ಉತ್ತರ ಮಾತ್ರ ಕೊಡುತ್ತಿದ್ದೇನೆ ಅಷ್ಟೇ.

ಅಧ್ಯಕ್ಷರು: ಅನಗತ್ಯವಾಗಿ ನಾವು ಚರ್ಚೆ ಬೆಳೆಸಿಕೊಂಡು ಹೋಗುವುದು ಬೇಡ, ಇವತ್ತು ನಾವು ತೆಗೆದುಕೊಳ್ಳಬೇಕಾದ ಕಲಾಪ ಇನ್ನೂ ಸಾಕಷ್ಟಿದೆ. ಸರ್ಕಾರ ಉತ್ತರ ಕೊಟ್ಟಿದೆ, ಪುನರ್ವಿಮರ್ಶೆ ಮಾಡಿ ಎಂದು ತಾವು ಹೇಳುವುದೇನಾದರೂ ಇದ್ದರೆ ಕೇಳಿ, ಸರ್ಕಾರ ಏನು ಹೇಳುತ್ತದೆಯೋ ಹೇಳಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ವರದಿಯನ್ನೇ ಇಂಪ್ಲಿಮೆಂಟ್ ಮಾಡಲು ತಯಾರಿಲ್ಲ ಅಂದರೆ ನಾವು ಹೇಳುವುದೇನು? ಸದನಸಮಿತಿ 500 ರೂ. ಪರ್ ಹೆಕ್ಟೇರ್ ಎಂದು ಹೇಳಿದೆ, ಅದು ಕೊಡಿ. ಆಮೇಲೆ 2500 ಬಹಳ ಕಡಿಮೆ ಇದೆ, 5000 ಮಾಡಿ ಎಂದು ನಾವು ಕೇಳಿದ್ದೇವೆ ಇದ್ಯಾವುದನ್ನೂ ಅವರು ಕನ್‌ಸಿಡರ್ ಮಾಡಲು ತಯಾರಿಲ್ಲ, ನಮಗೆ ಸಮಯ ಕೊಡಿ ಎಂದು ಕೇಳುತ್ತಿದ್ದಾರೆ. ಅಧ್ಯಕ್ಷರೇ ಅಲ್ಲಿ ಹತ್ತಾರು ಜನ ಸಾಯುವಾಗ ಬೆಳೆ ನಷ್ಟವಾದಾಗ ನಾವು ಗಲಾಟೆ ಮಾಡಿ ಸದನಸಮಿತಿ ಮಾಡಿಸಿ ಒಂದು ತಾತ್ಕಾಲಿಕ ವರದಿ ತರಿಸಿದ ಮೇಲೂ ಅದನ್ನು ಅನುಷ್ಠಾನ ಮಾಡದಿದ್ದರೆ ಖಂಡಿತವಾಗಿ ನಾವಂತೂ ಸಹಿಸುವುದಕ್ಕೆ ಆಗುವುದಿಲ್ಲ.

(ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ಕುಳಿತರು)

ಅಧ್ಯಕ್ಷರು: ಹಣಕಾಸಿನ ಹೊರೆ ಬೀಳುತ್ತದೆ ಎಂದು ಭಯ ಇರಬಹುದೇ ಹೊರತು ರೈತರಿಗೆ ಸಹಾಯ ಮಾಡುವ ವಿಷಯದಲ್ಲಿ ಭೈರೇಗೌಡರಿಗೆ ಪ್ರಾಮಾಣಿಕ ಚಿಂತನೆ ಇಲ್ಲ ಎಂದು ಹೇಳುವುದು ಸರಿಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಭೈರೇಗೌಡರ ದಕ್ಷತೆ ಬಗ್ಗೆ ಬೇರೆ ಮಾತು ಇಲ್ಲ, ಏಕೆ ಹೀಗೆ ಭೈರೇಗೌಡರು ಜಾರಿ ಬೀಳುತ್ತಿದ್ದಾರೆ? ಇವರಿಗೆ ಕಳಕಳಿ ಇಲ್ಲ ಎಂದು ನಾವು ಹೇಳುವುದಿಲ್ಲ ಇನ್ನೇನು ಬೇರೆ ಮಾರ್ಗವೇ ಇಲ್ಲ, ಧರಣೀನೇ,

(ಶ್ರೀ ವಾಟಾಳ್ ನಾಗರಾಜ್‌ವರು ಧರಣಿ ಕುಳಿತರು)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಈಗ ಇಡೀ ರಾಜ್ಯಕ್ಕೆ ಗೊತ್ತಾಗಿರುವುದು 300 ಕೋಟಿ ರೂ.ಗಳ ಪರಿಹಾರ ಬೇಕೆಂದು ಸರ್ಕಾರವೇ ಒಪ್ಪಿಕೊಂಡಿರುವಾಗ ಆನೆಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ನಾಲ್ಕೂವರೆ ಕೋಟಿ ಮಟ್ಟಕ್ಕೆ ಬಂದಿದ್ದಾರೆ, ರೈತರ ಅಭಿವೃದ್ಧಿಗೆ ಇವರಿಗೆ ಏನೇನೂ ಆಸಕ್ತಿ ಇಲ್ಲ; ಪರಿಹಾರ ಕೊಡುವ ತನಕ ಧರಣಿ ನಾವು ಮುಂದುವರೆಸುತ್ತೇವೆ, ಸರ್ಕಾರಕ್ಕೆ ಆಸಕ್ತಿ ಇದ್ದರೆ ತಕ್ಷಣ ಇವರು ಹಣ ಬಿಡುಗಡೆ ಮಾಡಬೇಕು ಎಂದು ನಾವು ಒತ್ತಾಯ ಮಾಡುತ್ತೇವೆ.

(ಬಿಜೆಪಿ ಸದಸ್ಯರು ಧರಣಿ ಕುಳಿತರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ವರದಿ ಒಪ್ಪಲು ಕ್ಯಾಬಿನೆಟ್ ಸೇರಬೇಕು ಎಂದು ಹೇಳುತ್ತಾರೆ. ಇದು ಸಂಪೂರ್ಣವಾಗಿ ಬೇಜವಾಬ್ದಾರಿಯಿಂದ ಕೂಡಿರುವುದು, ನಾನು ಸರ್ಕಾರಕ್ಕೆ ಕೇಳುವುದಿಷ್ಟೇ: ನೀವು ವರದಿ ಒಪ್ಪಿದ್ದೀರಾ? ವರದಿ ಕೊಟ್ಟು ನಾಲ್ಕು ದಿವಸ ಆಗಿದೆ, ಇನ್ನೂ ಕ್ಯಾಬಿನೆಟ್ ತೀರ್ಮಾನವಾಗಿಲ್ಲ ಎನ್ನುತ್ತೀರಿ. ಎಂಎಲ್‌ಸಿ ಅಭ್ಯರ್ಥಿ ಆಯ್ಕೆ ಮಾಡಲು ಜಿಂದಾಲ್ ಆಸ್ಪತ್ರೆಯಲ್ಲಿ ಕ್ಯಾಬಿನೆಟ್ ಸಭೆ ಸೇರುತ್ತಾರೆ, ಸತ್ತಿರುವ ರೈತರ ಬಗ್ಗೆ ಬಂದಿರುವ ವರದಿ ಒಪ್ಪಿಕೊಳ್ಳಬೇಕೋ ಬೇಡವೋ ಎಂದು ಕ್ಯಾಬಿನೆಟ್ ಸೇರಲು ಆಗುವುದಿಲ್ಲವೋ? ಹಾಗಾದರೆ ಮಧ್ಯಂತರ ವರದಿ ಮಂಡಿಸಬೇಕು ಎಂದು ಇಲ್ಲಿ ಒತ್ತಾಯ ಬಂದಿದ್ದು?

5.20 ಪಿ.ಎಂ

ಮಧ್ಯಂತರ ವರದಿ ಕೇಳಿದ್ದೇ ತಕ್ಷಣ ಪರಿಹಾರವನ್ನು ಕೊಡಬೇಕೆಂದು ಹೇಳಿ. ತಕ್ಷಣ ಪರಿಹಾರ ಕೊಡಬೇಕೆಂದರೆ ಇವತ್ತು ಕ್ಯಾಬಿನೆಟ್ ಸೇರಬೇಕು, ಇಲ್ಲದಿದ್ದರೆ ತೀರ್ಮಾನ ಮಾಡುವುದಕ್ಕಾಗುವುದಿಲ್ಲ ಎಂದರೆ ಇದು ಎಷ್ಟು ಬೇಜವಾಬ್ದಾರಿತನದ ಸರ್ಕಾರ. ಅದಕ್ಕೋಸ್ಕರ ಮತ್ತೆ ಈ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು. ಬದಲಾವಣೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಹಣ ಇಲ್ಲ ಎಂದು ಹೇಳಿ ಅದಕ್ಕೆ ನಿಯಮಾವಳಿಯನ್ನು ಬದಲಾವಣೆ ಮಾಡುವುದಕ್ಕೆ ಇವರು ಒಪ್ಪುತ್ತಿಲ್ಲ. ಹಾಗಾಗಿ

ಇದನ್ನು ಪ್ರತಿಪಾದನೆ ಮಾಡಿ ನಾನು ಕೂಡ ಧರಣಿ ಮಾಡುತ್ತಿದ್ದೇನೆ.

(ಮಾನ್ಯ ಶ್ರೀರಾಮರೆಡ್ಡಿಯವರು ಧರಣಿ ಕುಳಿತರು)

ಅಧ್ಯಕ್ಷರು: ಇದು ಕಾಮನ್ ಡೆಮಾಕ್ರಟಿಕ್ ಫ್ರಂಟ್ ಆಯಿತಲ್ಲಾ. ಯುನೈಟೆಡ್ ಫ್ರಂಟ್ ಹೊರಟುಹೋಯಿತು.

+ ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಈಗ ಈ ವರದಿಯನ್ನು ಮೊನ್ನೆ ಶುಕ್ರವಾರ ಕೊಟ್ಟಿದ್ದಾರೆ. ಇವತ್ತು ವರದಿ ಕೊಟ್ಟು ಇವತ್ತು ಅನುಷ್ಠಾನ ಮಾಡಬೇಕೆಂದರೆ ಸರಿಯಾಗುತ್ತಿರಲಿಲ್ಲ. ಮೊನ್ನೆ ವರದಿಯನ್ನು ಕೊಟ್ಟಿದ್ದಾರೆ. ಒಂದು ವೇಳೆ ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಬೇಕೆಂದು ಹೇಳಿದ್ದರೆ ಮೂರು ದಿವಸಗಳ ಕಾಲ ಇತ್ತು. ಅವರು ನಿರ್ಣಯವನ್ನು ಮಾಡಬೇಕಾಗಿತ್ತು. ಏಕೆಂದರೆ ಇದನ್ನು ಕಾಯುವಂಥದ್ದಲ್ಲ. ಇಂಟರಿಮ್ ಆರ್ಡರ್ ಕೊಟ್ಟಿದ್ದಾರೆ, ಮುಖ್ಯವಾಗಿ ಅದಕ್ಕಿಂತಲೂ ಹೆಚ್ಚಾಗಿ ಈ ಜಂಟಿ ಸಮಿತಿಯಲ್ಲಿ ಎಲ್ಲಾ ಪಕ್ಷದವರೂ ಸೇರಿದ್ದಾರೆ. ಈಗ ಇದನ್ನು ಕ್ಯಾಬಿನೆಟ್ ಪುನಃ ನಿರ್ಣಯ ಮಾಡುವ ಪ್ರಶ್ನೆ ಏನಿದೆ? ಯಾವಗಲೂ ಒಂದು ಜಂಟಿ ವರದಿಯನ್ನು ಕೊಟ್ಟಮೇಲೆ ಸಾಮಾನ್ಯವಾಗಿ ಸರ್ಕಾರ ಅದನ್ನು ಒಪ್ಪತಕ್ಕಂಥದ್ದು ಸತ್‌ಸಂಪ್ರದಾಯ. ಈಗ ಜಂಟಿ ಸಮಿತಿಯು ಕೊಟ್ಟಂಥ ವರದಿ ಅದು as good as a resolution of this House. Legislature is supreme. ಇದು ಪ್ರಜಾಪ್ರಭುತ್ವದಲ್ಲಿ ಇರುವ ಸಿದ್ಧಾಂತ. ಇದೊಂದು ಪ್ರಸ್ತಾವನೆಯಲ್ಲ. ಈ ಸದನದ ಮುಂದೆ ಇವತ್ತು ಈ ವರದಿ ಪ್ರಸ್ತಾವನೆ ಎಂದು ಹೇಳಿ ದಯಮಾಡಿ ತಿಳಿದುಕೊಳ್ಳಬಾರದು. ಇದು ನಿರ್ಣಯವೆಂದರೆ, it is as good as a resolution of this House. ಇದರ ಮೇಲೆ ಎಕ್ಸಿಕ್ಯೂಟಿವ್ ಆಗಲಿ, ಬ್ಯುರೋಕ್ರಸಿ ಆಗಲಿ ಡೆಲಿಬರೇಟ್ ಮಾಡುವ ಪ್ರಶ್ನೆ ಇಲ್ಲ. ಆ ರೀತಿ ಆಲೋಚನೆ ಆಗುವುದಿದ್ದರೆ ಬ್ಯುರೋಕ್ರಸಿ ಅವರೇ ಮಾಡಬಹುದಿತ್ತು ಎಕ್ಸಿಕ್ಯೂಟಿವ್ ಮಾಡಬಹುದಿತ್ತು ಲೆಜಿಸ್ಲೇಚರ್‌ಗೆ ಏತಕ್ಕೆ ಈ ಜವಾಬ್ದಾರಿ ಕೊಡಬೇಕಾಗಿತ್ತು? ಜಂಟಿ ಸಮಿತಿಯನ್ನು ಮಾಡಿದಮೇಲೆ ಪುನರ್‌ವಿಮರ್ಶೆ ಮಾಡುವಂಥದ್ದು ಯಾವುದಾದರೂ ಇದ್ದರೆ ಆ ಸಂಪ್ರದಾಯ ಒಳ್ಳೆಯದಲ್ಲ. ಆ ರೀತಿಯ ಪ್ರೊಸೀಡಿಂಗ್ಸ್ ಇದ್ದರೆ ದಯಮಾಡಿ ಕೊಡಿ. ಈ ರೀತಿಯಾಗಿ ವರದಿಯನ್ನು ಕೊಟ್ಟಮೇಲೂ ಕೂಡ ಚರ್ಚೆ ಮಾಡತಕ್ಕಂಥದ್ದು, ನಿರ್ಣಯ ಮಾಡುವ, ಆಲೋಚನೆ ಮಾಡುವ ಬಗ್ಗೆ ಮತ್ತು ಅದರ ಇಂಪ್ಲಿಕೇಷನ್ಸ್ ಬಗ್ಗೆ ಅಧ್ಯಯನ ಮಾಡಿದ ಬಗ್ಗೆ ಯಾವುದಾದರೂ ಪ್ರೊಸೀಡಿಂಗ್ಸ್ ಎಲ್ಲಿಯಾದರೂ ಇದ್ದರೆ ದಯಮಾಡಿ ನನಗೆ ತರಿಸಿಕೊಡಿ. ಈ ಹಿಂದೆ ನಮ್ಮ ಸರ್ಕಾರವೂ ಪರಿಹಾರವನ್ನು ಕೊಟ್ಟಿದೆ. ಆಲೂಗಡ್ಡೆ ಇದೇ ಕೋಲಾರ ಜಿಲ್ಲೆಯಲ್ಲಿ ರೈತರು ಆಂಧ್ರಪ್ರದೇಶಕ್ಕೆ ಹೋದಾಗ ನಾನು ಅಮೇರಿಕಾದಲ್ಲಿದ್ದೆ. ಅಲ್ಲಿಂದ 35-40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎಂದು ಹೇಳಿ ಅಲ್ಲಿಂದ ಆದೇಶ

ಕೊಟ್ಟೆ. ಕ್ಯಾಬಿನೆಟ್ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ. We released the money immediately and distributed it. ತೊಗರಿಬೇಳೆಯ ಸಮಸ್ಯೆ ಬಂದಾಗ ಬಹುಶಃ ಗುಲ್ಬರ್ಗಾ ಕಡೆ ಸುಮಾರು 11 ಕೋಟಿ ರೂಪಾಯಿಗಳನ್ನು ನನಗೆ ನೆನಪಿದ್ದ ಪ್ರಕಾರ ಕ್ಯಾಬಿನೆಟ್ ನಿರ್ಣಯ ಮಾಡಿಕೊಟ್ಟಿದ್ದಲ್ಲ. We just released it. May be, we would have submitted a ratification to the Cabinet. Even ಸನ್‌ಫ್ಲವರ್ ಬಿಜಾಪುರದ ಕಡೆ ಆದಾಗ ಆಗ ಆರೇಳು ಕೋಟಿ ರೂಪಾಯಿ ನಾವು ಯಾವುದೇ ಕ್ಯಾಬಿನೆಟ್ ನಿರ್ಣಯವನ್ನು ಮಾಡಿ ಕೊಟ್ಟಿಲ್ಲ. We just released it. ಸುಮಾರು ಹಿಂದೆ ಇಂಥ ಆಕಸ್ಮಿಕವಾಗಿ ಸತ್ತರೆ ಯಾವುದೋ ಒಂದು ನಿಸರ್ಗದ ದೋಷದಿಂದ ಅಥವಾ ಅವಘಡದಿಂದ ಸತ್ತರೆ ಒಬ್ಬರಿಗೆ ಹತ್ತು ಸಾವಿರ ರೂಪಾಯಿ ಕೊಡುವುದು ಇತ್ತು. ಆಗ ನಾವು ಒಂದು ಲಕ್ಷ ರೂಪಾಯಿಗೆ ಏರಿಸಿದೆವು. ಕೇಂದ್ರಸರ್ಕಾರದವರು ಅವರು ಸಹಾಯವನ್ನು ಕೊಟ್ಟಾಗ ಅವರಿಂದ ಒಂದು ಲಕ್ಷ ನಮ್ಮಿಂದ ಒಂದು ಲಕ್ಷ ಸೇರಿಸಿ ಎರಡು ಲಕ್ಷ ರೂಪಾಯಿ ಕೊಟ್ಟೆವು. ಇದರಲ್ಲಿ ಕೂಡ ಕೇಂದ್ರ ಸರ್ಕಾರ ಅದನ್ನು ಹೆಚ್ಚುವರಿ ಎಂದು ಹೇಳಿ ಕೊಡಬಹುದು. ನಮ್ಮ ಸರ್ಕಾರ ಇದು ಬದಲಾವಣೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲ. ಕೇಂದ್ರಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕಾದ ಅವಶ್ಯಕತೆಯೂ ಇಲ್ಲ. ಎಂದೂ ಕಳುಹಿಸಿಲ್ಲ. ಇಂಥ ಆಯಾ ರಾಜ್ಯಕ್ಕೆ ಸಂಬಂಧಪಟ್ಟಂಥ ಕೆಲಾಮಿಟಿ ರಿಲೀಫ್ ಆಗಲಿ ಅವರು ಹೆಚ್ಚುವರಿ ಕೊಟ್ಟರೆ ನಾವು ಕೊಡಬಹುದು. ಇಲ್ಲದಿದ್ದರೆ ನಮ್ಮ ಇತಿಮಿತಿಯಲ್ಲೇ ಇದನ್ನು ನಾವು ಹೆಚ್ಚಾಗಿ ಸ್ಯಾಂಕ್ಷನ್ ಮಾಡತಕ್ಕಂಥದ್ದು, ಪುನಃ ಕೇಳುವ ಪ್ರಶ್ನೆ ಇಲ್ಲ. ಆದುದರಿಂದ ಪುನಃ ಇದನ್ನು ಕ್ಯಾಬಿನೆಟ್‌ಗೆ ಕೊಡಬೇಕು, ನನಗೆ ಅರ್ಥವಾಗುವುದಿಲ್ಲ. 300 ಕೋಟಿ, 400 ಕೋಟಿ ರೂಪಾಯಿ ಆಗಬೇಕೆಂದರೆ ಅರ್ಥವಾಗುವುದಿಲ್ಲ. ಇದು ಏನಾಗುತ್ತಿದೆ ಎಂದರೆ ಇದನ್ನು ನಾವು ಬಹಳ ವಿಸ್ತರಿಸುವುದಕ್ಕೆ ಹೋಗುತ್ತಿದ್ದೇವೆ. ನಿಜವಾಗಿಯೂ ಇದು ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುವುದೇ ಇಲ್ಲ. ನಾನು ಬೀದರ್ ಕಡೆಯಲ್ಲೆಲ್ಲಾ ಕೇಳುತ್ತಿದ್ದೇನೆ. ವಿಲೇಜ್ ಅಕೌಂಟೆಂಟ್ಸ್ ಅರ್ಜಿಗಳನ್ನು ವಸೂಲು ಮಾಡುತ್ತಿದ್ದಾರೆ. ನಾನು ಬೇಕಾದರೆ ಎರಡು ಎಕರೆ ಮಾಡುತ್ತೇನೆ, ಮೂರು ಎಕರೆ ಮಾಡುತ್ತೇನೆ, ತೊಗರಿಬೇಳೆ ಮೂರು ಎಕರೆ ಎಂದು ಇರಲಿ ಎಂದರೆ ಇವತ್ತು ಅಲ್ಲಿ ಭ್ರಷ್ಟಾಚಾರ ನಡೆಯಲಿಕ್ಕೆ ಎಷ್ಟು ಬೇಕೋ ಅಷ್ಟು ಮಾಡುತ್ತಿದ್ದೇವೆ. ಬೋಗಸ್ ಅರ್ಜಿಗಳೂ ಕೂಡ ಬರುತ್ತವೆ. ಬಹುಶಃ ಅವರು ಹೋಗುವ ಕಾರ್ಯಕ್ರಮ ಸ್ಥಳೀಯವಾಗಿ ತಾವು ಸ್ವಲ್ಪ ತಾವೇ ಬೇಕಾದರೆ ಅಧ್ಯಯನ ಮಾಡಿಕೊಂಡು ಬರಬಹುದು. It is worthwhile. ದಯಮಾಡಿ ಹೋಗಿ ನೋಡಿ. ಅಲ್ಲಿ ಯಾವ ರೀತಿ ಅರ್ಜಿ ಕೊಡುತ್ತಿದ್ದಾರೆ, ಅರ್ಜಿಯನ್ನು ಸಂಗ್ರಹ ಮಾಡುತ್ತಿದ್ದಾರೆ, ಅದಕ್ಕೆ ಕೊನೆಯೇ ಇರುವುದೇ ಇಲ್ಲ. ಇತಿಮಿತಿಯೇ ಇರುವುದಿಲ್ಲ. This is only to dilute the entire gravity of the situation. ಇದು ಬಹಳ ಸೀರಿಯಸ್ ಆಗಿದೆ. ಸರ್ಕಾರ

ಇವತ್ತಿಗೂ ಎಚ್ಚತ್ತಿಲ್ಲ ಎಂದರೆ ನವೆಂಬರ್ 97ರಲ್ಲಿ ಬೆಳೆ ಹೋಗಿದ್ದು ಗೊತ್ತಿದೆ. ಈ ವರದಿಯಲ್ಲಿ ಕೂಡ ಕಾಣುತ್ತಿದೆ. ಡಿಸೆಂಬರ್ 97ರಲ್ಲಿ ವರದಿ ಕೂಡ ಬಂದಿದೆ. ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚಿ ಆಯಿತು. ಇವತ್ತು 5ನೇ ತಿಂಗಳು. ಇದು ಮಾಸ್ ಸೂಯಿಸೈಡ್‌ಗಳು ಆಗಲಿಲ್ಲ. ಅದನ್ನು ಇವರು ಕಾಯುತ್ತಿದ್ದಾರೆ. 5 ತಿಂಗಳಿಂದ ಆಲೋಚನೆ ಮಾಡಿಲ್ಲ. ಇವತ್ತು ಖಾರೀಫ್ ಹೋಯಿತು, ರಬಿ ಹೋಗುತ್ತಿದೆ. ಮುಂದೆ ಬೆಳೆಗೆ ಯಾವ ರೀತಿಯಲ್ಲೂ ದಾರಿ ಇಲ್ಲ. ಸಾಲ ಕೊಡುವ ಯಾರ್‍ಯಾರು ದಲ್ಲಾಳಿಗಳು ಇದ್ದಾರೆ, ಅವರು ಇವರನ್ನು ಪೀಡನೆ ಮಾಡುತ್ತಿದ್ದಾರೆ. ಅವರನ್ನು ತಡೆಯುವ ಯಾವುದೇ ಕಾನೂನು ಕ್ರಮ ಇಲ್ಲ. ಬೇಕಾದರೆ ಆರ್ಡಿನೆನ್ಸ್ ಪಾಸ್ ಮಾಡಿ. ಲಿಕ್ವಿಡೇಷನ್ ಆಫ್ ಡೆಟ್ ಬಗ್ಗೆ ನಾವು ಆರ್ಡಿನೆನ್ಸ್ ಪಾಸ್ ಮಾಡಲಿಲ್ಲವೇ? ಕಾನೂನು ಮಾಡಲಿಲ್ಲವೇ? Pass a resolution. ಇಲ್ಲಿ ತನ್ನಿ. ನಾವು ಇವತ್ತೇ ಪಾಸ್ ಮಾಡಿಬಿಡುತ್ತೇವೆ. ಯಾವುದೇ ರೀತಿಯಾದ ವಸೂಲಿ, ಯಾವುದೇ ಮಾರ್ಗದಿಂದ ಇದು ಆಗತಕ್ಕದ್ದಲ್ಲ ಒಂದು ಟೆಂಪೂರರಿ ಎಮರ್ಜೆನ್ಸಿ ಆರ್ಡರನ್ನು ಇಷ್ಯೂ ಮಾಡಿ. At least to that extent, they will get releif. ಇದು ವ್ಯಾಪಕವಾಗಿ ತಕ್ಷಣ ತೆಗೆದುಕೊಳ್ಳಬೇಕಾದ ಕಾರ್ಯಕ್ರಮ. ನೀವು ಸೀಡ್ಸ್ ಕೊಡಬೇಕು. ಪೆಸ್ಟಿಸೈಡ್ಸ್ ಕೊಡಬೇಕು. ಇದೆಲ್ಲಾ ತಕ್ಷಣ ಆಗದಿದ್ದರೆ, there can be a mass suicide. Perhaps the government is expecting mass suicide. ಐದು ತಿಂಗಳು ಆರು ತಿಂಗಳು ಹೋದರೆ ಹೇಗೇ? ಇದು ಒಂದೆರಡು ತಿಂಗಳ ಪ್ರಶ್ನೆಯಲ್ಲ. ಐದಾರು ತಿಂಗಳ ಕಾಲ ಇವತ್ತು ರೈತರು ಏನು ಮಾಡಬೇಕು ಹೇಳಿ. ಉಪವಾಸ ಬೀಳುತ್ತಿದ್ದಾರೆ. ಸಾಲಗಾರರು ಕಾಡುತ್ತಿದ್ದಾರೆ. ಇವತ್ತು ಆತ್ಮಹತ್ಯೆಗಳಾಗಿವೆ. ಇವತ್ತು ಮಾಸ್ ಆತ್ಮಹತ್ಯೆಗಳಾಗುವಂಥ ಒಂದು ಸನ್ನಿವೇಶ ಇಲ್ಲಿ ಇದೆ. ಇಡೀ ಕುಟುಂಬವೇ ನಾಶವಾಗುವ ಪರಿಸ್ಥಿತಿ ಇದೆ. ಇಂಥ ಗಂಭೀರ ಪರಿಸ್ಥಿತಿ ಇದೆ. ಆ ಕಡೆ ಪ್ರಿಸಿಡೆಂಟ್ಸ್‌ಗಳು ಇದೆ. ಮಹಾರಾಷ್ಟ್ರದಲ್ಲಿ ಇದೇ ಪರಿಸ್ಥಿತಿಯಾದಾಗ ಅಲ್ಲಿ ಪರಿಹಾರ ಕೊಟ್ಟ ಗೌರ್ನಮೆಂಟ್ ಆರ್ಡರ್ಸನ್ನು ನಮ್ಮ ನಾಯಕರು ಕೊಟ್ಟಿದ್ದಾರೆ. ಮತ್ತೊಂದು ಕಡೆ ಆಂಧ್ರದವರು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ ಆರು ತಿಂಗಳ ಕಾಲ ಕ್ಯಾಬಿನೆಟ್‌ನಲ್ಲಿ ಆಗಬೇಕು, ಪ್ರಸ್ತಾವನೆ ಬರಬೇಕು, ಜಂಟಿ ಸಮಿತಿ ವರದಿ ಬರಬೇಕು, ಇನ್ನೇನು ಬರಬೇಕೋ ನಮಗಂತೂ ಅರ್ಥವಾಗುತ್ತಿಲ್ಲ. ಅವರು ನಮ್ಮ ನಾಯಕರು ನಿರ್ಣಯ ತೆಗೆದುಕೊಂಡ ಹಾಗೆ ಅಥವಾ ನಮ್ಮ ಬಿಜೆಪಿ ನಾಯಕರು ಅಥವಾ ಎಲ್ಲಾ ಪಕ್ಷದವರು ನಿರ್ಣಯ ತೆಗೆದುಕೊಂಡ ಹಾಗೆ ನಾವು ಇಲ್ಲಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುವವರೆಗೆ ಕುಳಿತುಕೊಂಡುಬಿಡುತ್ತೇವೆ. ಮತ್ತೇನು ಮಾಡುವುದು? ರೈತರ ಒಂದು ಭೀಕರವಾದ ಒಂದು ಅಭೂತಪೂರ್ವವಾದ ಈ ಸನ್ನಿವೇಶಕ್ಕೆ ಸ್ಪಂದಿಸದೇ ಇರುವ ಯಾವ ಒಂದು ಸರ್ಕಾರ ಇದೆ, ನಮಗೆ ಯಾವ ಭಾಷೆ ಉಪಯೋಗ ಮಾಡಬೇಕೋ ಗೊತ್ತಾಗುತ್ತಿಲ್ಲ. ಬಹುಶಃ ಇಂಥ ಗಂಭೀರತೆಯ ಬಗ್ಗೆ ಒಂದು ಚೂರೂ ಕೂಡ ಸೂಕ್ಷ್ಮತೆ ಇಲ್ಲದೆ ಸ್ಪಂದಿಸದೇ ಇರುವ ಒಂದು ಕುರುಡು ಸರ್ಕಾರ

ಇದ್ದರೆ ನಾವೇನು ಮಾಡಬೇಕು? ದಯಮಾಡಿ ತಾವು ಇದರ ಬಗ್ಗೆ ಬೇಕಾದರೆ ತಮ್ಮ ನೇತೃತ್ವದಲ್ಲೇ ಹೋಗಿ ನೋಡೋಣ. ಇಡೀ ಕರ್ನಾಟಕ ರಾಜ್ಯ ತಿರುಗಬೇಕಾಗಿಲ್ಲ. ಎರಡು ಜಿಲ್ಲೆ ಪ್ರಶ್ನೆ ಇರುವುದು. ಬೀದರ್ ಜಿಲ್ಲೆ ಭಾಲ್ಕಿ ಇಂಥ ಎರಡು ಮೂರು ತಾಲ್ಲೂಕು ಮತ್ತೊಂದು ಕಡೆ ಗುಲ್ಬರ್ಗಾ ತಾಲ್ಲೂಕು ಬೇರೆ ಕಡೆ ಇರಬಹುದು. ಆದರೆ ಇವತ್ತು ಅಲ್ಲಿ ತಕ್ಷಣ ನೀವು ಹಸ್ತಕ್ಷೇಪ ಮಾಡಿ ಸರ್ಕಾರ ತಕ್ಷಣ ಸಹಾಯಕ್ಕೆ ಬರದಿದ್ದರೆ ಸಾಲಗಾರರ ಪೀಡನೆಯನ್ನು ನಿಲ್ಲಿಸದಿದ್ದರೆ ಏನು ಪ್ರಯೋಜನ? ಈ ವರದಿ ಕೊಟ್ಟಿದ್ದನ್ನು shall I scrap this report? ಏಕೆ ಈ ವರದಿ ಇರಬೇಕು? If this report has no scnctity at all I think the Chairman of that Committee and all the Members should resign straight away. ಏನು ಮರ್ಯಾದೆ ಇದೆ? ಏತಕ್ಕೆ ಇರಬೇಕು? ನನ್ನ ನಾಯಕರಿಗೆ ನಾನು ಸಲಹೆ ಕೊಡುತ್ತಿದ್ದೇನೆ. Please ask our Members to resign. ಛೇರ್ಮನ್ ರಿಸೈನ್ ಮಾಡುವುದು ಅದು ಅವರಿಗೆ ಬಿಟ್ಟಿದ್ದು. ಪಕ್ಷದ ಕಟ್ಟುಪಾಡು ಇರುವುದರಿಂದ ಅವರು ರಿಸೈನ್ ಮಾಡುವುದು ಬೇಡ. ನಮ್ಮ ಯಾವ ವಿರೋಧ ಪಕ್ಷದ ಸದಸ್ಯರೂ ಕೂಡ ಇದರಲ್ಲಿ ಸದಸ್ಯರಾಗಬೇಕಾದ ಅಗತ್ಯವೇ ಇಲ್ಲ. ಇಂಥ ವರದಿಗೆ ಬೆಲೆ ಕೊಡದೇ ಇರುವ ಒಂದು ಸಂದರ್ಭದಲ್ಲಿ, at least this is not enough, ಇದು ನಿಜವಾಗಿ ಇಂಥ ಒಂದು ಗಂಭೀರವಾದ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ. ಗಂಭೀರವಾದ ಪರಿಸ್ಥಿತಿಗೆ ಇವತ್ತು ಸರ್ಕಾರ ಕಿವುಡರಾಗಿ ಕುಳಿತುಕೊಂಡರೆ ನಾವೇನು ಮಾಡಬೇಕು? ಅದಕ್ಕೆ ಉಪಾಯವೇ ಇಲ್ಲವೇ? ದಯಮಾಡಿ ಸರ್ಕಾರ ಇದರ ಬಗ್ಗೆ ಇದನ್ನು ಇಂಪ್ಲಿಮೆಂಟ್ ಮಾಡುವ ಅಟ್‌ಲೀಸ್ಟ್ ಈ ಇಂಟಿರಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವ ಒಂದು ಆದೇಶವನ್ನು ಕೊಡದಿದ್ದರೆ ಆದೇಶ ಕೊಡುತ್ತೇವೆ ಎಂದು ಹೇಳದಿದ್ದರೆ, I think it is not worth running this House.

ಶ್ರೀ ವಾಟಾಳ್ ನಾಗರಾಜ್: ಈ ಸದನಸಮಿತಿಯನ್ನು ಮಾಡಿದಂಥ ಉದ್ದೇಶವೇನು? ಪ್ರಾಮುಖ್ಯವಾಗಿ ಈ ಸದನ ಸಮಿತಿಯನ್ನು ಎಷ್ಟು ಜಾಗರೂಕತೆಯಿಂದ 15 ದಿವಸದೊಳಗಾಗಿ ವರದಿ ಕೊಡಬೇಕು ಎಂದು ಹೇಳಿದ್ದು. ಈ ವರದಿಯನ್ನು ಕೊಡುವುದಕ್ಕೆ ಬಹಳ ನಿಧಾನ ಮಾಡಿದರು. ತರಾತುರಿಯಿಂದ ಕೊಡಿ ಎಂದು ಹೇಳಿ 23ನೇ ತಾರೀಖಿನ ದಿವಸ ಧರಣಿ ಮಾಡಿ ಗಲಾಟೆ ಮಾಡಿ ನಾವು ವರದಿಯನ್ನು ತೆಗೆದುಕೊಳ್ಳಬೇಕಾಯಿತು. ಆದರೆ ಒಂದು ಸಲಹೆ ತಮಗೆ ಕೊಡುತ್ತೇನೆ. ತಾವು ಈಗ ಈ ಸದನದ ಮುಖ್ಯಸ್ಥರು. ಅಧ್ಯಕ್ಷರು ಇದ್ದೀರಿ. ತಮಗೆ ಒಂದು ಸಲಹೆ ಕೊಡುತ್ತೇನೆ. ದಯಮಾಡಿ ಇದನ್ನು ಮತದಾನಕ್ಕೆ ಹಾಕಿಬಿಡೋಣ. ಈ ವರದಿಯನ್ನು ಒಪ್ಪಬೇಕೇ ಬೇಡವೇ ಎಂಬುದನ್ನು ನೇರವಾಗಿ ಮತದಾನಕ್ಕೆ ಹಾಕಿಬಿಡೋಣ. ನನ್ನ ಸಲಹೆ ಇದು. ಈಗ ಇದು ಮತದಾನಕ್ಕೆ ಬಂದು ಬಿಡಲಿ. ಈ ವರದಿ ಸಂಪೂರ್ಣವಾಗಿ ಈ ಸದನ ಒಪ್ಪುತ್ತದೆ ಎಂದು ತಾವು ಮತದಾನಕ್ಕೆ ಹಾಕಿ. ತೀರ್ಮಾನ ಆಗಿ ಹೋಗಲಿ.

ಇಲ್ಲದಿದ್ದರೆ ಇದು ಸರಿ ಅಲ್ಲ, ನಾನು ತಮಗೆ ಹೇಳುತ್ತಿದ್ದೇನೆ. ಬೇಜವಾಬ್ದಾರಿ ಸರ್ಕಾರ ಇದು. ಸರ್ಕಾರಕ್ಕೆ ನೀತಿ ಇಲ್ಲ. ಕರ್ನಾಟಕದ ಇತಿಹಾಸದಲ್ಲಿ ಈ ರೀತಿ ನಡೆದಿರಲಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾವು ಮತದಾನಕ್ಕೆ ಹಾಕಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ವರದಿಯನ್ನು ಈ ಸಭೆ ಒಪ್ಪತಕ್ಕದ್ದು. ನಾನು ಈ ಸಭೆಯ ಮುಂದೆ ನಿರ್ಣಯಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರ ನಿರ್ಣಯವನ್ನು ನಾನು ಅನುಮೋದನೆ ಮಾಡುತ್ತೇನೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್: ತಾವು ರಕ್ಷಣೆ ಕೊಡಿ. ತಾವು ದಯಮಾಡಿ ಹೇಳಿ. ನಾವು ಬೆಳಿಗ್ಗೆ ಏನು ಹೇಳಿದ್ದೇವೆ? ಅಧ್ಯಕ್ಷರ ವಿರುದ್ಧ ಯಾರೂ ಚುನಾವಣೆಗೆ ನಿಲ್ಲಬಾರದು ಎಂದು ಬೆಳಿಗ್ಗೆ ತೀರ್ಮಾನಕ್ಕೆ ಬಂದಿದ್ದೇವೆ. ತಾವು ಈಗ ಈ ತೀರ್ಮಾನಕ್ಕೆ ಬರಬೇಕು. ಏನು ಹೀಗಾದರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಬೆಲ್ ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ರೈತರ ಬಗ್ಗೆ ಈ ಸರ್ಕಾರಕ್ಕೆ ತಾತ್ಸಾರ ಇದೆ. ದಯವಿಟ್ಟು ಈಗ ಮಾತನಾಡಬೇಕು. ರೈತರ ಬಗ್ಗೆ ಏನೂ ಆಸಕ್ತಿ ಇಲ್ಲ, ಅಪೇಕ್ಷೆ ಇಲ್ಲ. ಸುಮ್ಮನೇ ನಾಟಕದ ಹಾಗೆ ಸರ್ಕಾರವನ್ನು ನಡೆಸುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕದ ಇತಿಹಾಸದಲ್ಲಿ ಇದೊಂದು ಇತಿಹಾಸ ನಿರ್ಮಾಣ ಆಗಲಿ.

ಅಧ್ಯಕ್ಷರು: ಸನ್ಮಾನ್ಯ ಹಿರಿಯ ಸದಸ್ಯರಾದಂತಹ ವೀರಪ್ಪ ಮೊಯಿಲಿಯವರು ಈ ರಾಜ್ಯದ ಆಡಳಿತವನ್ನು ಕೆಲವು ವರ್ಷಗಳ ಕಾಲ ನಡೆಸಿದವರು. ಅವರು ಕೆಲವು ಗಂಭೀರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದಕ್ಕೇನು ಉತ್ತರ ಹೇಳುತ್ತದೋ ನೋಡೋಣ.

ಶ್ರೀ ವಾಟಾಳ್ ನಾಗರಾಜ್: ಸಾರ್ ತಾವು ನನಗೆ ಉತ್ತರ ಕೊಡಲಿಲ್ಲ. ನನಗೂ ಸೇರಿದ್ದು, ತಾವು ತಪ್ಪಿಸಿಕೊಳ್ಳಬಾರದು. ನನಗೆ ತಾವು ಉತ್ತರ ಕೊಡಲಿಲ್ಲ. ತಾವು

ಹೇಳಿ. ಇದರಲ್ಲಿ ತಪ್ಪೇನು ಇದೆ? ನಿರ್ಣಯಕ್ಕೆ ಹಾಕಿ. ಬಹುಮತ ಇದ್ದರೆ ಆ ಕಡೆಗೆ ಆಗಲಿ.

SRI D.T.JAYAKUMAR: When the House is not in order, they cannot press for division.

(ಗೊಂದಲ)

ಅಧ್ಯಕ್ಷರು: ಸನ್ಮಾನ್ಯ ವೀರಪ್ಪ ಮೊಯಿಲಿಯವರು ಪ್ರಸ್ತಾಪ ಮಾಡಿರತಕ್ಕ ವಿಷಯಕ್ಕೆ ಸರ್ಕಾರ ಏನು ಉತ್ತರ ಹೇಳುತ್ತದೆಯೋ ನೋಡೋಣ.

ಶ್ರೀ ವಾಟಾಳ್ ನಾಗರಾಜ್: ನಾನು ನೇರವಾಗಿ ಹೇಳುತ್ತಿದ್ದೇನೆ. ಈ ವರದಿಯನ್ನು ಈಗ ತಾವು ಮತದಾನಕ್ಕೆ ಹಾಕಬೇಕು. ಈಗ ಮತದಾನ ನಡೆಯಲಿ. ನಾವು ತೀರ್ಮಾನಕ್ಕೆ ಒಪ್ಪಿಕೊಳ್ಳುತ್ತೇವೆ. ಇದು ವಿಫಲವಾಗಿ ಬಿದ್ದು ಹೋದರೂ ಹೋಗಲಿ.

ಅಧ್ಯಕ್ಷರು: ತಾವು 67ನೇ ಇಸವಿಯಿಂದ ಸದಸ್ಯರಾಗಿದ್ದೀರಿ. ಎಲ್ಲಾದರೂ ವರದಿಗಳನ್ನು ಓಟಿಗೆ ಹಾಕುವುದನ್ನು ಮಾಡುತ್ತಾರಾ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಸಾರ್, ಒಂದು ಇತಿಹಾಸ ನಿರ್ಮಾಣ ಆಗಲಿ.

ಅಧ್ಯಕ್ಷರು: ಒಳ್ಳೆಯ ಇತಿಹಾಸ ನಿರ್ಮಾಣ ಆಗಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಸಾರ್ ರೈತರ ಪರವಾಗಿ ಖಂಡಿತವಾಗಿ ಒಳ್ಳೆಯ ಇತಿಹಾಸ ನಿರ್ಮಾಣ ಆಗುತ್ತದೆ. ಸರ್ಕಾರಕ್ಕೆ ಒಂದು ಒಳ್ಳೆಯ ಎಚ್ಚರಿಕೆ ಕೊಟ್ಟ ಹಾಗೂ ಆಗುತ್ತದೆ. ಇವರು ರೈತರ ಬಗ್ಗೆ ತಾತ್ಸಾರ ಮಾಡುತ್ತಿರುವ ಸಂದರ್ಭದಲ್ಲಿ ಸರಿಯಾದ ಎಚ್ಚರಿಕೆ ಕೊಡಬೇಕಾದರೆ ನಮ್ಮ ಕರ್ತವ್ಯ ನಾವು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಸಾರ್ ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಇಲ್ಲ. ಆತ್ಮಹತ್ಯೆ ಇತಿಹಾಸದಲ್ಲಿ ಆಗಿದೆ. ಅದೂ ಬೈರೇಗೌಡರು ಕೃಷಿ ಸಚಿವರಾಗಿದ್ದಾರೆ. ಅವರ ಬಗ್ಗೆ ಅಪಾರವಾದಂತಹ ಗೌರವ ಇದೆ. ಈಗ ಅದನ್ನು ಬದಲಾವಣೆ ಮಾಡಿಕೊಂಡಿಲ್ಲ. ಆದರೆ ನಿಮ್ಮ ಆಡಳಿತದಲ್ಲಿ ಈ ತರಹ ಬಂದು ಬಿಟ್ಟಿರಲ್ಲಾ ಹೇಗೆ? ನಾನು ಒಂದು ಇಂಚೂ ಬದಲಾವಣೆ ಮಾಡಿಕೊಳ್ಳುವುದಿಲ್ಲ. ಆದರೆ ಈ ಪರಿಸ್ಥಿತಿ ಬರಬಾರದು.

ಶ್ರೀ ಕೆ.ಎಸ್.ಈಶ್ವರಪ: ಆ ವಿಪ್ ಅವರು ಜಿಂದಾಲ್‌ಗೆ ಹೋಗಿ ಬಂದರೂ ಅವರ ನಂಬರ್ ಆಗುವುದಿಲ್ಲ. ಬಹಳ ಓಡಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ನೀವೆಲ್ಲರೂ ಸೇರಿ ಮಾಡಿದ್ದುದು ಏನು ಎಂದರೆ, ವಸಂತ ಬಂಗೇರರವರು ಒಂದು ಕಡೆ ನೆಮ್ಮದಿಯಿಂದ ಕೂರಲಾರದೆ ಇಡೀ ಸದನವನ್ನೆಲ್ಲಾ ಓಡಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಇನ್ನು ಹತ್ತು ನಿಮಿಷ ಆದರೆ ಅವರು ಎಲ್ಲರನ್ನೂ ಕರೆಯುತ್ತಾರೆ, ದಯವಿಟ್ಟು ಮತಕ್ಕೆ ಹಾಕಿ.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪ ಮೊಯಿಲಿಯವರು ಈ ಸದನದಲ್ಲಿ ಅತ್ಯಂತ ಹಿರಿಯ ಸದಸ್ಯರಲ್ಲಿ ಒಬ್ಬರು. ಬಹುಶಃ ಅವರು ಆರನೇ ಸಾರಿಗೆ ಈ ಸಭೆಗೆ ಚುನಾಯಿತರಾಗಿ ಬರುತ್ತಿದ್ದಾರೆ ಎಂದು ಹೇಳಿ ನಾನು ಭಾವಿಸಿದ್ದೇನೆ. ಅವರೂ ನಾನು ಒಂದೇ ಸಾರಿಗೆ ವಿಧಾನಸಭೆಗೆ ಪ್ರವೇಶ ಮಾಡಿದ್ದು 1972ರಲ್ಲಿ. ಅಲ್ಲಿಂದ ಆರು ಸಾರಿ ಚುನಾಯಿತರಾಗಿ ಇಲ್ಲಿ ಬಂದಿದ್ದಾರೆ. ಹಿರಿಯ ಸದಸ್ಯರು ಅವರು. ಸದನದಲ್ಲಿ ಅನೇಕ ಸಂದರ್ಭದಲ್ಲಿ ಚರ್ಚೆಯಲ್ಲಿ ಭಾಗವಹಿಸಿದಂತಹ ಸಂದರ್ಭದಲ್ಲಿ ಬಹಳ ಎತ್ತರದ ಮಟ್ಟಕ್ಕೆ ಅವರು ಭಾಗವಹಿಸಿದ್ದಾರೆ. ಅವರ ಸಲಹೆಗಳು, ವಾದ ಬಹಳ ಎತ್ತರದ ಮಟ್ಟಕ್ಕೆ ಹೋಗಿರತಕ್ಕದ್ದು ಸಹ ಹೌದು. ಅಂತಹದೇ ಒಂದು ವಾದವನ್ನು ಇವತ್ತೂ ಸಹ ಮಂಡಿಸಿದ್ದಾರೆ. ಇವತ್ತು ಯಾವುದೇ ಒಂದು ಸದನದ ವರದಿ ಕೊಟ್ಟರೆ, ಅದು ಈ ಸದನದ ತೀರ್ಮಾನ ಆಗುವುದಿಲ್ಲ. ನನ್ನ ಮಾಹಿತಿ ಪ್ರಕಾರ ಅದು ಸದನದ ತೀರ್ಮಾನ ಆಗುವುದಿಲ್ಲ. ಹಾಗಾದರೆ ಅನೇಕ ಘಟನೆಗಳನ್ನು ನಾನು ನೀಡಬಲ್ಲೆ. ನಾನು ಸರಿ ಸುಮಾರು ವಿರೋಧ ಪಕ್ಷದಲ್ಲಿದ್ದಾಗಲೆಲ್ಲಾ ಸಹ ಗಮನಿಸಿದ್ದೇನೆ. ನಾನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ ಸಹ ಸದಸ್ಯನಾಗಿದ್ದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ ನಾನೇ ಸದಸ್ಯನಾಗಿರತಕ್ಕ ಸಮಿತಿಯ ವರದಿಯಲ್ಲಿ ಕೆಲವರ ಮೇಲೆ ಕ್ರಿಮಿನಲ್ ಕಂಪ್ಲೈಂಟ್ ಹಾಕಬೇಕೆಂದು ತೀರ್ಮಾನ ಆಗಿದೆ.

ಅಧ್ಯಕ್ಷರು: ಮತದಾನದ ಪ್ರಶ್ನೆ ಬರುವುದಿಲ್ಲ ಬಿಡಿ. ಇದು 6ರ ನಿಯಮದಡಿಯಲ್ಲಿ ಅವರು ನೋಟೀಸ್ ಕೊಟ್ಟರು. 69ರ ನಿಯಮಕ್ಕೆ ಕನ್‌ವರ್ಟ್ ಮಾಡಿದ್ದೇವೆ. ಡಿಸ್ಕರಷನ್ಸ್ ಆಗುತ್ತದೆ. ಆದ್ದರಿಂದ ಓಟಿಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾನು ಏನು ಹೇಳುತ್ತೇನೆ ಎಂದರೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): 69ರ ನಿಯಮದ ಕೆಳಗೆ ಆದರೂ ಕೂಡ ಸಾರ್ವಜನಿಕ ಮಹತ್ವದ ವಿಷಯ ಇದೆ. ಸಾರ್ವಜನಿಕ ಮಹತ್ವದ ವಿಚಾರವನ್ನು ಅವರು ಪ್ರಸ್ತಾಪ ಮಾಡಿದರೆ ನಿಲುವಳಿ ಸೂಚನೆ ಎಂದೂ ಸಹ ತಾವು ಪರಿವರ್ತನೆ ಮಾಡಲಿಲ್ಲ. 69ನೇ ವಿಧಿಯಲ್ಲಿ ತಾವು ತೆಗೆದುಕೊಂಡಿದ್ದೀರಿ. 69ನೇ ವಿಧಿಯನ್ನು ಇಲ್ಲಿ ಕೂಡ ಕಂಪ್ಲೈ ಮಾಡಿಲ್ಲ. ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಯಾರಾದರೂ ಸದಸ್ಯರು ಅವರು ಚರ್ಚೆಗೆ ತರಬೇಕೆಂದಿರುವ ವಿಷಯವನ್ನು ಸ್ಪಷ್ಟವಾಗಿಯೂ ಮತ್ತು ನಿರ್ದಿಷ್ಟವಾಗಿ ನಮೂದಿಸಿರುವ ಬರಹದ ಮೂಲಕ ಸೂಚನೆಯನ್ನು ಕಾರ್ಯದರ್ಶಿಯವರಿಗೆ

ಕೊಡಬಹುದು. ಅಲ್ಲದೇ ಆ ಸೂಚನೆ ಒಂದಿಗೆ ಆ ವಿಷಯದ ಸಂಬಂಧದಲ್ಲಿ ಚರ್ಚೆ ನಡೆಸಲು ಇರುವ ಕಾರಣಗಳನ್ನು ನಮೂದಿಸಿರುವ ವಿವರಣಾತ್ಮಕ ಟಿಪ್ಪಣಿಯನ್ನು ಸಹ ಕಳುಹಿಸಬೇಕು. ಅಷ್ಟೇ ಅಲ್ಲದೇ ಆ ಸೂಚನೆಗೆ ಕನಿಷ್ಟ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ಇದು ಯಾವುದೂ ಆಗಿಲ್ಲ. 69ರ ನಿಯಮದಲ್ಲಿ ಕೂಡ ಆಗಿಲ್ಲ.

ಅಧ್ಯಕ್ಷರು: ಅದು ಅಂಡರ್‌ಸ್ಟುಡ್. ರೂಲ್ 60ರ ಪ್ರಕಾರ ಅವರು ನೋಟೀಸ್ ಕೊಟ್ಟರು. ನಾವು ಕನ್‌ವರ್ಟ್ ಮಾಡಿದಾಗ whatever material they have produced to be taken up under Rule 60, that gets converted. 69ರ ನಿಯಮಕ್ಕೆ ನಾವು ಪರಿವರ್ತನೆ ಮಾಡಿದಾಗ ಡಿಸ್ಕಷನ್‌ಗೆ ಅವಕಾಶ ಇರುತ್ತದೆ. ಓಟಿಂಗ್ ಅವಕಾಶ ಇರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಓಟಿಂಗ್ ಇರುವುದಿಲ್ಲ ಅದೊಂದು. ಈ 69ರ ನಿಯಮಾವಳಿಯನ್ನು ಸಹ ಕಂಪ್ಲೈ ಮಾಡಿಲ್ಲ. ನಿಯಮಾವಳಿ 69ರ ಪ್ರಕಾರ ಚರ್ಚೆ ಆಗಿದೆ

ಅಧ್ಯಕ್ಷರು: ನಿಯಮ 60ಕ್ಕೆ ಅವಕಾಶ ಏನು ಕೊಟ್ಟಿರುತ್ತಾರೆ, when I convert it under Rule 69, automatically, the same material is made use of. That is not a problem. ನಾನು ಏನು ಹೇಳುತ್ತೇನೆ ಎಂದರೆ appeal to the government is that ನಾವು ಈ ಟೆಕ್ನಿಕ್ಯಾಲಿಟೀಸ್ ಬಗ್ಗೆ ಚರ್ಚೆ ಮಾಡುವುದು ಬೇಡ. They have again emphasised. ಯಾವ ವಿಚಾರಗಳು ಬಹಳ ಪ್ರಮುಖವಾಗಿದ್ದಾವೆ. ವರದಿಯಲ್ಲಿ ಪ್ರಸ್ತಾಪ ಮಾಡಿರತಕ್ಕದ್ದರ ಬಗ್ಗೆ ನಾಲ್ಕು ದಿವಸ ಆಗಿದೆ - ವರದಿ ಕೊಟ್ಟು ಎಂದು ಹೇಳಿ ಬಹಳ ಗಂಭೀರವಾದಂತಹ ಕೆಲವು ವಿಚಾರಗಳನ್ನು ಹೇಳಿದ್ದಾರೆ. ದಯಮಾಡಿ ನೀವೇನಾದರೂ ಸರ್ಕಾರದವರು ಅದಕ್ಕೆ ಉತ್ತರ ಹೇಳುತ್ತಿದ್ದರೆ ಹೇಳಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ತತ್‌ಕ್ಷಣವಾಗಿ ಎರಡು ಜಿಲ್ಲೆಗಳಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ನಾವು ಏನಾದರೂ ಪರಿಹಾರ ಕೊಡಬೇಕು ಎಂದು ಹೇಳಿದ್ದಾರೆ. ಎರಡೂ ಜಿಲ್ಲೆಗಳಲ್ಲಿ ನಾವು ಪರಿಹಾರ ಕೊಡುವುದಕ್ಕೆ ಪ್ರಾರಂಭ ಮಾಡಿದರೆ 132.45 ಕೋಟಿ ರೂಪಾಯಿ ಬೇಕಾಗುತ್ತದೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆ. ಮಧ್ಯ ಮಧ್ಯೆ ಬಿಜಾಪುರ ಜಿಲ್ಲೆ ಹಾಗೂ ಇತರೆ ಜಿಲ್ಲೆಗಳೂ ಸೇರುತ್ತವೆ. ಹೀಗೆ ಎಲ್ಲಾ ಜಿಲ್ಲೆಗಳೂ ಸೇರುತ್ತದೆ. ಅದರಿಂದಲೇ ಸುಮಾರು 300 ಕೋಟಿ ರೂಪಾಯಿ ಬೇಕಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿರತಕ್ಕದ್ದು. ಅದರ ಜೊತೆಗೇ ನಾನು ಹೇಳಿರತಕ್ಕದ್ದು ಇದು ಬಜೆಟ್ ಅಧಿವೇಶನ. ಈ ಬಜೆಟ್ ಅಧಿವೇಶನದಲ್ಲಿ ಎಲ್ಲಾ ಇಲಾಖೆಗಳ ಬೇಡಿಕೆಗಳೂ ಕೂಡ ಚರ್ಚೆಗೆ ಬರುತ್ತಿದ್ದಾವೆ. ಮತ್ತು ಈ ಸದನದ ಒಪ್ಪಿಗೆ ಕೂಡ ಆಗಬೇಕಾಗಿದೆ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನಮಗೆ ಆದಾಯ ಏನು ಇದೆ? ಖರ್ಚು ಏನು ಇದೆ?

ಅಧ್ಯಕ್ಷರು: ಒಂದು ಕೆಲಸ ಮಾಡೋಣ. ಒಂದು ಸ್ವಲ್ಪ ಹೊತ್ತು ಸದನವನ್ನು ಮುಂದೆ ಹಾಕಿ ನಮ್ಮ ಕಛೇರಿಯಲ್ಲಿ ಕುಳಿತು ಕಾಫಿ ಕುಡಿದು ಬರೋಣ. ನಾವು ನೀವು ಎಲ್ಲರೂ ಸೇರಿ ಚರ್ಚೆ ಮಾಡೋಣ.

MR. SPEAKER: Let us adjourn the House for 10 or 15 minutes. Let the Hon'ble Leader and the Deputy Chief Minister also come back. That enables us to hold discussions amongst yourselves. It may help.

ಶ್ರೀ ಸಿ.ಎಸ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚೇತಕರು ಕಾಣಿಸುತ್ತಿಲ್ಲ, ಅವರ ಬಗ್ಗೆ ವಿಚಾರ ಮಾಡಬೇಕು.

ಅಧ್ಯಕ್ಷರು: ಈಗ ಸದನವನ್ನು 30 ನಿಮಿಷಗಳ ಕಾಲ ಮುಂದೂಡಿ ಆನಂತರ ನಾವು ನೀವೆಲ್ಲರೂ ಚರ್ಚೆ ಮಾಡಿ ಮತ್ತೆ ಸಮಾವೇಶಗೊಳ್ಳೋಣ.

ಶ್ರೀ ಸಿ.ಎಸ್.ಸಗೀರ್ ಅಹಮದ್: ಮಾತುಕತೆಯಲ್ಲಿ ತೀರ್ಮಾನವಾಗದಿದ್ದರೆ ನಾವು ಇಲ್ಲೇ ಇರಲು ಜಮಖಾನವನ್ನು ತಾವು ಒದಗಿಸಿಕೊಡಲು ಏರ್ಪಾಡು ಮಾಡಬೇಕು.

ಅಧ್ಯಕ್ಷರು: ಈಗ ಸದನವನ್ನು 30 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ. ಸದನವು 30 ನಿಮಿಷಗಳ ನಂತರ ಸೇರುವುದು.

(ಸದನವು 5.40ಕ್ಕೆ ಮುಂದೂಡಲ್ಪಟ್ಟು ಮತ್ತೆ 30 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು.)

(ಸದನವು ಪುನಃ 6-25ಕ್ಕೆ ಪುನಃ ಸಮಾವೇಶಗೊಂಡಿತು.)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಈಗ ಸಭೆಯನ್ನು ನಾಳೆಗೆ ಮುಂದೂಡೋಣ. ಮಾತುಕತೆ ಪೂರ್ಣಗೊಳ್ಳದಿದ್ದರಿಂದ ನಾಳೆಗೆ ಸದನವನ್ನು ಮುಂದೂಡಿ ನಾಳೆ ಚರ್ಚೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ನಮ್ಮ ಜೊತೆಯಲ್ಲಿ ಇರುತ್ತಾರೆಂದರೆ ಬೇಕಾದರೆ ರಾತ್ರಿಯೆಲ್ಲಾ ಚರ್ಚೆ ಮಾಡೋಣ.

ಅಧ್ಯಕ್ಷರು: ಇವತ್ತು ಬೇಡ, ನಾಳೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ನಮ್ಮ ಜೊತೆಯಲ್ಲಿ ಇರುತ್ತೇವೆಂದರೂ ಅಧ್ಯಕ್ಷರು ಇರುವುದಿಲ್ಲವಲ್ಲ.

ಅಧ್ಯಕ್ಷರು: ಈವತ್ತು ಆಗುವುದಿಲ್ಲ. ಅವರುಗಳಿಗೆ ಬೇರೆ ಕೆಲಸವಿದೆ. ನಾಳೆ ಚರ್ಚೆ ಮಾಡೋಣ. ಆದ್ದರಿಂದ ದಯಮಾಡಿ ಇವತ್ತು ಸಭೆಯನ್ನು ಮುಕ್ತಾಯ ಮಾಡಿ ನಾಳೆಗೆ ಮುಂದೂಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಗಬಹುದು.

ಅಧ್ಯಕ್ಷರು: ಇಲ್ಲಿಗೆ ಸಭೆಯು ಮುಕ್ತಾಯಗೊಳ್ಳುತ್ತದೆ, ಮತ್ತೆ ನಾಳೆ ಬೆಳಿಗ್ಗೆ 10-30ಕ್ಕೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6-30ಕ್ಕೆ ಮುಕ್ತಾಯಗೊಂಡಿತು, ಮತ್ತೆ ದಿನಾಂಕ: 28ನೇ ಮಂಗಳವಾರ, ಏಪ್ರಿಲ್ 1998ರ ಬೆಳಿಗ್ಗೆ 10-30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು.)

ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸರಕಾರಿ ಶಾಖಾ ಮುದ್ರಣಾಲಯ, ಧಾರವಾಡ